# ವಿಕೇಂದ್ರೀಕರಣ ಮತ್ತು ಗ್ರಾಮಪಂಚಾಯತ್

## ಕನ್ನಡ ಪ್ರಜ್ಞೆಯನ್ನು ವಿಶ್ವಪ್ರಜ್ಞೆಯಾಗಿಸುವತ್ತ

ಸಾವಿರಾರು ವರ್ಷಗಳ ಸುದೀರ್ಘ ಮತ್ತು ಉಜ್ವಲ ಸಾಂಸ್ಕೃತಿಕ ಪರಂಪರೆಯನ್ನು ಹೊಂದಿರುವ ಕರ್ನಾಟಕದ ಆಧುನಿಕ ಇತಿಹಾಸದಲ್ಲಿ ಕರ್ನಾಟಕದ ಏಕೀಕರಣ ಒಂದು ಐತಿಹಾಸಿಕವೂ ಮತ್ತು ಮಹತ್ವಪೂರ್ಣವೂ ಆದ ವಿಶಿಷ್ಟ ಘಟನೆ. ಹಾಗೆಯೇ ಕನ್ನಡ ವಿಶ್ವವಿದ್ಯಾಲಯದ ಸ್ಥಾಪನೆ ಮತ್ತೊಂದು ಮಹತ್ವದ ಐತಿಹಾಸಿಕ ಘಟನೆ. ಕರ್ನಾಟಕದ ಇತರೆ ವಿಶ್ವವಿದ್ಯಾಲಯಗಳು ಕೇವಲ ಕೆಲವು ಜಿಲ್ಲೆಗಳಿಗೆ ಮಾತ್ರ ಪರಿಮಿತಗೊಂಡಿದ್ದರೆ ಕನ್ನಡ ವಿಶ್ವವಿದ್ಯಾಲಯದ ವ್ಯಾಪ್ತಿ ಅಖಂಡ ಕರ್ನಾಟಕ ಮಾತ್ರವಲ್ಲದೆ ಕನ್ನಡಿಗ ಮತ್ತು ಕನ್ನಡ ಸಂಸ್ಕೃತಿ ನೆಲೆಸಿರುವ ಎಲ್ಲ ದೇಶ ಮತ್ತು ವಿದೇಶಗಳನ್ನೂ ಒಳಗೊಂಡಿದೆ. ಈ ಕಾರಣದಿಂದ ನಮ್ಮ ವಿಶ್ವವಿದ್ಯಾಲಯದ ದಾರಿ ಮತ್ತು ಗುರಿ ಎರಡೂ ವಿಭಿನ್ನವೂ ಮತ್ತು ವೈಶಿಷ್ಟ ಪೂರ್ಣವೂ ಆಗಿವೆ.

ಕನ್ನಡ ವಿಶ್ವವಿದ್ಯಾಲಯ ಕನ್ನಡನಾಡು, ನುಡಿ, ಸಂಸ್ಕೃತಿ ಮತ್ತು ಜನಜೀವನ ಸರ್ವ ಮುಖಗಳ ವಿಶಿಷ್ಟವಾದ ಅಂತರಂಗ ಮತ್ತು ಬಹಿರಂಗ ಸಂಪತ್ತನ್ನು ಕುರಿತು ಅಧ್ಯಯನ ಮಾಡುವ, ಸಂಶೋಧಿಸುವ ಮತ್ತು ಅದರ ಅಧ್ಯಯನದ ಫಲಿತಗಳನ್ನು ಜಗತ್ತಿನಾದ್ಯಂತ ಪ್ರಸಾರ ಮಾಡಿ ಕರ್ನಾಟಕದ ಬಗೆಗಿನ ಅರಿವನ್ನು ಜನಸಮುದಾಯದಲ್ಲಿ ವಿಸ್ತರಿಸುವ ಹಾಗೂ ಅನಂತಮುಖಿಯಾದ ವಿಶ್ವಜ್ಞಾನವನ್ನು ಕನ್ನಡ ಜ್ಞಾನವನ್ನಾಗಿ ಪರಿವರ್ತಿಸಿ ಅದು ಕನ್ನಡಿಗರೆಲ್ಲರಿಗೆ ದಕ್ಕುವಂತೆ ಮಾಡುವ ಮೂಲಭೂತ ಆಶಯದ ಪ್ರತಿನಿಧಿಯಾಗಿ ಸ್ಥಾಪಿತಗೊಂಡಿದೆ. ಬೋಧನೆಗಿಂತ ಸಂಶೋಧನೆ, ಸೃಷ್ಟಿಗಿಂತ ವಿಶ್ವಂಭರ ದೃಷ್ಟಿ, ಶಿಥಿಲ ವಿವರಣೆಗಿಂತ ಅತುಳ ಸಾಧ್ಯತೆಗಳನ್ನೊಳಗೊಂಡ ಅನನ್ಯ ಅಭಿವ್ಯಕ್ತಿ. ನಾಡಿನ ಕೋಟಿಕೋಟಿ ಶ್ರೀಸಾಮಾನ್ಯರ ವಿವಿಧ ಪ್ರತಿಭಾಶಕ್ತಿ ಮತ್ತು ಸಾಮರ್ಥ್ಯಗಳ ಸದ್ಬಳಕೆಯ ಮೂಲಕ ಅವರ ಅಂತಃಪ್ರಜ್ಞೆಯನ್ನು ಎಚ್ಚರಿಸುವ, ವಿಕಸಿಸುವ ಶ್ರದ್ಧಾನ್ವಿತ ಕಾಯಕ ಇದರ ದಾರಿಯಾಗಿದೆ.

ಕನ್ನಡನಾಡನ್ನು ಕನ್ನಡ ವಿಶ್ವವಿದ್ಯಾಲಯದಲ್ಲಿ ನೋಡು. ಕನ್ನಡ ವಿಶ್ವವಿದ್ಯಾಲಯವನ್ನು ನೋಡಿದಲ್ಲದೆ ಕನ್ನಡನಾಡಿನ ಯಾತ್ರೆ ಸಂಪೂರ್ಣವಾಗದು, ಸಾರ್ಥಕವಾಗದು ಎಂಬಂತೆ ರೂಪುಗೊಳ್ಳುತ್ತಿರುವ ಮತ್ತು ರೂಪುಗೊಳ್ಳಬೇಕಾದ ಮಹಾಸಂಸ್ಥೆ ಇದು. ಕನ್ನಡ ಪ್ರಜ್ಞೆ ತನ್ನ ಸತ್ವ ಮತ್ತು ಸ್ವತ್ವದೊಡನೆ ವಿಶ್ವಪ್ರಜ್ಞೆಯಾಗಿ ಅರಳಿ ನಳನಳಿಸಬೇಕು; ವಿಶ್ವಪ್ರಜ್ಞೆ ಕನ್ನಡ ದೇಶೀಪ್ರಜ್ಞೆಯೊಳಗೆ ಪ್ರವೇಶಿಸಿ, ಪ್ರವಹಿಸಿ, ಸಮನ್ವಯಗೊಂಡು, ಸಂಲಗ್ನಗೊಂಡು, ಸಮರಸಗೊಂಡು ಸಾಕ್ಷಾತ್ಕಾರಗೊಳ್ಳಬೇಕು ಎಂಬುದೇ ಇದರ ಗುರಿ. ಈ ಗುರಿಯ ಮೂಲಕ ಕನ್ನಡ ಕರ್ನಾಟಕತ್ವದ ಉಸಿರಾಗಿ, ವಿಶ್ವಪ್ರಜ್ಞೆಯ ಹಸಿರಾಗಿ, ಕನ್ನಡಮಾನವ ವಿಶ್ವಮಾನವನಾಗಿ ಬೆಳೆಯಲು ಸಾಧನವಾಗಬೇಕು. ಕನ್ನಡಿಗರೆಲ್ಲರ ಸಾಮೂಹಿಕ ಶ್ರಮ ಮತ್ತು ಪ್ರತಿಭೆಗಳ ಸಮಷ್ಟಿ ಪ್ರಕ್ರಿಯೆಯಿಂದ ಬೆಳಕಿನ ಈ ಮಹಾ ಪಥವನ್ನು ಕ್ರಮಿಸುವುದು ನಮ್ಮ ವಿಶ್ವ ವಿದ್ಯಾಲಯದ ಮಹತ್ತರ ಆಶಯ.

ನಾಗಾಲೋಟದಿಂದ ಕ್ರಮಿಸುತ್ತಿರುವ ಜಗತ್ತಿನ ವ್ಯಾಪಕ ಜ್ಞಾನ, ತಂತ್ರಜ್ಞಾನ ಮತ್ತು ವಿಜ್ಞಾನಗಳ ಶೋಧನೆ ಮತ್ತು ಚಿಂತನೆಗಳನ್ನು ಕನ್ನಡದಲ್ಲಿ ಸತ್ವಪೂರ್ಣವಾಗಿ ದಾಖಲಿಸಿ ಕನ್ನಡ ಓದುಗರ ಜ್ಞಾನವನ್ನು ವಿಸ್ತರಿಸಿ ಅವರಲ್ಲಿ ಪುಸ್ತಕ ಸಂಸ್ಕೃತಿಯನ್ನು ಪ್ರಸರಿಸುವ ವಿಸೇಷ ಹೋಣೆಯನ್ನು ಹೊತ್ತು ನಮ್ಮ ವಿಶ್ವವಿದ್ಯಾಲಯದ ಪ್ರಸಾರಾಂಗ ಅಸ್ತಿತ್ವಕೆ ಬಂದಿದೆ. ಶ್ರವ್ಯ, ದೃಶ್ಯ ಮತ್ತು ವಾಚನ ಸಾಮಗ್ರಿಗಳ ಸಮರ್ಪಕ ಉತ್ಪಾದನೆ ಮತ್ತು ವಿತರಣಾ ಪ್ರಕ್ರಿಯೆಗಳ ಮೂಲಕ ಇದು ಈ ಗುರಿಯನ್ನು ತಲುಪಲು ಶಕ್ತಿಮೀರಿ ಪ್ರಯತ್ನಸುತ್ತಿದೆ. ಈಗಾಗಲೇ ೬೦೦ಕ್ಕೂ ಹೆಚ್ಚು ವೈವಿಧ್ಯಮಯ ಮತ್ತು ವೈಶಿಷ್ಟ್ಯಮಯ ಕೃತಿಗಳ ಮೂಲಕ ಕನ್ನಡ ಗ್ರಂಥಲೋಕದ ಅಂತರಂಗ ಮತ್ತು ಬಹಿರಂಗ ಸೌಂದರ್ಯಗಳನ್ನು ಉಜ್ವಲಿಸಿರುವ ಇದು ತನ್ನ ಮುಂದಿನ ಗುರಿಯ ಕಡೆಗೆ ಆಶಾದಾಯಕವಾಗಿ ಚಲಿಸುತ್ತಿದೆ.

ಅಧಿಕಾರದ ಎಲ್ಲಾ ಹಂತಗಳನ್ನು ವ್ಯವಸ್ಥೆಗಳನ್ನು ಒಬ್ಬನೇ ವ್ಯಕ್ತಿ ಅಥವಾ ಒಂದೇ ಸಂಸ್ಥೆ ಸಮಗ್ರವಾಗಿ ತನ್ನ ಹಿಡಿತದಲ್ಲಿ ಇಟ್ಟುಕೊಂಡು ನಿಯಂತ್ರಿಸುವುದು ಕೇಂದ್ರೀಕೃತ ವ್ಯವಸ್ಥೆ. ಈ ಕೇಂದ್ರೀಕೃತ ಅಧಿಕಾರವನ್ನು ಅಥವಾ ಕಾರ್ಯಭಾರವನ್ನು ಬೇರೆ ಬೇರೆ ಶ್ರೇಣಿಗಳಲ್ಲಿ, ಹಂತಗಳಲ್ಲಿ, ವ್ಯಕ್ತಿಗಳಲ್ಲಿ ಹಂಚಿ ಆ ಮಾಧ್ಯಮಗಳಲ್ಲಿಯೂ ಸ್ವತಂತ್ರವಾಗಿ, ಸಮರ್ಪಕವಾಗಿ ಕಾರ್ಯ ನಿರ್ವಹಿಸುವಂತೆ ನೋಡಿಕೊಳ್ಳುವುದು ವಿಕೇಂದ್ರೀಕರಣ ವ್ಯವಸ್ಥೆ. ಕೇಂದ್ರೀಕರಣವು ಸಾಮ್ರಾಜ್ಯಶಾಹಿ ವ್ಯವಸ್ಥೆಯ ಪ್ರಮುಖ ನೆಲೆಯಾದರೆ ವಿಕೇಂದ್ರೀಕರಣವು ಪ್ರಜಾಪ್ರಭುತ್ವ ವ್ಯವಸ್ಥೆಯ ಗುಣಾತ್ಮಕ ಕಾರ್ಯ ನಿರ್ವಹಣಾ ವಿಧಾನ. ಕೇಂದ್ರೀಕರಣ ವ್ಯವಸ್ಥೆಯಲ್ಲಿ ಉಂಟಾಗುವ ಒಳಿತು ಕೆಡಕುಗಳಿಗೆ ಎಲ್ಲ ಅಧಿಕಾರವನ್ನು ತನ್ನಲ್ಲಿ ಕೇಂದ್ರೀಕರಿಸಿಕೊಂಡ ವ್ಯಕ್ತಿ ಅಥವಾ ವ್ಯವಸ್ಥೆ ಕಾರಣವಾದರೆ ವಿಕೇಂದ್ರೀಕರಣ ವ್ಯವಸ್ಥೆ ಸಮಗ್ರ ಸ್ವರೂಪದ ಅರಿವು, ಅಧ್ಯಯನ, ಕಾರ್ಯತಂತ್ರ ಯೋಜನೆ, ಸಮಸ್ತ ಕಲ್ಯಾಣ ದೃಷ್ಟಿ, ನಿಕಟ ಮತ್ತು ಸೂಕ್ಷ್ಮ ಪರಿಶೀಲನೆ ಹಾಗೂ ಅವುಗಳ ಮೂಲಕ ಗರಿಷ್ಠ ಪ್ರಮಾಣದಲ್ಲಿ ಜನ ಸಮುದಾದ ಒಳಿತನ್ನು ಸಾಧಿಸಿವ ಬಹುಮುಖಿ ವ್ಯವಸ್ಥೆ. ಸ್ವತಂತ್ರ ಪೂರ್ವದಲ್ಲಿ ಭಾರತದಲ್ಲಿ ತೃಣಮೂಲವಾಗಿದ್ದ ರಾಜಶಾಹಿ ಅಥವಾ ಸಾಮ್ರಾಜ್ಯಶಾಹಿ ವ್ಯವಸ್ಥೆಯಲ್ಲಿ ರಚನೆಗೊಂಡ ಅಧಿಕಾರ ಕೇಂದ್ರೀಕರಣ ಪ್ರಕ್ರಿಯೆ ಮುಖ್ಯವಾಗಿದ್ದರೆ, ಸ್ವಾತಂತ್ರ್ಯೋತ್ತರ ಭಾರತ ರಾಜ್ಯಗಳಿಗೆ, ರಾಜ್ಯಗಳಿಂದ ಸೂಕ್ತ ಕಾರ್ಯ ನಿರ್ವಹಣೆಗೆ ಜನಸತ್ತಾತ್ಮಕ ವಿಧಾನದಲ್ಲಿ ರೂಪಿಸಲಾದ ಅಧಿಕಾರ ಮತ್ತು ಸೇವಾ ಕಾರ್ಯ ವಿಕೇಂದ್ರೀಕರಣ ಮೂಲವಾಗಿದೆ.

ಸದುದ್ದೇಶದ ಸಮಷ್ಟಿ ದಕ್ಷತೆಯಲ್ಲಿ ಹಾಗೂ ಕಾರ್ಯ ವಿಧಾನದಲ್ಲಿ ನಂಬಿಕೆಯುಳ್ಳ ಜನಕಲ್ಯಾಣ ಕಾರ್ಯಗಳ ವಿನಿಯೋಜನೆ ಮುಖ್ಯವಾಗಿರುತ್ತದೆ. ಪ್ರಜಾಪ್ರಭುತ್ವ ರಹಿತವಾದ ಕೇಂದ್ರೀಯ ವ್ಯವಸ್ಥೆಯಲ್ಲಿಯೂ ಉತ್ತಮ ಕಾರ್ಯನಿರ್ವಹಣೆ ಸಾಧ್ಯವಾಗಬಹುದಾದರೂ ಅದು ವ್ಯಕ್ತಿಯೊಬ್ಬನ ಅಥವಾ ಸಂಸ್ಥೆಯೊಂದರ ಇಷ್ಟಾನಿಷ್ಟಗಳನ್ನು ಅವಲಂಬಿಸಿರುತ್ತದೆ. ಆದರೆ ಪ್ರಜಾಪ್ರಭುತ್ವ ಸರ್ಕಾರದ ವಿಕೇಂದ್ರೀಕರಣ ಯೋಜನೆಯಲ್ಲಿ ಎಷ್ಟೇ ಲೋಪದೋಷಗಳಿದ್ದರೂ ಅವು ಜನಮುಖಿ ಆಭ್ಯುದಯಾಕಾಂಕ್ಷೆಯನ್ನು ಹೊಂದಿರುತ್ತದೆ ಮತ್ತು ಹೊಂದಿರಬಹುದಾಗಿದೆ ಎಂಬುದು ಪ್ರಧಾನ ಕಾಳಜಿಯಾಗಿರುತ್ತದೆ. ಮಾತ್ರವಲ್ಲ ಅಂತಿಮವಾಗಿ ಒಳಿತಾಗಲೀ ಅಥವಾ ಕೆಡಕಾಗಲೀ, ಅದಕ್ಕೆ ತಾವೆಲ್ಲ ಜವಾಬ್ದಾರರು ಎನ್ನುವ ವೈಯಕ್ತಿಕ ಭಾಗಿದಾರಿಕೆ ಈ ವಿಕೇಂದ್ರೀಕರಣ ವ್ಯವಸ್ಥೆಯಲ್ಲಿ ಅತ್ಯಂತ ಪ್ರಧಾನವಾದುದಾಗಿದೆ. ಎಲ್ಲ ಸಮಸ್ಯೆಗಳಿಗೂ ವಿಕೇಂದ್ರೀಕರಣವೇ ಪೂರ್ಣ ಪ್ರಮಾಣದ ಮದ್ದಲ್ಲವಾದರೂ ಸುಶಿಕ್ಷಿತ ಸದುದ್ದೇಶಪೂರ್ಣ ಹಾಗೂ ಸೇವಾಕಾಂಕ್ಷೆಗಳ ನಿರ್ವಹಣೆ ಇದ್ದಲ್ಲಿ ಇದು ಅತ್ಯುತ್ತಮ ವ್ಯವಸ್ಥೆ ಎಂಬುದು ವಿವಾದಿತವಲ್ಲ. ವಿಕೇಂದ್ರೀಕರಣದಿಂದಾಗಿ ಬೇರೆ ಬೇರೆ ಹಂತಗಳಲ್ಲಿ ನಾಯಕತ್ವವೂ, ಸಮರ್ಥ ಆಡಳಿತ ತಂತ್ರವೂ, ವಿಷಯ ತಜ್ಞತೆಯೂ, ಸ್ಥಳೀಯ ವಲಯ ನಿಷ್ಠೆಯೂ, ಸ್ವತಂತ್ರ ಚಿಂತನಶೀಲತೆಯೂ ಬೆಳೆಯುವುದಕ್ಕೆ ವಿಪುಲವಾದ ಅವಕಾಶಗಳಿವೆ. ಪ್ರತಿಯೊಬ್ಬರ ಕಾರ್ಯಶೀಲನಾ ಬುದ್ಧಿಮತ್ತೆ, ಕಾರ್ಯನುಷ್ಠಾನಶೀಲತೆಗಳ ಪರೀಕ್ಷೆಯೂ ನಿರಂತರವಾಗಿ ನಡೆಯುವ ಕಾರಣದಿಂದಾಗಿ ಈ ವ್ಯವಸ್ಥೆಯಲ್ಲಿ ಪಾಲ್ಗೊಳ್ಳುವ ವ್ಯಕ್ತಿಗಳು ಹೆಚ್ಚು ಎಚ್ಚರ ಮತ್ತು ಜವಾಬ್ದಾರಿಯಿಂದ ಕಾರ್ಯನಿರ್ವಹಿಸಬೇಕಾದ ಆಗತ್ಯತೆ ಹೆಚ್ಚಾಗುತ್ತದೆ. ಇದು ವ್ಯಕ್ತಿಗಳ ವಿಕಸನಕ್ಕೆ ಕಾರ್ಯಪೂರ್ಣತೆಗೆ ಒಟ್ಟಾರೆಯಾಗಿ ಸಮಗ್ರ ಅಭಿವೃದ್ಧಿಗೆ ಇಂಬು ಕೊಡುವ ಸಾಧ್ಯತೆಗಳು ಹೆಚ್ಚಾಗುತ್ತವೆ. ಅತ್ಯಂತ ಎಚ್ಚರಿಕೆಯಿಂದ, ಪೂರ್ವ ಸಿದ್ಧತೆಯಿಂದ ಸಮಷ್ಟಿ ಚಿಂತನೆಯಿಂದ ಈ ವಿಕೇಂದ್ರೀಕರಣ ವ್ಯವಸ್ಥೆ ನಮ್ಮ ಅಸಮರ್ಪಕ ಆಡಳಿತಕ್ಕೆ ಶಕ್ತ ಉತ್ತರವಾಗುವ ಎಲ್ಲ ಸಾಧ್ಯತೆಗಳಿಗೆ. ಇಂತಹ ವಿಕೇಂದ್ರೀಕರಣ ವ್ಯವಸ್ಥೆಯಿಂದ ನಮ್ಮ ಜಿಲ್ಲಾ ಪಂಚಾಯತ್‌ಗಳಲ್ಲಿ, ಪಟ್ಟಣ ಪಂಚಾಯತ್‌ಗಳಲ್ಲಿ, ಗ್ರಾಮಪಂಚಾಯತ್‌ಗಳಲ್ಲಿ ನಿಧಾನವಾಗಿಯಾದರೂ ಆಗುತ್ತಿರುವ ಪರಿವರ್ತನೆಗಳನ್ನು ಗಮನಿಸಬಹುದಾಗಿದೆ.

ಅವಿದ್ಯಾವಂತರೆಂದು ಅಶಿಕ್ಷಿತರೆಂದು ಆಡಳಿತ ಸಾಮರ್ಥ್ಯ, ರಾಜಕೀಯ ಪ್ರಜ್ಞೆಯಿಲ್ಲದ ಮುಗ್ಧರೆಂದು ಭಾವಿಸಲಾಗಿದ್ದ, ಆ ಕಾರಣದಿಂದಲೇ ಆಡಳಿತದ ಮುಖ್ಯವಾಹಿನಿಯಿಂದ ದೂರವಾಗಿ ಉಳಿದು ರಾಮನಿಗೆ ರಾಜ್ಯ ಬಂದರೆ ರಾಗಿ ಬೀಸಿವುದು ತಪ್ಪಿತೇ ಎಂಬ ನಿರ್ಲಿಪ್ತ ಮನೋಧರ್ಮದಲ್ಲಿ ಪ್ರತಿಕ್ರಿಯೆರಹಿತರಾಗಿ ಬದುಕುತ್ತಿದ್ದ ಜಿಲ್ಲಾ ಮಟ್ಟದ, ಗ್ರಾಮ ಮಟ್ಟದ ಪುರುಷರು ಮತ್ತು ಸ್ತ್ರೀಯರು ಅನಿರೀಕ್ಷಿತವಾಗಿ ಮತ್ತು ಅಮಾನತ್ತಾಗಿ ಈ ವಿಕೇಂದ್ರೀಕರಣದಿಂದ ತಾವು ಹೊರಬೇಕಾಗಿ ಬಂದಿರುವ ಜವಾಬ್ದಾರಿಗಳ ಬಗ್ಗೆ ತಂತ್ರಕ್ಷೇತ್ರಗಳಲ್ಲಿ ತತ್ತರಿಸಿ ತಬ್ಬಿಬ್ಬಾದರೂ ಅನಂತರದ ವರ್ಷಗಳಲ್ಲಿ ಈ ಮುಗ್ಧತೆ, ಅಜ್ಞತೆ ಹಾಗೂ ಅಸಮರ್ಥಗಳು ಮರೆಯಾಗುತ್ತಾ ತಮ್ಮ ಕ್ಷೇತ್ರದ ಅಭಿವೃದ್ಧಿಗಳ ಬಗ್ಗೆ ಹೆಚ್ಚಿನ ಅರಿವನ್ನು ಪಡೆಯುತ್ತಿರುವುದು ವಿಕೇಂದ್ರೀಕರಣದ ಹಾಗೂ ಪ್ರಜಾಸತ್ತೆಯ ಉತ್ತಮ ಫಲಿತ

ಗೋಚರಿಸುತ್ತದೆ, ಮಾತ್ರವಲ್ಲದೆ ತಮ್ಮ ವೈಫಲ್ಯಗಳಿಗೆ ತಮ್ಮ ಪರಿಸರದ ಅಭಿವೃದ್ಧಿರಾಹಿತ್ಯಕ್ಕೆ ದೂರದ ಯಾರನ್ನೋ ದೂಷಿಸುತ್ತಾ ಕೈಕಟ್ಟಿ ಕುಳಿತಿದ್ದ ಜನತೆ ತಮ್ಮ ಸುತ್ತಮುತ್ತಣ ಪರಿಚಿತರ ಪ್ರಶ್ನೆಗಳಿಗೆ ತಾವೇ ಉತ್ತರ ಹೇಳಬೇಕಾದ ಅನಿವಾರ್ಯತೆ ಪ್ರಾಪ್ತವಾಗಿರುವುದರಿಂದ ಅವರ ಜವಾಬ್ದಾರಿ ಮಾತ್ರವಲ್ಲದೆ ಕಾರ್ಯಕ್ಷಮತೆಯು ಹೆಚ್ಚುತ್ತದೆ. ಆದ್ದರಿಂದ ಆರಂಬದ ಹಂತಗಳಲ್ಲಿ ವಿಕೇಂದ್ರೀಕರಣ ವ್ಯವಸ್ಥೆ ತಂದೊಡ್ಡಬಹುದಾದ ಕಾರ್ಯ ಕುಶಲತೆಯ ಅಭಾವದ ಸ್ವಸಮರ್ಥನದ ಅರಿವಿನ ಕೊರತೆಯ ಅಡೆತಡೆಗಳು ಕ್ರಮೇಣ ನಿವಾರಣೆಯಾಗಿ ಅವರು ಎಲ್ಲರೊಡನೆ ಸಮಾನ ಮನೋಧರ್ಮದಿಂದ ಬದುಕುವ ಸಾಧ್ಯತೆಗಳು ಹೆಚ್ಚಾಗುತ್ತವೆ. ಆದ್ದರಿಂದ ಎಷ್ಟೇ ಕೊರತೆಗಳಿದ್ದರೂ ವಿಕೇಂದ್ರೀಕರಣ ವ್ಯವಸ್ಥೆ ಇತ್ಯಾತ್ಮಕ ಫಲಗಳನ್ನು ನಿಧಾನವಾಗಿಯಾದರೂ ನೀಡುತ್ತವೆ.

ಮೇಲಿನ ಹಿನ್ನೆಲೆಯಲ್ಲಿ **ವಿಕೇಂದ್ರೀಕರಣ ಮತ್ತು ಗ್ರಾಮ ಪಂಚಾಯತ್** ಎಂಬ ಈ ಕಿರು ಹೊತ್ತಿಗೆ ಸ್ಥಳೀಯ ಸಂಸ್ಥೆಗಳ ಪದಾಧಿಕಾರಿಗಳಿಗೆ ಮತ್ತು ಗ್ರಾಮೀಣ ಜನತೆಗೆ ಇದರ ಅರಿವನ್ನು ಹೆಚ್ಚಿಸುವ ಮಾಹಿತಿಗಳನ್ನು ಒದಗಿಸಬಲ್ಲ ಕೃತಿಯಾಗಿದೆ. ಸಾಕಷ್ಟು ಅಧ್ಯಯನ ಮತ್ತು ಮಾಹಿತಿ ಸಂಗ್ರಹದ ಆಧಾರದ ಮೇಲೆ ರಚಿತವಾಗಿರುವ ಈ ಕೃತಿ ಗ್ರಾಮೀಣ ಸಮಾಜ ಮತ್ತು ಗ್ರಾಮೀಣಾಭಿವೃದ್ಧಿಯ ಬಗೆಗೆ ಉತ್ತಮ ಅರಿವನ್ನು ಉಂಟುಮಾಡಬಲ್ಲದಾಗಿದೆ. ಇದನ್ನು ಪರಿಶ್ರಮ ಪೂರ್ವಕವಾಗಿ ರಚಿಸಿಕೊಟ್ಟಿರುವ ಶ್ರೀ. ಎ. ಶ್ರೀಧರ ಅವರಿಗೆ ವಿಶ್ವವಿದ್ಯಾಲಯದ ಅಭಿನಂದನೆಗಳು ಸಲ್ಲುತ್ತವೆ.

**ಡಾ.ಎಚ್. ಜೆ. ಲಕ್ಕಪ್ಪಗೌಡ**
ಕುಲಪತಿಗಳು

# ಪ್ರಸ್ತಾವನೆ

ನಮ್ಮ ರಾಜಕೀಯ ವ್ಯವಸ್ಥೆಯಲ್ಲಿ ವಿಕೇಂದ್ರೀಕರಣ ಕುರಿತಂತೆ ಆಗಾಗ ಚರ್ಚೆಗಳು ಕೇಳಿಬರುತ್ತಿವೆ. ಈ ಪ್ರಕ್ರಿಯೆಯು ಹಂತ ನಿರ್ದಿಷ್ಟ ಮೂರ್ತರೂಪವನ್ನು ಪಡೆದುಕೊಂಡಿದೆ. ಇಂದು ವಿಕೇಂದ್ರೀಕರಣ ವ್ಯವಸ್ಥೆ ಪಂಚಾಯತ್‌ಗಳು ಸಾಂವಿಧಾನಿಕ ಗುರುತ್ವವನ್ನು ಪಡೆದಿವೆ. ಇದರಿಂದಾಗಿ ವಿಕೇಂದ್ರೀಕರಣದ ಆಶಯವು ಹೆಚ್ಚು ಗಟ್ಟಿಗೊಳ್ಳುತ್ತಿದೆ.

ಎಲ್ಲ ವಿಧದ ವಿಕೇಂದ್ರೀಕರಣವು ಪ್ರಜಾತಾಂತ್ರಿಕವಲ್ಲ. ಪ್ರಜಾಪ್ರಭುತ್ವವಿಲ್ಲದ ವ್ಯವಸ್ಥೆಯಲ್ಲೂ ಉತ್ತಮವಾಗಿ ಕೆಲಸ ನಿರ್ವಹಿಸುವ ವಿಕೇಂದ್ರೀಕೃತ ಯೋಜನೆಗಳಿವೆ. ವಿಕೇಂದ್ರೀಕರಣವು ರಾಜಕೀಯ, ಆಡಳಿತ ಅಥವಾ ಹಣಕಾಸಿನದಿರಬಹುದು. ಇವು ಮೂರು ಜೊತೆ ಜೊತೆಯಲ್ಲಿ ಕಾರ್ಯ ನಿರ್ವಹಿಸಬೇಕೆಂದಿಲ್ಲ.

ಉದಾರವಾದಿ ರಾಜಕೀಯ ಪಂಥದ ಪ್ರಮುಖ ಅಂಶವಾಗಿರುವ ವಿಕೇಂದ್ರೀಕರಣವು ಪ್ರಜಾತಾಂತ್ರಿಕ ವ್ಯವಸ್ಥೆಯಲ್ಲಿ, ಕೇಂದ್ರ ಹಾಗೂ ಸ್ಥಳೀಯ ಮಟ್ಟದಲ್ಲಿ ಸಹಕಾರಿಯಾಗಿದೆ ಎನ್ನಬೇಕು. ಕೇಂದ್ರಮಟ್ಟದಲ್ಲಿ ಇದು ರಾಜಕೀಯ ಶಿಕ್ಷಣ, ನಾಯಕತ್ವ ತರಬೇತಿ ಮತ್ತು ರಾಜಕೀಯ ಸ್ಥಿರತೆ ನೀಡಿದರೆ ಸ್ಥಳೀಯ ಹಂತದಲ್ಲಿ ಸಮಾನತೆ, ಸ್ವಾತಂತ್ರ್ಯ ಮತ್ತು ಹೊಣೆಗಾರಿಕೆ ಮುಂತಾದ ಮೌಲ್ಯಗಳನ್ನು ಇದು ನೀಡಬಹುದಾಗಿದೆ. ಹೀಗೆ (ಚುನಾಯಿತ ಮತ್ತು ಪ್ರಾತಿನಿಧ್ಯರೂಪದ) ಪ್ರಜಾತಾಂತ್ರಿಕ ವಿಕೇಂದ್ರೀಕರಣವು ಹೆಚ್ಚು ಪಾರದರ್ಶಕತೆ, ಉತ್ತರದಾಯಿತ್ವ, ಹೊಣೆಗಾರಿಕೆ, ಆಡಳಿತ ವೆಚ್ಚದ ಮೇಲೆ ಕಡಿವಾಣ, ಪರಿಶೀಲನೆ, ದಕ್ಷತೆ, ಸಮಾನತೆ ಮತ್ತು ಜನಸಹಭಾಗಿತ್ವಕ್ಕೆ ಅವಕಾಶವನ್ನೊದಗಿಸುತ್ತದೆ.

ವಿಕೇಂದ್ರೀಕರಣವು ಪದವನ್ನು ಹಲವು ರೀತಿಯಲ್ಲಿ ವ್ಯಾಖ್ಯಾನಿಸಬಹುದು. ಇದಕ್ಕೆ ಒಂದು ಸಾರ್ವತ್ರಿಕವಾಗಿ ಒಪ್ಪುವಂತಹ ಅರ್ಥ ವಿವವರಣೆಯನ್ನು ನೀಡುವುದು ಕಷ್ಟ ಸಾಧ್ಯ. 'ಡಿಸೆಂಟ್ರಲೈಸೇಶನ್' ಎಂಬ ಅಂಗ್ಲ ಪದದ ಮೂಲರೂಪವು ಲ್ಯಾಟಿನ್‌ನಿಂದ ಬಂದಂತಹದು. ಇದಕ್ಕೆ ಹಲವಾರು ಆರ್ಥವಿವರಣೆಗಳಿದ್ದರೂ ಎಲ್ಲವೂ 'ಕೇಂದ್ರದಿಂದ ದೂರವಾಗುವುದು' (away from the centre) ಎಂಬುದನ್ನು ಸೂಚಿಸುತ್ತದೆ. ವಿಕೇಂದ್ರೀಕರಣವೆಂದರೆ ಮೇಲಿನ ಹಂತದ ಸರಕಾರದಿಂದ ಕೆಳಹಂತದ ಶಾಸಕಾಂಗ, ಕಾರ್ಯಾಂಗ,

ನ್ಯಾಯಾಂಗ ಅಥವಾ ಆಡಳಿತಾಂಗಗಳಿಗೆ ಆಧಿಕಾರದ ವರ್ಗಾವಣೆಯಾಗುವಂತಹುದು. ಅಧಿಕಾರ ವಿಕೇಂದ್ರೀಕರಣವನ್ನು ವ್ಯವಸ್ಥೆಯ ಒಳಗೂ ಅಥವಾ ಹೊರಗಿನ ಸಂಘಟನೆಗಳೊಂದಿಗೂ ಮಾಡಬಹುದು. ಅಭಿವೃದ್ಧಿಶೀಲ ದೇಶಗಳಲ್ಲಿ ಯೋಜನೆ ಮತ್ತು ಆಡಳಿತವನ್ನು ವಿಕೇಂದ್ರಿತಗೊಳಿಸುವುದರ ಹಿಂದೆ ಹಲವು ಚಾಲಕ ಶಕ್ತಿಗಳು ಕೆಲಸಮಾಡಿವೆ ಎಂದು ಚೀಮಾ ಮತ್ತು ರೊಂಡಿನೆಲ್ಲಿ ತಿಳಿಸುತ್ತಾರೆ. ಅಂದರೆ ಕೇಂದ್ರ ಸರಕಾರದಿಂದ ಅದರ ಸಹಸಂಸ್ಥೆಗಳಿಗೆ, ಸ್ಥಳೀಯಾಡಳಿತ ಘಟಕಗಳಿಗೆ, ಅರೆಸ್ವಾಯತ್ತ ಮತ್ತಿತರ ಸಂಸ್ಥೆಗಳಿಗೆ, ಸ್ಥಳೀಯ ಸರಕಾರ ಮತ್ತು ಸರಕಾರೇತರ ಸಂಘಟನೆಗಳಿಗೆ ನಿರ್ಣಯ ನಿರೂಪಣಾ ಅಥವಾ ಯೋಜನೆಯ ವರ್ಗಾವಣೆಯೂ ಆಗಬಹುದು. ವಿಕೇಂದ್ರೀಕರಣವು ಯೋಜನೆ ರೂಪಿಸುವ ಅಧಿಕಾರ ಮತ್ತು ನಿರ್ಣಯ ನಿರೂಪಿಸುವ ಹಾಗೂ ಮುಖ್ಯವಾಗಿ ಸ್ವಾಯತ್ತತೆಯ ಪ್ರಮಾಣವನ್ನು ಅವಲಂಬಿಸಿರುತ್ತದೆ. (ಚೀಮಾ ಮತ್ತು ರೊಂಡಿನೆಲ್ಲಿ, ೧೯೮೩) ಅಮಿತಾವ್ ಮುಖರ್ಜಿಯವರು ಸಹ ಇದನ್ನೇ ಪ್ರತಿಪಾದಿಸಿದ್ದಾರೆ, ಒಟ್ಟಿನಲ್ಲಿ ವಿಕೇಂದ್ರಿತ ಸಂಸ್ಥೆಯ ಸ್ವಾಯತ್ತತೆಯೇ ಇದರ ಮೂಲ ತತ್ವ.

ಚೀಮಾ ಮತ್ತು ರೊಂಡಿನಲ್ಲಿ ನಾಲ್ಕು ವಿಧದ ವಿಕೇಂದ್ರೀಕರಣವನ್ನು ವಿವರಿಸುತ್ತಾರೆ:

೧. **(ಡಿಕಾನ್ಸಂಟ್ರೇಶನ್)** :- ಸರಕಾರದ ಮಂತ್ರಿಮಂಡಲ ಅಥವಾ ಪಾರುಪತ್ಯದಲ್ಲಿ ಇರುವ ಕೆಲವೊಂದು ಆಡಳಿತಾಂಗ ಪ್ರಾಧಿಕಾರ ಅಥವಾ ಹೊಣೆಗಾರಿಕೆಯನ್ನು ಕೆಳಗಿನ ಹಂತಗಳಿಗೆ ನೀಡುವುದು.

೨ . **ಡೆಲಿಗೇಶನ್ (ನಿಯೋಜನೆ)** :- ನಿರ್ದಿಷ್ಟ ವಿವವರಣೆಯುಳ್ಳ ಕಾರ್ಯಗಳನ್ನು ದೈನಂದಿನ ಆಡಳಿತಾಶಾಹಿಯಿಂದ ಹೊರತುಪಡಿಸಿ ಪರೋಕ್ಷವಾಗಿ ಕೇಂದ್ರ ಸರಕಾರದಿಂದ ಮಾತ್ರ ನಿಯಂತ್ರಿಸಲ್ಪಡುವ ಸಂಘಟನೆಗಳಿಗೆ ಹಸ್ತಾಂತರಿಸುವುದು.

೩ . **ಡಿವಲೂಷನ್ (ಅವತರಣ)** :- ಸರಕಾರದ ಉಪರಾಷ್ಟ್ರೀಯ ಘಟಕಗಳನ್ನು ರಚಿಸಿ ಬಲಪಡಿಸುವುದು ಮತ್ತು ಅವುಗಳ ಕಾರ್ಯಗಳನ್ನು ಹೆಚ್ಚಾಗಿ ಕೆಂದ್ರ ಸರಕಾರದ ನೇರ ನಿಯಂತ್ರಣದಿಂದ ಹೊರಗಿಡುವುದು.

೪. **ಪ್ರೈವೇಟೈಸೇಶನ್ (ಖಾಸಗೀಕರಣ)** :- ಸರಕಾರೇತರ ಸಂಘಟನೆಗಳು ಅಥವಾ ಸರಕಾರದಿಂದ ಸ್ವತಂತ್ರವಾದ ಖಾಸಗಿ ಉದ್ಯಮಗಳಿಗೆ ಕೆಲಸಕಾರ್ಯದ ಹೊಣೆಗಾರಿಕೆ ನೀಡುವುದು.

ಇದರಲ್ಲಿ ಮೂರನೇ ವಿಧವನ್ನು ಹೊರತುಪಡಿಸಿದರೆ ಉಳಿದವುಗಳಲ್ಲಿ ಸರಿಯಾದ ರೀತಿಯ ಅಧಿಕಾರದ ವರ್ಗಾವಣೆಯಿಲ್ಲದಿರುವುದನ್ನು ಕಾಣಬಹುದು. ಡಿವಲೂಷನ್ ಎಂದರೆ ಔಪಚಾರಿಕವಾಗಿ ರಚಿತವಾದ ಸ್ಥಳೀಯ ಪ್ರಾಧಿಕಾರಕ್ಕೆ ಶಾಸನಾತ್ಮಕ ಅಥವಾ ಕಾನೂನಿನನ್ವಯ ನಿಶ್ಚಿತವಾದ ಅಥವಾ ವಿವೇಚನಾಧಿಕಾರಗಳನ್ನು ನಿರ್ವಹಿಸಲು ಅನುವು ಮಾಡಿಕೊಡುವುದಾಗಿದೆ. ವಿಕೇಂದ್ರೀಕರಣವು ಈ ಅರ್ಥದಲ್ಲಿ ಡಿವಲೂಷನ್ ಅಥವಾ ಅಧಿಕಾರದ ಅವತರಣಕ್ಕೆ ಸಮವಾಗಿದೆ (ಚೀಮಾ ಮತ್ತು ರೊಂಡಿನೆಲ್ಲಿ, ೧೯೮೩.) ಇದರಂತೆ ಸ್ಥಳೀಯ ಸರಕಾರ ಘಟಕಗಳು ಸ್ವಾಯತ್ತ ಹಾಗೂ ಸ್ವತಂತ್ರವಾಗಿದ್ದು ಕೇಂದ್ರ ಸರಕಾರಕ್ಕೆ ಇದರ ಮೇಲೆ ನೇರ ನಿಯಂತ್ರಣವಿಲ್ಲ. ಸ್ಥಳೀಯ ಸರಕಾರಗಳು ಕಾನೂನುಬದ್ಧವಾದ ಭೌಗೋಳಿಕ ಪರಿಮಿತಿಯೊಳಗೆ ತಮ್ಮ ಅಧಿಕಾರವನ್ನು ಚಲಾಯಿಸುವುವು ಮತ್ತು ಇವುಗಳು ಪ್ರಕಾರ್ಯಗಳನ್ನು ನಿರ್ವಹಿಸಲು ಸಂಪನೂಲಗಳನ್ನು ಕ್ರೋಢಿಕರಿಸುವ ಸಾಮುದಾಯಿಕ ಸಂಸ್ಥೆಗಳಾಗಿವೆ ಎಂದು ಚೀಮಾ ಮತ್ತು ರೊಂಡಿನೆಲ್ಲಿ ತಿಳಿಸುತ್ತಾರೆ. ಸ್ಥಳೀಯ ಪ್ರಾಧಿಕಾರವು ನಿಯಮಿತವಾದರೂ ತನ್ನ ವ್ಯಾಪ್ತಿಯಲ್ಲಿ ಅದು ನಿರ್ಧಾರಗಳನ್ನು ಕೈಗೊಳ್ಳಲು ಸಮರ್ಥವಾಗಿದೆ ಮತ್ತು ಹೊಸ ಶಾಸನಾತ್ಮಕ ಕ್ರಮಗಳಿಂದ ಮಾತ್ರ ಬದಲಾವಣೆಗಳನ್ನು ಮಾಡಬಹುದಾಗಿದೆ. ನಿಯಮಿತ ಸಂಪನ್ಮೂಲಗಳಿದ್ದು ಇವುಗಳ ನಿರ್ವಹಣೆಯು ಈ ಪ್ರಾಧಿಕಾರದ ವಿವೇಚನೆಗೆಗೊಳಪಟ್ಟಿದೆ (ಮಹೂದ್, 1983). ಹೀಗೆ ವಿಕೇಂದ್ರಿತ ಸ್ಥಳೀಯ ಗಟಕವೆಂದರೆ ಅದಕ್ಕೆ ತನ್ನದೇ ಆದ ಕಾನೂನಿನ ಚೌಕಟ್ಟು, ಆಯವ್ಯಯ ಪ್ರಾವಧಾನವಿದ್ದು ಅದು ತನ್ನ ವಿವಿಧ ಕಾರ್ಯಗಳನ್ನು ಈ ಸಂಪನ್ಮೂಲ ಮಿತಿಯೊಳಗೆ ಸ್ಥಳೀಯ ಜನಪ್ರತಿನಿಧಿಗಳ ಮೂಲಕ ನಿರ್ವಹಿಸುತ್ತದೆ.

೧೯೯೨ ರಲ್ಲಿ ಸಂವಿಧಾನಕ್ಕೆ ಮಾಡಿದ ೭೩ ಮತ್ತು ೭೪ ನೆಯ ತಿದ್ದುಪಡಿಗಳು ಭಾರತದ ಒಕ್ಕೂಟ ವ್ಯವಸ್ಥೆಯನ್ನು ಐದು ಸ್ತರದ ರಚನೆಯನ್ನಾಗಿ ಮಾಡಿವೆ. ಜಿಲ್ಲಾ ಮಟ್ಟದಲ್ಲಿನ ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯತ್ ಮತ್ತು ಗ್ರಾಮಪಂಚಾಯತ್ ಇವುಗಳನ್ನು ಸ್ಥಳೀಯ ಸರಕಾರಗಳು ಅಥವಾ ಮೂರನೇ ಸ್ತರದ ಸರಕಾರ ವ್ಯವಸ್ಥೆ (ಪೀಟರ್ ಡಿ, ಸೋಜಾ, ೨೦೦೧) ಎಂದು ಕರೆಯಲಾಗುತ್ತಿದೆ. ಇನ್ನೊಂದರ್ಥದಲ್ಲಿ ಇದು ನಮ್ಮ ವಿಕೇಂದ್ರೀಕರಣ ವ್ಯವಸ್ಥೆಯ ಘಟಕಗಳಾಗಿವೆ. ಜಿಲ್ಲಾ ಸರಕಾರ ಅಥವಾ ಜಿಲ್ಲಾಭಿವೃದ್ಧಿ ಆಡಳಿತ ಘಟಕವೆಂಬಂತೆಯೂ ಇದು ಕಾರ್ಯ ನಿರ್ವಹಿಸುತ್ತದೆ. ಗ್ರಾಮಪಂಚಾಯತ್ ಮಟ್ಟದಲಿ 'ಗ್ರಾಮಸಭೆ' ಎಂಬ ಸಂಸ್ಥೆ ಇದೆ. ಗ್ರಾಮಸಭೆಯು ನೇರ ಪ್ರಜಾಪ್ರಭುತ್ವ ಸಂಸ್ಥೆಯಾಗಿದೆ.

ನಮ್ಮ ಸಮಾಜವು ಬಹುಳಕಾರಿಯಾಗಿದೆ ಅಂದರೆ ಬಹುರೂಪಿ ಸಮಾಜ. ಇಲ್ಲಿ ಹಲವಾರು ಜಾತಿಗಳು, ಅನೇಕ ಭಾಷೆಗಳು ಹಾಗೂ ವೈವಿಧ್ಯತೆಗಳಿವೆ. ನಮ್ಮ ಶ್ರೇಣೀಕೃತ ಸಮಾಜವು ಸಮಾನತೆಯನ್ನು ಸಾರಿದರೂ ಮೂಲತಃ ಇದೊಂದು ಅಂತಸ್ತನ್ನಾಧರಿಸಿದ ಏಣಿಶ್ರೇಣಿ ಮಾದರಿಯ ಸಮಾಜ ವ್ಯವಸ್ಥೆಯಾಗಿದೆ.

ಸಾಂವಿಧಾನಿಕ ತಿದ್ದುಪಡಿಯಿಂದಾಗಿ ಇಂದು ಗ್ರಾಮಪಂಚಾಯತ್‌ಗಳು ಪ್ರತಿನಿಧಿ ಸಂಸ್ಥೆಗಳಾಗಿವೆ. ೭೩ ನೇ ತಿದ್ದುಪಡಿ ಕಾಯ್ದೆಯ ವಿವರಗಳು ತಿಳಿಸುವಂತೆ ಸಮಾಜದ ಅಂಚಿನಲ್ಲಿರುವ ದುರ್ಬಲ ವರ್ಗದವರಿಗೆ, ಮಹಿಳೆಯರಿಗೆ ಹಾಗೂ ಪರಿಶಿಷ್ಟರಿಗೆ ಮೀಸಲಾತಿಯನ್ವಯ ಪಂಚಾಯತ್ ಸಂಸ್ಥೆಗಳಲ್ಲಿ ಪ್ರಾತಿನಿಧ್ಯ ನೀಡಿವೆ. ಪಂಚಾಯತ್ ಸದಸ್ಯತ್ವ ಮತ್ತು ಹುದ್ದೆಗಳಲ್ಲೂ ಮೀಸಲಾತಿಯನ್ನು ವಿಸ್ತರಿಸಿದೆ. ಆದರೆ ಗ್ರಾಮಪಂಚಾಯತಿ ಮಟ್ಟದಲ್ಲಿ ಇವುಗಳು ಹೇಗೆ ಅನುಷ್ಠಾನಗೊಳ್ಳುತ್ತಿವೆ. ಇಲ್ಲಿಯವರೆಗೆ ತಮ್ಮ ಹಿಡಿತದಲ್ಲಿದ್ದ ಅಧಿಕಾರದ ಧ್ರುವೀಕರಾಣವನ್ನು ಬಲಾಢ್ಯ ಜಾತಿಗಳು ಕಾಯ್ದೆ ಕಟ್ಟಳೆಗಳು ತಿಳಿಸಿರುವಂತೆ ಸುಲಭವಾಗಿ ಬಿಟ್ಟುಕೊಡುವುದೇ ಎಂಬುದು ಪ್ರಸ್ತುತ ಸಂದರ್ಭದಲ್ಲಿನ ಬಹುದೊಡ್ಡ ಸಮಸ್ಯೆಯಾಗಿವೆ. ರಾಜಕೀಯ ವಿಕೇಂದ್ರೀಕರಣ ಪಂಚಾಯತ್ ಸಂಸ್ಥೆಗಳಲ್ಲಿ ಕಾಯ್ದೆಗನುಸಾರವಾಗಿ ಜಾರಿಗೆ ತಂದರೂ ಇವು ವಿಕೇಂದ್ರೀಕರಣದ ಮೂಲ ಆಶಯಕ್ಕೆ ಅನುಗುಣವಾಗಿರುವುದೇ?. ವಂಚಿತ ವರ್ಗಗಳಿಗೆ ಈ ಪ್ರಾತಿನಿಧ್ಯ ಸಂಸ್ಥೆಗಳಲ್ಲಿ ನಿರ್ಣಾಯಕ ಪಾತ್ರ ನಿರ್ವಹಿಸುವ ವಾತವರಣ ನಿರ್ಮಾಣವಾಗಿರುವುದೇ? ಮುಂತಾದ ಪ್ರಶ್ನೆಗಳು ಇಂದು ನಮ್ಮನ್ನು ಕಾಡುತ್ತಿವೆ. ೧೯೯೦ ರ ದಶಕದಿಂದೀಚೆಗೆ ಜಾಗತೀಕರಣ ಪ್ರಕ್ರಿಯೆ ಸಂದರ್ಭದಲ್ಲಿ ವಿಕೇಂದ್ರೀಕರಣವು ಜೊತೆ ಜೊತೆಗೆ ಸಾಗುತ್ತಿದೆ. ಈ ಸಂದರ್ಭದಲ್ಲಿ ನಾವು ಈ ಎರಡು ಬಗೆಯ ಪ್ರಕ್ರಿಯೆಗಳನ್ನು ಅವಲೋಕಿಸಬೇಕಾದ ಆಗತ್ಯವೂ ಇದೆ. ರಜನಿ ಕೊಥಾರಿಯವರು ವಿಕೇಂದ್ರೀಕರಣವು ಜಾಗತೀಕರಣ ಪ್ರಕ್ರಿಯೆ ಹಾಗೂ ಸ್ಥಳೀಯ ಸ್ವಯಮಾಡಳಿತ ಇವೆರಡರ ನಡುವೆ ಸಿಲುಕಿದೆ ಎನ್ನುತ್ತಾರೆ. ಜಾಗತೀಕರಣದಿಂದ ಜಾಗತಿಕ ಬಂಡವಾಳ ಮಾರುಕಟ್ಟೆಯು ಕೇಂದ್ರ ಹಾಗೂ ವಿಕೇಂದ್ರೀತ ಆಡಳಿತದ ಮೇಲೆ ನೇರ ಪರಿಣಾಮವನ್ನು ಬೀರಿದೆ. ವಿಕೇಂದ್ರೀತ ಆಡಳಿತಕ್ಕೂ ಕೆಲವು ರೀತಿಯ ನಿಯಮ ಅಥವಾ ಬದ್ಧತೆಗಳಿರಬೇಕಾಗುತ್ತದೆ. ಈ ಒಡಮೂಡುತ್ತಿರುವ ನಿಯಮವನ್ನು ಚಾರಿತ್ರಿಕ ಪ್ರಕ್ರಿಯೆಯ ಆಧಾರದ ವ್ಯುತ್ಪನ್ನವೆಂದು ನೋಡಬೇಕಾಗುತ್ತದೆ. ಇದನ್ನು ರಾಜಕೀಯ ಪಕ್ಷಗಳು, ಅವುಗಳ ಸೈದ್ಧಾಂತಿಕ ನಿಲುವುಗಳು, ಜನರ ಭಿನ್ನತೆ ಗೊಂದಲಗಳು ಮತ್ತು ಸಾದೃಶವಾದ ನಿರಂತರ ಅಸಮತೋಲನಗಳು, ಕೇಂದ್ರ ಮತ್ತು ಪರಿಧಿಯ ಸಮಸ್ಯೆ ಮತ್ತು ಬೆಳೆಯುತ್ತಿರುವ ಪರಿಸರ ಕಾಳಜಿಯ ಅರಿವುಗಳಲ್ಲಿ ಇದನ್ನು ಗ್ರಹಿಸಬೇಕಾದ ಆಗತ್ಯವಿದೆ (ಕೊಥಾರಿ, ೧೯೯೦).

ವಿಕೇಂದ್ರೀಕರಣದ ಜೊತೆಗೆ ಸಬಲೀಕರಣದ ಮಾತುಗಳು ಸಹ ಕೇಳಿಬರುತ್ತಿವೆ. ವಿಕೇಂದ್ರೀಕರಣವು ಪರಿಣಾಮಕಾರಿಯಾಗಿ ಜಾರಿಗೆ ಬರಲು ಮತ್ತು ಪಂಚಾಯತ್‌ರಾಜ್ ಸಂಸ್ಥೆಗಳು ಸ್ವಯಾಮಾಡಳಿತ ಸಂಸ್ಥೆಗಳಾಗಿ ರೂಪುಗೊಳ್ಳಲು ಜನರ ಸಬಲೀಕರಣವು ಅಗತ್ಯವಾಗಿದೆ. ಪ್ರಜಾತಾಂತ್ರಿಕ ಪ್ರಕ್ರಿಯೆಯಲ್ಲಿ ಸಾಮಾಜಿಕ ಮತ್ತು ಆರ್ಥಿಕ ನಿರ್ಬಂಧಗಳಿಂದ ಅಂಚಿನಲ್ಲಿರುವ ಸಾಮಾಜಿಕ ಗುಂಪುಗಳು ಸಬಲೀಕರಣ ಅಥವಾ ಸಶಕ್ತೀಕರಣಗೊಳ್ಳಬೇಕಾದ ಆಗತ್ಯವಿದೆ. ಸವಿಸ್ತರವಾಗಿ ಹೇಳುವುದಾರೆ ಪ್ರಬಲ ಗುಂಪುಗಳ ಏಕಸ್ವಾಮ್ಯವನ್ನು ಪ್ರಶ್ನಿಸುವ, ಜನಜ್ಞಾನವನ್ನು ಉಂಟುಮಾಡುವ ಮತ್ತು ಹೆಚ್ಚಿನ ಸಾದೃಸ ರಾಜಕೀಯ ಮತ್ತು ಸಾಮಾಜಿಕ ನಿರ್ಬಂಧಿ ಅಂಶಗಳ ವಿರುದ್ಧ ಜನಸಾಮಾನ್ಯರ ಅಸಮಾಧಾನವನ್ನು ಜಾಗೃತಗೊಳಿಸುವುದೇ ಸಬಲೀಕರಣವಾಗಿದೆ (ರೆನೆಮಾ, ೧೯೯೭),

ಇನ್ನೊಂದರ್ಥದಲ್ಲಿ ಇದು ವಂಚಿತ ಗುಂಪುಗಳಿಗೆ ಸ್ಥಳೀಯ ಚುನಾಯಿತ ಸಂಸ್ಥೆಗಳಲ್ಲಿ ಪ್ರಾತಿನಿಧ್ಯವನ್ನು ದೃಢೀಕರಿಸುವ ಅವಕಾಶವಾಗಿದೆ.

ಜಾಗತೀಕರಣ ಪರ್ವದಲ್ಲಿ ವಿಕೇಂದ್ರೀಕರಣ, ಸಬಲೀಕರಣ ಮುಂತಾದ ಅಂಶಗಳನ್ನು ಗ್ರಾಮಪಂಚಾಯತ್ ಮಟ್ಟದಲ್ಲಿ ನಾವು ಅಭ್ಯಸಿಸುತ್ತೇವೆ. ಒಂದೆಡೆ ಗ್ರಾಮವು ಗ್ಲೋಬಲ್ ವಿಲೇಜ್ ಎಂದು ಕರೆಯಲ್ಪಡುವುದರ ಜೊತೆಗೆ ಗ್ರಾಮದ ಯಥಾಸ್ಥಿತಿಯು ನಮ್ಮ ಕಣ್ಣ ಮುಂದಿದೆ. ಈ ಗ್ರಾಮಪಂಚಾಯತ್ ವ್ಯವಸ್ಥೆಯಲ್ಲಿ ಹಲವಾರು ಪ್ರಶ್ನೆಗಳು ಈ ಸಂಧಿಗ್ಧ ಪರಿಸ್ಥಿತಿಯಲ್ಲಿವೆ. ಗ್ರಾಮದಲ್ಲಿ ಹಲವಾರು ಜಾತಿ, ವರ್ಗ ಮತ್ತು ಬಣಗಳು ಅಸ್ತಿತ್ವದಲ್ಲಿವೆ. ಸಾಂಪ್ರದಾಯಿಕ ಭೂಮಾಲೀಕ ಕುಟುಂಬಗಳು ಮತ್ತು ಸಾಂಪ್ರದಾಯಿಕ ಗೇಣಿದಾರ ಕುಟುಂಬಗಳ ಮಧ್ಯೆ ಸಮಾನರೂಪದ ಹೊಂದಾಣಿಕೆಗಳಿಲ್ಲ. ಇದರಿಂದ ಏಣಿಶ್ರೇಣಿಯು ಯಥಾಸ್ಥಿಯಲ್ಲಿ ಮುಂದುವರಿಯುತ್ತದೆ. ಹೀಗಾಗಿ ಗ್ರಾಮಜೀವನ ವ್ಯವಸ್ಥೆಯು ರಚನಾತ್ಮಕವಾಗುವ ಬದಲು ಸ್ಪರ್ಧಾತ್ಮಕ ಅಥವಾ ಸಂಘರ್ಷಾತ್ಮಕವಾಗುವ ಸಂಭವವಿದೆ. ಹಾಗೆಯೇ ವ್ಯವ್ಯಸ್ಥೆಯಲ್ಲಿ ಯಾವುದೇ ವಿಚಾರಧಾರೆ ಪ್ರಣಾಳಿಕೆ ಮತ್ತು ಮೌಲ್ಯಗಳ ಬದಲು ಅಧಿಕಾರವೇ ಮುಖ್ಯವಾಗುತ್ತವೆ. ಹೀಗಾಗಿ ಗ್ರಾಮಜೀವನದಲ್ಲಿ ನಿರ್ಣಯ ನಿರೂಪಣೆಗೆ ತಕ್ಕುದಾದ ವ್ಯವಸ್ಥೆಯ ಕೊರತೆಯು ಮತ್ತು ಸಮರ್ಪಕವಾದ ನಾಯಕತ್ವವು ಸಮಸ್ಯೆಯಾಗುವುದು.

**ಅಧ್ಯಯನದ ಉದ್ದೇಶ**

ವಿಕೇಂದ್ರೀಕರಣದ ಹಿನ್ನೆಲೆಯಲ್ಲಿ ಇಂದು ಪಂಚಾಯತ್, ಸಂಸ್ಥೆಗಳು ಸ್ವಯಮಾಡಳಿತ ಘಟಕಗಳಾಗಿ ಕಾರ್ಯನಿರ್ವಹಿಸುತ್ತವೆ. ೭೩ನೇ ತಿದ್ದುಪಡಿಗೆ ಅನುಗುಣವಾಗಿ ಕರ್ನಾಟಕ ಸರಕಾರವು ೧೯೯೩ರ ಪಂಚಾಯತ್‌ರಾಜ್ ಕಾಯ್ದೆಯನ್ನು ಅನುಷ್ಠಾನಗೊಳಿಸಿದೆ. ಇದರಂತೆ ಜಿಲ್ಲಾಪಂಚಾಯತ್, ತಾಲ್ಲೂಕು ಪಂಚಾಯತ್ ಮತ್ತು ಗ್ರಾಮಪಂಚಾಯತ್ ಚುನಾವಣೆಗಳು ನಡೆದು ಕಾಯ್ದೆಗನುಸಾರವಾಗಿ ಇವುಗಳು ಕಾರ್ಯನಿರ್ವಹಿಸುತ್ತಿವೆ. ಸರಕಾರ ಆಡಳಿತಶಾಹಿ ಮತ್ತಿತರ ಘಟಕಗಳು ನೀತಿ ನಿರೂಪಣೆಗಳನ್ನು ರೂಪಿಸಿ ಅನುಷ್ಠಾನಗೊಳಿಸುವುದರ ಹಿಂದೆ ಕೆಲವು ವಿಚಾರಧಾರೆಗಳು ಕೆಲಸ ಮಾಡುತ್ತಿವೆ. ಉದಾಹರಣೆಗೆ ಗ್ರಾಮಪಂಚಾಯತ್ ಮಟ್ಟದಲ್ಲಿ ಸ್ವಯಮಾಡಿಳಿತ ವ್ಯವಸ್ಥೆ ಇರುವಂತೆ ಅನುವು ಮಾಡುವಾಗ ಗ್ರಾಮದಲ್ಲಿನ ಜನಜೀವನ ವ್ಯವಸ್ಥೆ, ಮಹಿಳೆಯರ ಸ್ಥಿತಿಗತಿಗಳು, ಸ್ಥಾಪಿತಹಿತಾಸಕ್ತಿಗಳು, ಪರಿಶಿಷ್ಟರ ಬದುಕು ಮತ್ತು ಮೀಸಲಾತಿ, ಹಳ್ಳಿಯಲ್ಲಿನ ಭೂ ಸ್ವಾಮ್ಯದ ಪರಿಸ್ಥಿತಿ ಮುಂತಾದವುಗಳನ್ನು ಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ. ಅಂದರೆ ನೈಜಸ್ಥಿತಿ ಹೇಗಿರುತ್ತದೆ ಎಂಬುದರ ಅರಿವು ಇರಬೇಕು. ಸರಕಾರಿ ಯಂತ್ರ ಇಲ್ಲವೇ ಆಡಳಿತ ಘಟಕಗಳನ್ನು ಇನ್ನಷ್ಟು ಹೆಚ್ಚಿಸಿ ಗ್ರಾಮಗಳಿಗೆ ವಿಸ್ತರಿಸುವುದರಿಂದ ಆಡಳಿತವು ಸರಿಯಾಗಿ ನಡೆಯುವುದೆಂದು ತಿಳಿಯಲಾಗುತ್ತದೆ.

ಗ್ರಾಮ ಪಂಚಾಯತ್ ವ್ಯವಸ್ಥೆಯಲ್ಲಿ ಗ್ರಾಮದ ವಿವಿಧ ಜಾತಿಯ ಸದಸ್ಯರು ಮತ್ತು ಮಹಿಳೆಯರು ಮೀಸಲಾತಿಯಿಂದ ಅಧಿಕಾರ ಪಡೆಯುತ್ತಾರೆ. ಆದರೆ ಇವುಗಳ ನಿಜಸ್ಥಿತಿ ಗ್ರಾಮದಲ್ಲಿ ಹೇಗಿದೆ. ಕೆಳಜಾತಿಗಳು ತಮ್ಮ ಪ್ರಾತಿನಿಧ್ಯವನ್ನು ಸಮರ್ಪಕವಾಗಿ ಕಾರ್ಯ ನಿರ್ವಹಿಸುವಂತಹ ವಾತಾವರಣ ಸೃಷ್ಟಿಯಾಗಿದೆಯೆ, ಮಹಿಳೆಯರು ಹಾಗೂ ಪರಿಶಿಷ್ಟ ಮಹಿಳೆಯರ ಪರಿಸ್ಥಿತಿ ಹೇಗಿವೆ, ಯಾವ ಅಂಶಗಳು ವಿಕೇಂದ್ರೀಕರಣವು ತಳಮಟ್ಟದಲ್ಲಿ ಜಾರಿಗೊಳ್ಳುವಲ್ಲಿ ಅಡ್ಡಿಯಾಗಿವೆ. ವಿಕೇಂದ್ರೀಕರಣಕ್ಕೆ ಪೂರಕವಾಗುವ ಪರಿಸರವೇನು ಮತ್ತು ಜನರ ಸಶಕ್ತಿಕರಣಕ್ಕೆ ಯಾವ ರೀತಿಯ ತೊಡಕುಗಳಿವೆ? ಗ್ರಾಮದ ಸಾಮಾಜಿಕ - ಆರ್ಥಿಕ - ರಾಜಕೀಯ ಪರಿಸರದ ನೆಲೆ ಯಾವ ರೀತಿ ಇದೆ ಎಂಬುದನ್ನು ಆಭ್ಯಸಿಸಲು ಇಲ್ಲಿ ಪ್ರಯತ್ನಿಸಲಾಗಿದೆ.

ಈ ನಿಟ್ಟಿನಲ್ಲಿ ಬಳ್ಳಾರಿ ಜಿಲ್ಲೆಯ ಕೂಡ್ಲಿಗಿ ತಾಲ್ಲೂಕಿನ ಹಿರೇಹೆಗ್ಡಾಳ್ ಗ್ರಾಮಪಂಚಾಯತ್ ಅಧ್ಯಯನ ಮಾಡುವುದರ ಮೂಲಕ ಈ ಮೇಲಿನ ಸಮಸ್ಯೆಗಳ ನೈಜ ಚಿತ್ರಣವನ್ನು ಅರಿಯಲು ಪ್ರಯತ್ನಿಸಲಾಗಿದೆ. ಅಧ್ಯಯನವು ಗ್ರಾಮದ ಸಾಮಾಜಿಕ - ಆರ್ಥಿಕ - ರಾಜಕೀಯ ಮತ್ತಿತರ ಅಂಶಗಳನ್ನು ತಿಳಿಸುವುದರೊಂದಿಗೆ ಗ್ರಾಮಪಂಚಾಯತ್ ಸ್ವರೂಪ ಹಾಗೂ ಅದರ ಕಾರ್ಯವೈಖರಿ, ವ್ಯವಸ್ಥೆಯ ಮೇಲೆ ಪ್ರಭಾವ ಬೀರುವ ಅಂಶಗಳು ಮತ್ತು ಗ್ರಾಮದಲ್ಲಿನ ಯಜಮಾನಿಕೆ ಮುಂತಾದವುಗಳ ಬಗ್ಗೆ ಅರಿಯಲು ಪ್ರಯತ್ನಿಸಲಾಗಿದೆ.

**ಅಧ್ಯಯನ ವಿಧಾನ**

ಇದೊಂದು ಎಂಪಿರಿಕಲ್ ಅಧ್ಯಯನವಾಗಿದೆ. ಅಧ್ಯಯನಕ್ಕೆ ಪೂರಕವಾಗಿ ಕ್ಷೇತ್ರಕಾರ್ಯವನ್ನು ಹಮ್ಮಿಕೊಂಡು ಗ್ರಾಮದ ಪಂಚಾಯತ್ ವ್ಯವಸ್ಥೆ ಮತ್ತು ಜನಜೀವನವನ್ನು ಅವಲೋಕಿಸಲಾಗಿದೆ.

ಅಧ್ಯಯನಕ್ಕೆ ಆಗತ್ಯವಾದ ಮಾಹಿತಿಯನ್ನು ಪ್ರಾಥಮಿಕ ಮತ್ತು ಆನುಷಂಗಿಕ ಮೂಲಗಳಿಂದ ಸಂಗ್ರಹಿಸಲಾಗಿದೆ. ಪ್ರಾಥಮಿಕ ಸಂಗ್ರಹಣೆಗೆ ಕ್ಷೇತ್ರ ಕಾರ್ಯವನ್ನು ಕೈಗೊಂಡು ಗ್ರಾಮದ ಪಂಚಾಯತ್ ಸದಸ್ಯರುಗಳು, ಹಳ್ಳಿಯ ನಿವಾಸಿಗಳು, ಪಂಚಾಯತ್ ಅಧಿಕಾರಿಗಳು, ಕೂಡ್ಲಿಗಿ ತಾಲ್ಲೂಕು ಪಂಚಾಯತ್ ಉಪಾಧ್ಯಕ್ಷರು, ಅಧಿಕಾರಿಗಳು ಮತ್ತು ಜಿಲ್ಲಾ ಪಂಚಾಯತ್ ಸದಸ್ಯರಿಂದಲೂ ಮಾಹಿತಿಯನ್ನು ಕಲೆ ಹಾಕಲಾಗಿದೆ. ಇದಕ್ಕಾಗಿ ಮುಕ್ತ ಪ್ರಶ್ನಾವಳಿಗಳನ್ನು ರೂಪಿಸಿ ಸಂದರ್ಶನದ ಮೂಲಕ ಮಾಹಿತಿ ಪಡೆಯಲಾಗಿದೆ. ಹಿರೇಹೆಗ್ಡಾಳ್ ಗ್ರಾಮ ಪಂಚಾಯತ್‌ನ ನಾಲ್ಕು ಹಳ್ಳಿಗಳಲ್ಲಿ ಉದ್ದೇಶಿತ ನಮೂನೆ ವಿಧಾನ ಆಧಾರದ ಮೇಲೆ ಕೆಲವು ಗ್ರಾಮಸ್ಥರನ್ನು ಸಂದರ್ಶಿಸಿ ಮಾಹಿತಿ ಕೆಲೆ ಹಾಕಾಲಾಗಿದೆ. ಗ್ರಾಮ ಪಂಚಾಯತ್‌ನ ಎಲ್ಲ ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳಿಂದಲೂ ಮಾಹಿತಿ ಪಡೆಯಲಾಗಿದೆ. ಗ್ರಾಮ ಪಂಚಾಯತ್ ಪ್ರತಿನಿಧಿಗಳು ಮತ್ತು ಗ್ರಾಮಸ್ಥರಿಗೆ ಅನುಕೂಲವಾಗುವಂತೆ ಎರಡು ವಿಧದ ಪ್ರಶ್ನಾವಳಿಗಳನ್ನು ರೂಪಿಸಲಾಗಿದೆ. ಅಧಿಕಾರಿವರ್ಗದಲ್ಲಿ - ಮುಖ್ಯವಾಗಿ ತಾಲ್ಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿ, ಪಂಚಾಯತ್ ವಿಸ್ತರಣಾ ಅಧಿಕಾರಿ, ಗ್ರಾಮಪಂಚಾಯತ್ ಕಾರ್ಯದರ್ಶಿ, ಕರಸಂಗ್ರಹಕಾರ, ನೀರುಗಂಟಿ, ಮೊದಲಾದವರಿಂದ - ಗ್ರಾಮಕ್ಕೆ ಸಂಬಂಧಿಸಿದ ಮಾಹಿತಿ ಪಡೆಯಲಾಗಿದೆ.

ಆನುಷಂಗಿಕ ಮೂಲಗಳಾದ ಜಿಲ್ಲಾ ಜನಗಣತಿಯ ವರದಿ, ಲಭ್ಯವಿರುವ ಪುಸ್ತಕಗಳು ಹಾಗೂ ಪರಾಮರ್ಶನ ಗ್ರಂಥಗಳನ್ನು, ಜಿಲ್ಲಾ ಪಂಚಾಯತ್‌ನವರು ಪ್ರಕಟಿಸುತ್ತಿರುವ ಪ್ರಗತಿ ವರದಿಗಳು, ತಾಲ್ಲೂಕ್ ಪಂಚಾಯತ್, ಗ್ರಾಮಪಂಚಾಯತ್, ಕೂಡ್ಲಿಗಿ ತಾಲ್ಲೂಕು ಕಚೇರಿ, ಸಣ್ಣನೀರಾವರಿ - ಇಲಾಖೆ, ಗ್ರಾಮದಲ್ಲಿರುವ ಶಾಲೆಗಳು, ಅಂಗನವಾಡಿಗಳು ಮತ್ತು ಕೃಷಿ ಸಹಾಯಕ ನಿರ್ದೇಶಕರ ಕಚೇರಿ ಇಲ್ಲಿ ಲಭ್ಯವಿರುವ ದಾಖಲೆ ಮತ್ತು ವರದಿಗಳಿಂದ ಮಾಹಿತಿ ಸಂಗ್ರಹಿಸಲಾಗಿದೆ. ಆದಾಗ್ಯೂ ಈ ಅಧ್ಯಯನಕ್ಕೆ ಕೆಲವು ಮಿತಿಗಳಿವೆ ಎಂಬುದನ್ನು ತಿಳಿಸುವುದು ಆಗತ್ಯ. ಕ್ಷೇತ್ರಕಾರ್ಯವನ್ನು ನಿರೀಕ್ಷಿತ ಮಟ್ಟಕ್ಕೆ ಯಶಸ್ವಿಯಾಗಿ ಮಾಡಲಾಗಲಿಲ್ಲ ಎಂಬ ಕೊರಗು ನಮ್ಮನ್ನು ಕಾಡುತ್ತಿದೆ. ಆದರೂ ಆಧ್ಯಯನಕ್ಕೆ ಪೂರಕವಾಗುವ ರೀತಿಯಲ್ಲಿ ವಿವವರಣೆಗಳನ್ನು ಸಂಗ್ರಹಿಸಲಾಗಿದೆ.

ಪುಸ್ತಕದಲ್ಲಿ ಬರುವ ಅಧ್ಯಾಯಗಳನ್ನು ಈ ಕೆಳಗಿನಂತೆ ಜೋಡಿಸಲಾಗಿದೆ. ಮೊದಲನೆಯ ಅಧ್ಯಾಯದಲ್ಲಿ ಹಿರೇಹೆಗ್ಡಾಳ್ ಗ್ರಾಮಪಂಚಾಯತ್ ಮತ್ತು ಜನಜೀವನದ ಕಿರುಪರಿಚಯ ನೀಡಲಾಗಿದೆ. ಗ್ರಾಮಪಂಚಾಯತ್ - ಗ್ರಾಮಸಭೆ ಮತ್ತು ಜವಾಹರ್ ರೋಜ್‌ಗಾರ್ ಯೋಜನೆಯ ಕುರಿತ ಮಾಹಿತಿಯನ್ನು ಅಧ್ಯಾಯ ಎರಡರಲ್ಲಿ ವಿವರಿಸಲಾಗಿದೆ. ಮೂರನೆಯ ಆಧ್ಯಾಯದಲ್ಲಿ ಗ್ರಾಮದಲ್ಲಿನ ಹಬ್ಬ ಆಚರಣೆಗಳು ಮತ್ತು ಗ್ರಾಮಸ್ಥರು ಮತ್ತು ಪಂಚಾಯತ್ ಪ್ರತಿನಿಧಿಗಳಿಂದ ಸಂಗ್ರಹಿಸಿದ ವಿವರಗಳ ಮಾಹಿತಿಯನ್ನೊದಗಿಸಲಾಗಿದೆ. ಅಧ್ಯಾಯ ನಾಲ್ಕರಲ್ಲಿ ಈ ಅಧ್ಯಯನದ ಕೆಲವು ತಥ್ಯಗಳನ್ನು ವಿವರಿಸಲಾಗಿದೆ. ಅಧ್ಯಾಯ ಐದರಲ್ಲಿ ಉಪಸಂಹಾರವನ್ನು ಕೊಡಲಾಗಿದೆ. ಕೋಷ್ಟಕಗಳು ಮತ್ತು ಪರಾಮರ್ಶನ ಗ್ರಂಥಗಳ ಪಟ್ಟಿಯನ್ನು ಕೊಡಲಾಗಿದೆ.

## ೧. ಗ್ರಾಮಪಂಚಾಯತ್ ಮತ್ತು ಜನಜೀವನ

ಹಿರೇಹೆಗ್ಡಾಳ್ ಗ್ರಾಮವು ಕೂಡ್ಲಿಗಿ ಹೋಬಳಿ / ಫಿರ್ಕಾದ ಗ್ರಾಮಪಂಚಾಯತ್ ಆಗಿದೆ. ಹಿರೇಹೆಗ್ಡಾಳ್ ಗ್ರಾಮಕ್ಕೆ ಆ ಹೆಸರು ಹೇಗೆ ಬಂತೆಂದು ಊರ ಹಿರಿಯರೂ ಸುಮಾರು ೧೨ ವರ್ಷಗಳ ಕಾಲ ಪಂಚಾಯಿತಿ ಆಧ್ಯಕ್ಷರು ಆಗಿದ್ದ ಶ್ರೀ ಶೆಟ್ರುಗುರುಸಿದ್ಧಪ್ಪ ಹೇಳುವಂತೆ ಹೆಗ್ಗಡೆ ಅಂದರೆ ದೊಡ್ಡ 'ಗಡಿ' ಎಂದರ್ಥ. ಇದು ಹಿಂದೆ ಜರಿಮಲೆ ಪಾಳೇಗಾರರ ಆಳ್ವಿಕೆಗೆ ಒಳಪಟ್ಟಿತ್ತು. ಕೊಟ್ಟೂರು ಗುರುಬಸವಸ್ವಾಮಿ ಅಥವಾ ಕೊಟ್ಟೂರೇಶ್ವರ, ಹಿರೇಹೆಗ್ಡಾಳ್, ಕೆಂಪಯ್ಯ, ನಾಯಕನಹಟ್ಟಿ ತಿಪ್ಪೇರುದ್ರಸ್ವಾಮಿ, ತೂಲಹಳ್ಳಿ ಗೋಣಿಬಸವೇಶ್ವರ ಮತ್ತು ಕೋಲ್‌ಶಾಂತಸ್ವಾಮಿ ಎಂಬ ಐದು ಮಂದಿ ಶರಣರು ಶಿವನ ಅನುಗ್ರದಿಂದ ಹುಟ್ಟಿದವರು ಎಂದು ಪ್ರತೀತಿ.

ಹಿರೇಹೆಗ್ಡಾಳ್‌ನ ಕೆಂಪಯ್ಯ, ಗುಡಿಯ ಪಕ್ಕದ ಕೆರೆಯಲ್ಲಿ ವರ್ಷಕ್ಕೊಮ್ಮೆ ಕೆಂದಾವರೆ ಅರಳುತ್ತಿತ್ತು. ಇದನ್ನು ಕೆಂಪಯ್ಯ, ಗುಂಡಿ ಎನ್ನುತ್ತಾರೆ. ಇದು ಕೆಂಪಯ್ಯ, ದೇವರ ಮಾಹಾತ್ಮ್ಯೆಯಾಗಿದೆ. ಆದರೆ ಇತ್ತೀಚೆಗೆ ಹೂವು ಅರಳುವುದು ನಿಂತುಹೋಗಿದೆ ಎನ್ನುತ್ತಾರೆ ಸ್ಥಳೀಯರು.

ಹಿರೇಹೆಗ್ಡಾಳ್ ಗ್ರಾಮವು ಕೂಡ್ಲಿಗಿ ಪೇಟೆಯಿಂದ ಪಶ್ಚಿಮಕ್ಕೆ ಸುಮಾರು ಒಂಭತ್ತು ಕಿಲೋಮೀಟರ್ ದೂರದಲ್ಲಿದೆ. ಪೂರ್ವಕ್ಕೆ ಕೂಡ್ಲಿಗಿ, ಪಶ್ಚಿಮದಲ್ಲಿ ಹನಸಿ (ಹಗರಿಬೊಮ್ಮನಹಳ್ಳಿ ತಾಲ್ಲೂಕು), ಉತ್ತರಕ್ಕೆ ಜಂಗಮ ಸೋಮೇನ ಹಳ್ಳಿ (ಶಿವಪುರ ಗ್ರಾಮಪಂಚಾಯತ್ ) ಮತ್ತು ದಕ್ಷಿಣದಲ್ಲಿ ಬತ್ತನಹಳ್ಳಿ (ಕಂದಲ್ ಗ್ರಾಮಪಂಚಾಯತ್ ) ಇವು ಹಿರೇಹೆಗ್ಡಾಳ್ ಗ್ರಾಮ ಪಂಚಾಯತಿಯ ಮೇರೆಗಳಾಗಿವೆ. ಈ ಗ್ರಾಮಪಂಚಾಯತಿಯಲ್ಲಿ ಎರಡು ರೆವೆನ್ಯೂ ಗ್ರಾಮಗಳಿವೆ. ಅವುಗಳು ಹಿರೇಹೆಗ್ಡಾಳ್ ಮತ್ತು ಬೊಪ್ಪಲಾಪುರ. ಹಾಗೆಯೇ ಇನ್ನೆರೆಡು ಸಣ್ಣ ಹಳ್ಳಿಗಳಿವೆ. ಅವುಗಳು ಸಾಸಲವಾಡ ಮತ್ತು ಸಾಣೇಹಳ್ಳಿ. ಇದರಲ್ಲಿ ಸಾಸಲವಾಡ, ಹಿರೇಹೆಗ್ಡಾಳ್ ರೆವಿನ್ಯೂ ಗ್ರಾಮ ವ್ಯಾಪ್ತಿಗೂ, ಸಾಣೇಹಳ್ಳಿ, ಬೊಪ್ಪಲಾಪುರ ರೆವೆನ್ಯೂ ಗ್ರಾಮವ್ಯಾಪ್ತಿಗೆ ಸೇರರ್ಪಡೆಯಾಗಿವೆ. ಹೀಗೆ ಹಿರೇಹೆಗ್ಡಾಳ್ ಗ್ರಾಮಪಂಚಾಯತ್ ವ್ಯಾಪ್ತಿಯಲ್ಲಿ ೨ ರೆವೆನ್ಯೂ ಗ್ರಾಮಗಳಿದ್ದು ಒಟ್ಟು ೪ ಹಳ್ಳಿಗಳಿವೆ. ಅವುಗಳು ಅನುಕ್ರಮವಾಗಿ ಹಿರೇಹೆಗ್ಡಾಳ್ ಸಾಸಲವಾಡ, ಬೊಪ್ಪಲಾಪುರ ಮತ್ತು ಸಾಣೇಹಳ್ಳಿ.

ಈ ಗ್ರಾಮಪಂಚಾಯತ್ ವ್ಯಾಪ್ತಿಯಲ್ಲಿ ಯಾವುದೇ ನದಿ ಹರಿಯುವುದಿಲ್ಲ. ಇಲ್ಲಿ ಹಿರೇಹೆಗ್ಡಾಳ್ ಕೆರೆ, ಸಾಸಲವಾಡ ಕೆರೆ ಮತ್ತು ಬೊಪ್ಪಲಾಪುರ ಕೆರೆ ಎಂಬ ಮೂರು ಕೆರೆಗಳಿವೆ. ಹಿರೇಹೆಗ್ಡಾಳ್ ಮತ್ತು ಸಾಸಲವಾಡ ಕೆರೆಗಳು ದೊಡ್ಡದಾಗಿದ್ದು ಇವೆರಡೂ ಸುಮಾರು ೨೩೯ ಹೇಕ್ಟೇರು ಜಲಾವೃತ ಪ್ರದೇಶದ ವ್ಯಾಪ್ತಿಯನ್ನೊಳಗೊಂಡಿದೆ. ಇವು ಹಳೆಯ ಕೆರೆಗಳಾಗಿವೆ. ಬೊಪ್ಪಲಾಪುರದಲ್ಲಿ ಒಂದು ಚಿಕ್ಕ ಕೆರೆ ಇದ್ದು ಅದು ಸಾಮಾನ್ಯವಾಗಿ ಬೇಸಿಗೆಯಲ್ಲಿ ಬತ್ತಿಹೋಗುವುದು. ೧೦೦ ಎಕರೆ ಅಥವಾ ೪೦ ಹೆಕ್ಟೇರ್ಗಿಂತ ಕಡಿಮೆ ಜಲಾವೃತ ಪ್ರದೇಶದ ಕೆರೆಯು ಜಿಲ್ಲಾಪಂಚಾಯತ್ ಅಧಿಕಾರ ವ್ಯಾಪ್ತಿಗೆ ಒಳಪಟ್ಟರೆ ಇದಕ್ಕಿಂತ ಹೆಚ್ಚು ವಿಸ್ತಾರವಾದ ಕೆರೆಯು ಸಣ್ಣ ನೀರಾವರಿ ವಿಭಾಗದ ವ್ಯಾಪ್ತಿಗೆ ಒಳಪಡುತ್ತದೆ. ಇಲ್ಲಿಯ ಹವಾಮಾನವು ಹೆಚ್ಚಾಗಿ ಬಿಸಿಲಬೇಗೆಯಿಂದ ಕೂಡಿರುತ್ತದೆ. ಜೂನ್‌ನಿಂದ ಸೆಪ್ಟಂಬರ್ ವರೆಗೆ ಮಳೆಗಾಲ, ಅಕ್ಟೋಬರ್ ನಿಂದ ಜನವರಿ ತನಕ ಚಳಿಗಾಲವಾಗಿದ್ದು ಜನವರಿಯಿಂದ ಜೂನ್‌ವರೆಗೆ ಬೇಸಿಗೆಯಾಗಿರುತ್ತದೆ. ಹವಾಗುಣವು ಶುಷ್ಕವಾಗಿದ್ದು ಭೂಮಿಯು ಕೆಂಪು ಮತ್ತು ಕಪ್ಪು ಮಣ್ಣುಗಳಿಂದ ಕೂಡಿದೆ.

ಹಿಂದೂಗಳೇ ಇಲ್ಲಿನ ಪ್ರಮುಖ ಜನಸಮುದಾಯ. ಇವರಲ್ಲಿ ಲಿಂಗಾಯಿತರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಮುಸ್ಲಿಮರ ಐದು ಮನೆಗಳಿವೆ. ೧೯೯೧ ರ ಜನಗಣತಿಯ ವರದಿಯಂತೆ ಇಲ್ಲಿನ ಒಟ್ಟು ಜನಸಂಖ್ಯೆ ೩೭೫೬ ಆಗಿದೆ. ಇದರಲ್ಲಿ ಶೇ. ೫೪ ರಷ್ಟು ಲಿಂಗಾಯಿತರಿದ್ದಾರೆ. ಪರಿಶಿಷ್ಟ ಜಾತಿಯು ಎರಡನೇ ಪ್ರಮುಖ ಜನಸಮುದಾಯವಾಗಿದೆ. ನಂತರ ಕುರುಬರು, ವಾಲ್ಮೀಕಿ, ಉಪ್ಪಾರರು, ಬಾರಿಕರು, ಅಕ್ಕಸಾಲಿಗ, ಅಗಸ ಮತ್ತು ಕುಂಬಾರರು ಹಾಗೂ ಒಂದು ಬ್ರಾಹ್ಮಣರ ಮನೆ ಇದೆ ಈ ಗ್ರಾಮದಲ್ಲಿ. ಈ ಗ್ರಾಮ ಪಂಚಾಯತ್‌ನಲ್ಲಿ ಒಟ್ಟು ೮೦೪ ಮನೆಗಳಿವೆ. ಇವೆಲ್ಲವುಗಳಿಂದ ತೆರಿಗೆಯನ್ನು ಸಂಗ್ರಹಿಸಲಾಗುತ್ತದೆ. ಇಲ್ಲಿ ಒಟ್ಟು ೮ ಗುಡಿಗಳಿವೆ. ಊರ ಮುಂದಿನ ಈಶ್ವರ ದೇವಾಲಯ ಹಾಗೂ ಇತರ ೭ ಗುಡಿಗಳಿವೆ. ಒಂದು ಮುಸಲ್ಮಾನರ ಮಸೀದಿ ಇದೆ. ಹಿರೇಹೆಗ್ಡಾಳ್‌ನಲ್ಲಿ ಪ್ರಾಥಮಿಕ ಶಾಲೆಯಿಂದ ಪ್ರೌಢಶಾಲೆವರೆಗಿನ ಶಿಕ್ಷಣದ ವ್ಯವಸ್ಥೆ ಇದೆ.

ಪರಿಶಿಷ್ಟ ಜಾತಿಯವರಲ್ಲಿ ಇತರೆಡೆ ಹೇಗೆ ಹಲವಾರು ಉಪಜಾತಿಗಳಿವೆಯೋ ಹಾಗೆಯೇ ಇಲ್ಲಿ ಕೂಡಾ ಇವೆ. ಇವರಲ್ಲಿ ೧೫ ಆದಿ ದ್ರಾವಿಡ ಮನೆಗಳಿದ್ದರೆ ಸುಮಾರು ೧೦೦ ಆದಿಕರ್ನಾಟಕ ಉಪಜಾತಿಯ ಮನೆಗಳಿವೆ. ಸಾಣೇಹಳ್ಳಿಯಲ್ಲಿ ಪೂರ್ತಿಬೋವಿ (ಪರಿಶಿಷ್ಟ ಜಾತಿ) ಸಮುದಾಯದ ೫೮ ಮನೆಗಳಿವೆ. ಹೀಗೆ ಜನಸಮುದಾಯವನ್ನು ಗಣನೆಗೆ ತೆಗೆದುಕೊಂಡರೆ ವಿವಿಧ ಜಾತಿ ವರ್ಗಗಳು ನೆಲೆಸಿರುವುದನ್ನು ಕಾಣಬಹುದು. ಹಾಗೆಯೇ ಪರಿಶಿಷ್ಟ ಜಾತಿಗಳಲ್ಲಿ ಒಳ ಪಂಗಡಗಳಿರುವುದನ್ನು ಕಾಣಬಹುದು.

ಹಿರೇಹೆಗ್ಡಾಳ್ ಗ್ರಾಮ ಪಂಚಾಯತಿಯು ಒಟ್ಟು ನಾಲ್ಕು ಗ್ರಾಮ ಅಥವಾ ಹಳ್ಳಿಗಳನ್ನು ಒಳಗೊಂಡಿರುವುದರಿಂದ ಇವುಗಳ ಗ್ರಾಮವಾರು ಜನಸಮುದಾಯ ವ್ಯವಸ್ಥೆಯನ್ನು ವಿಶ್ಲೇಷಿಸುವುದು ನಮ್ಮ ಅಧ್ಯಯನಕ್ಕೆ ಅನುಕೂಲಕರವಾಗಿದೆ.

ಗ್ರಾಮ ಪಂಚಾಯತಿಯ ಕೇಂದ್ರ ಕಚೇರಿ ಇರುವ ಹಿರೇಹೆಗ್ಡಾಳ್‌ನಲ್ಲಿ ಲಿಂಗಾಯಿತರು, ನಂತರ ಪರಿಶಿಷ್ಟ ಜಾತಿ ಹಾಗೂ ವಾಲ್ಮೀಕಿಯವರು ಪ್ರಬಲರಾಗಿದ್ದಾರೆ. ಬೊಪ್ಪಲಾಪುರದಲ್ಲಿ ಲಿಂಗಾಯಿತ, ಕುರುಬ ಹಾಗೂ ವಾಲ್ಮೀಕಿಯವರು ಪ್ರಮುಖರಾಗಿದ್ದಾರೆ. ಸಾಸಲವಾಡದಲ್ಲಿ ಲಿಂಗಾಯಿತ, ಪರಿಶಿಷ್ಟ ಜಾತಿ ಹಾಗೂ ಉಪ್ಪಾರರು ಪ್ರಬಲರಾದರೆ ಸಾಣೇಹಳ್ಳಿಯಲ್ಲಿ ಕೇವಲ ಬೋವಿ ಜನರಿದ್ದಾರೆ. ಹೀಗೆ ಸಾಣೇಹಳ್ಳಿಯನ್ನು ಹೊರತುಪಡಿಸಿದರೆ ಉಳಿದೆಲ್ಲ ಗ್ರಾಮಗಳಲ್ಲೂ ಲಿಂಗಾಯಿತರ ಸಂಖ್ಯಾತ್ಮಕವಾಗಿ ಪ್ರಬಲರಾಗಿದ್ದಾರೆ. ಉಳಿದಂತೆ ಪರಿಶಿಷ್ಟ ಜಾತಿ, ಕುರುಬರು, ವಾಲ್ಮೀಕಿ ಮತ್ತು ಉಪ್ಪಾರರು ಸಂಖ್ಯಾತ್ಮಕವಾಗಿ ಮುಂದಿದ್ದಾರೆ. ಜನಸಂಖ್ಯೆ ಹಾಗೂ ಜಾತಿವಾರು ಮನೆಗಳ ಸಂಖ್ಯೆಗಳನ್ನು ಕೋಷ್ಟಕ ೧ ಮತ್ತು ೨ರಲ್ಲಿ ಕಾಣಬಹುದು. ಹಿರೇಹೆಗ್ಡಾಳ್ ಗ್ರಾಮದಲ್ಲಿ ಪ್ರಾಥಮಿಕ ಶಾಲೆಯಿಂದ ಹೈಸ್ಕೂಲ್‌ವರೆಗೆ ಶಿಕ್ಷಣ ವ್ಯವಸ್ಥೆ ಇದ್ದರೆ, ಬೊಪ್ಪಲಾಪುರದಲ್ಲಿ ಒಂದರಿಂದ ಆರನೇ ತರಗತಿವರೆಗೆ ಮಾತ್ರ ಇದೆ. ಸಾಣೇಹಳ್ಳಿಯಲ್ಲಿ ಒಂದರಿಂದ ಐದನೆಯ ತರಗತಿವರೆಗೆ ಶಾಲಾ ವ್ಯವಸ್ಥೆ ಇದ್ದರೆ ಸಾಸಲವಾಡದಲ್ಲಿ ಒಂದರಿಂದ ಏಳನೆಯ ತರಗತಿವರೆಗಿನ ಶಿಕ್ಷಣ ವ್ಯವಸ್ಥೆ ಇದೆ.

**ಆರ್ಥಿಕ ಜೀವನ :-** ಹಿರೇಹೆಗ್ಡಾಳ್ ಗ್ರಾಮ ಪಂಚಾಯತಿಯ ಅರ್ಥಿಕ ಜೀವನವನ್ನು ಅವಲೋಕಿಸಿದಾಗ ಸಾಮಾನ್ಯವಾಗಿ ಯಾವುದೇ ಹಿಂದುಳಿದ ಹಳ್ಳಿಯಲ್ಲಿ ಕಂಡುಬರುವ ಗುಣಲಕ್ಷಣಗಳನ್ನು ಇಲ್ಲೂ ಕಾಣಬಹುದು. ದೇಶದ ಇಂದಿನ ಹಳ್ಳಿಗಳನ್ನು ಅವಲೋಕಿಸಿದಾಗ ಹೆಚ್ಚಾಗಿ ಅದು ಸ್ಥಿತ್ಯಂತರದ ಆದಿಯಲ್ಲಿರುವುದು ಕಂಡುಬರುತ್ತದೆ. ಸಾಂಪ್ರದಾಯಿಕವಾಗಿ ಹೆಚ್ಚಿನ ಹಳ್ಳಿಗಳು ಕೃಷಿ ಪ್ರಧಾನ ವ್ಯವಸ್ಥೆಯನ್ನು ಹೊಂದಿರುತ್ತವೆ; ಆದರೂ ತದನಂತರ ಅದು ಕೈಗಾರಿಕೆಯತ್ತ ಹೆಜ್ಜೆಹಾಕುತ್ತಿವೆ. ಹೀಗೆ ಕೃಷಿಯಿಂದ ಕೈಗಾರಿಕೆ, ಕೈಗಾರಿಕೆಯಿಂದ ಸೇವಾರಂಗಕ್ಕೆ ಆರ್ಥಿಕತೆಯು ಚಲಿಸುತ್ತಿರುತ್ತದೆ. ಹೀಗೆ ಕ್ರಮೇಣ ಹಳ್ಳಿಗಳು ಸ್ಥಿತ್ಯಂತರವನ್ನು ಹೊಂದುತ್ತಲಿರುತ್ತವೆ. ಅಥವಾ ಆರ್ಥಿಕತೆಯು ಏಕಮುಖವಾಗಿ ಅಥವಾ ವಿಮುಖವಾಗಿ ಬದಲಾವಣಾ ಪ್ರಕ್ರಿಯೆಗೆ ಒಳಗಾಗುತ್ತದೆ. ಇವನ್ನು ಹೊರತುಪಡಿಸಿದರೆ ಕೆಲವು ಹಳ್ಳಿಗಳು ಅಥವಾ ಅಲ್ಲಿನ ಆರ್ಥಿಕತೆಯು ಯಾವುದೇ ಸ್ಥಿತ್ಯಂತರಕ್ಕೆ ಒಳಗಾಗದೆ ಇರುವ ಸ್ಥಿತಿಯಲ್ಲಿಯೇ - ಅಂದರೆ ಕೃಷಿ ಪ್ರಧಾನ ವ್ಯವಸ್ಥೆಯಲ್ಲೇ - ತಟಸ್ಥವಾಗಿರುವುದು ಕಂಡುಬರುವುದು. ಇತ್ತೀಚಿನ ಜಾಗತೀಕರಣ ಪ್ರಕ್ರಿಯೆಯ ಹಿನ್ನೆಲೆಯಲ್ಲಿ ಈ ರೀತಿ ಇರುವುದು ತೀರಾ ವಿರಳ ಎನಿಸಿದರೂ ಹಿರೇಹೆಗ್ಡಾಳ್ ಗ್ರಾಮ ಪಂಚಾಯತ್ ಈ ವರ್ಣನೆಗೆ ಒಗ್ಗುತ್ತದೆ.

ಇದಕ್ಕೆ ಮುಖ್ಯ ಕಾರಣ ಅಲ್ಲಿನ ಆರ್ಥಿಕ ವ್ಯವಸ್ಥೆ ಅಥವಾ ಆರ್ಥಿಕ ಜೀವನ ಮತ್ತು ಅದರ ಏರುಪೇರುಗಳ ಮಟ್ಟ ಸಾಮಾನ್ಯವಾಗಿ ಯಾವುದೇ ಒಂದು ಹಳ್ಳಿಯ ಅಥವಾ ಪಟ್ಟಣದ ಅರ್ಥವ್ಯವಸ್ಥೆಯ ಬದಲಾವಣಾ ಪ್ರಕ್ರಿಯೆಗೆ ಒಳಗಾದರೆ ಹಿರೇಹೆಗ್ಡಾಳ್ ಅರ್ಥವ್ಯವಸ್ಥೆ ಒಂದು ತಟಸ್ಥ ಅಥವಾ ಮುಚ್ಚಿದ ವ್ಯವಸ್ಥೆಯ ಮಾದರಿಯನ್ನು ಹೋಲುತ್ತದೆ.

ಹಿರೇಹೆಗ್ಡಾಳ್ ಗ್ರಾಮವು ಒಂದು ಕೃಷಿ ಪ್ರಧಾನ ಕ್ರಮವಾಗಿದೆ. ಶೇಂಗಾ, ಹತ್ತಿ, ಭತ್ತ, ಮೆಕ್ಕೆಜೋಳ ಇವು ಇಲ್ಲಿನ ಮುಖ್ಯ ಬೆಳೆಗಳು. ಈ ಗ್ರಾಮದಲ್ಲಿ ಸುಮಾರು ೪೩೨೯.೨೭ ಹೆಕ್ಟೇರುಗಳಷ್ಟು ಸಾಗುವಳಿ ಭೂಮಿ ಇದೆ. ಒಟ್ಟು ೫೯೩.೯೧ ಹೆಕ್ಟೇರುಗಳಷ್ಟು ಭೂಮಿಯು ಕೆರೆ, ಬಾವಿ ಮೂಲಗಳಿಂದ ನೀರಾವರಿಗೊಳಪಟ್ಟಿದೆ. ಕೃಷಿಯನ್ನು ಬಿಟ್ಟರೆ ಕೃಷಿಯಾಧಾರಿತ ಚಟುವಟಿಕೆಗಳಾದ ಎಮ್ಮೆ, ಎತ್ತು ಮತ್ತು ಕುರಿಸಾಕಾಣಿಕೆ ತಕ್ಕ ಪ್ರಮಾಣದಲ್ಲಿ ಇವೆ. ಆದರೆ ಯಾವುದೇ ಗಣಿ ಅಥವಾ ಅರಣ್ಯಾಧಾರಿತ ಆರ್ಥಿಕ ಚಟುವಟಿಕೆಗಳು ಇಲ್ಲಿ ಕಂಡು ಬರುವುದಿಲ್ಲ (ಕೋಷ್ಟಕ -೩). ಸಾಂಪ್ರದಾಯಕವಾಗಿ ಮುಂದುವರಿದುಕೊಂಡು ಬಂದಿರುವ ಕಮ್ಮಾರಿಕೆ ಮಾತ್ರ ಇಲ್ಲಿನ ಕೌಶಲ್ಯಾಧಾರಿತ ಕಸಬಾಗಿದೆ. ಒಂದು ಸಬ್‌ಮರ್ಷಿಬಲ್ ವೈಂಡಿಂಗ್ ಅಂಗಡಿ ಇದೆ. ಇದು ಇಲ್ಲಿನ ಆರ್ಥಿಕ ಜೀವನದ ವಿವರ. ಇದರಿಂದ ಇಲ್ಲಿನ ಆರ್ಥಿಕ ಮಟ್ಟ ಹೇಗಿರಬಹುದೆಂದು ನಾವು ಊಹಿಸಬಹುದು.

**ಭೂಹಿಡುವಳಿ :-** ಕೃಷಿ ಅರ್ಥವ್ಯಸ್ಥೆಯಲ್ಲಿ ಕೃಷಿ ಭೂಮಿಯೇ ಸಾಗುವಳಿ ಮೂಲವಾಗಿದೆ. ಅದು ಸಾಮಾನ್ಯ ಕೃಷಿಯಿರಲಿ ಅಥವಾ ವಾಣಿಜ್ಯ ಕೃಷಿಯಿರಲಿ ಭೂ ಹಿಡುವಳಿ ಮತ್ತು ಅದರ ಒಡೆತನಾದ ಸ್ವರೂಪವನ್ನು ಹೊಂದಿಕೊಂಡಿದೆ. ಸಾಮಾನ್ಯವಾಗಿ ಮಲೆನಾಡು ಅತ್ವಾ ಕರಾವಳಿ ಪ್ರದೇಶದಲ್ಲಿರುವಂತೀ ಮೂರು ಬೆಳೆಗಳನ್ನು ಇಲ್ಲಿ ಬೆಳೆಯುವುದಿಲ್ಲ. ಇಲ್ಲ ಮುಂಗಾರು ಮತ್ತು ಹಿಂಗಾರು ಬೆಳೆಗಳನ್ನು ಮಾಶ್ರ ಬೆರ್ಲೆಸುತ್ತಾರೆ. ಶೇಂಗಾ, ಹತ್ತಿ, ಭತ್ತ, ಮತ್ತು ಮೆಕ್ಕೆ ಜೋಳ ಮುಂಗಾರು ಬೆಳೆಗಳಾದರೆ ಮೆಕ್ಕೆ ಜೋಳ, ಭತ್ತ ಮತ್ತು ಶೇಂಗಾ ಪ್ರಮುಖ ಹಿಂಗಾರು ಬೆಳೆಗಳಾಗಿವೆ.

ಹಿರೇಹೆಗ್ಡಾಳ್‌ನಲ್ಲಿ ೨ ರೆವೆನ್ಯೂ ಗ್ರಾಮಗಳು ಇವೆ. ಅವುಗಳು ಹಿರೇಹೆಗ್ಡಾಳ್, ಮತ್ತು ಬೊಪ್ಪಲಾಪುರ (ಸಾಣೇಹಳ್ಳಿ ಮತ್ತು ಸಾಸಲವಾಡ ಹಳ್ಳಿಗಳು ಸೇರಿ). ಕೋಷ್ಟಕ ೪ರಲ್ಲಿ ಭೂ ಹಿಡುವಳಿಯ ಚಿತ್ರಣವನ್ನು ನೀಡಲಾಗಿದೆ. ಸಾಮಾನ್ಯವಾಗಿ ಭೂ ಹಿಡುವಳಿಯನ್ನು ಅತಿ ಸಣ್ಣ, ಸಣ್ಣ, ಅರೆ ಮಧ್ಯಮ ಮತ್ತು ದೊಡ್ಡ ಹಿಡುವಳಿಗಳೆಂದು ವರ್ಗೀಕರಿಸಲಾಗಿದೆ. ಅತಿ ಸಣ್ಣ ಹಿಡುವಳಿಯು ೧ ಹೆಕ್ಟೇರಿಗಿಂತ ಕಡಿಮೆ ಪ್ರದೇಶವನ್ನು ಒಳಗೊಂಡಿರುತ್ತದೆ. ಒಂದು ಹೆಕ್ಟೇರ್ ಭೂಮಿಯು ೨.೪೭೧೧ ಎಕರೆಗಳಿಗೆ ಸಮವಾಗಿದೆ. ಇಲ್ಲಿನ ಪರಿಶಿಷ್ಟ ಜಾತಿಯ ಭೂಹಿಡುವಳಿಗಳನ್ನು ಅವಲೋಕಿಸೋಣ. ಸಾಮಾನ್ಯವಾಗಿ ಅರ್ಧ ಹೆಕ್ಟೇರಿಗಿಂತ ಕಡಿಮೆ ಭೂಮಿಯುಳ್ಳವರು ೭ ಮಂದಿಯಾದರೆ, ಕೇವಲ ೫ ಮಂದಿ ಅರ್ಧ ಹೆಕ್ಟೇರಿನಿಂದ ಒಂದು ಹೆಕ್ಟೇರ್ ಒಳಗಿನ ಭೂಮಿ ಹೊಂದಿರುತ್ತಾರೆ. ಪರಿಶಿಷ್ಟ ವರ್ಗದ ಜನರಲ್ಲಿ ಇದು ಅನುಕ್ರಮವಾಗಿ ೫ ಮತ್ತು ೯. ಆದರೆ ಇತರೆ ವರ್ಗದ ಜನರಲ್ಲಿ ಇದು ಕ್ರಮವಾಗಿ ೧೩೮ ಮತ್ತು ೯೮ ಆಗಿರುತ್ತದೆ. ಇದೆ ಹಿರೇಹೆಗ್ಡಾಳ್, ಸಾಸಲವಾಡ ಗ್ರಾಮದ ಸ್ಥಿತಿಯಾದರೆ ಬೊಪ್ಪಲಾಪುರ, ಸಾಣೇಹಳ್ಳಿ ಗ್ರಾಮದಲ್ಲಿನ ಪರಿಸ್ಥಿತಿಯನ್ನು ನೋಡೋಣ. ಇಲ್ಲಿ ಇದೇ ವಿಸ್ತೀರ್ಣದ ಹಿಡುವಳಿಯ ಸಂಖ್ಯೆ ಪರಿಶಿಷ್ಟ ಜಾತಿಯವರಲ್ಲಿ ೯ ಮತ್ತು ೧೮ ಆದರೆ ಪರಿಶಿಷ್ಟ ವರ್ಗದವರಲ್ಲಿ ಕ್ರಮವಾಗಿ ೮ ಮತ್ತು ೩ ಆಗಿರುತ್ತದೆ. ಆದರೆ ಇತರ ಜನಗಳ ಹಿಡುವಳಿಗಳ ಸಂಖ್ಯೆ ಕ್ರಮವಾಗಿ ೩೫ ಮತ್ತು ೨೭ ಆಗಿರುತ್ತದೆ. ಇದರಿಂದ ಭೂ ಹಿಡುವಳಿ ವಿವರವನ್ನು ಪರಿಶೀಲಿಸಿದಾಗ ಭೂ ಹಂಚಿಕೆ ಆಥವಾ ಭೂಮಿಯನ್ನು ಹೊಂದಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಜನರು ನಿಕೃಷ್ಟಕ್ಕೊಳಗಾಗಿರುವುದನ್ನು ಕಾಣಬಹುದು. ಸಣ್ಣ ಮತ್ತು ಅರೆಮಧ್ಯಮ ಗಾತ್ರದ ಭೂ ಹಿಡುವಳಿಯ ಸಂಖ್ಯೆಯು ಇದಕ್ಕಿಂತ ಭಿನ್ನವಾಗಿಲ್ಲ. ಆದರೆ ಬೊಪ್ಪಲಾಪುರ ರೆವೆನ್ಯೂ ಗ್ರಾಮದ ಸಾಣೇಹಳ್ಳಿಯಲ್ಲಿರುವ ಎಲ್ಲ ೫೮ ಕುಟುಂಬಗಳು ಪರಿಶಿಷ್ಟ ಜಾತಿಯವರಾಗಿರುವ ಕಾರಣ ಇಲ್ಲಿ ಸಣ್ಣ ಮತ್ತು ಅರೆಮಧ್ಯಮ ಗಾತ್ರದ ಭೂ ಹಿಡುವಳಿಗಳಲ್ಲಿ ಪರಿಶಿಷ್ಟ ಜಾತಿಯವರು ಹೆಚ್ಚಿಗೆ ಕಂಡುಬರುತ್ತಾರೆ. ಇನ್ನೊಂದೆಡೆ ಇತರೆ ಜಾತಿಯವರು ಈ ಭೂ ಹಿಡುವಳಿ ಪರಿಮಿತಿಯಲ್ಲಿ ಪರಿಶಿಷ್ಟ ಜಾತಿಯವರಿಗೆ ಸಮವಾಗಿಯೆ ಇದ್ದಾರೆ ಎಂಬುದೂ ಅಷ್ಟೇ ಸ್ಪಷ್ಟ. ಹಿರೇಹೆಗ್ಡಾಳ್‌ನಲ್ಲಿ ಮಧ್ಯಮ ಮತ್ತು ದೊಡ್ಡ ಗಾತ್ರದ ಭೂಹಿಡುವಳಿ ವರ್ಗದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರನ್ನು ಕಾಣಲು ಸಾಧ್ಯವಿಲ್ಲ. ಬೊಪ್ಪಲಾಪುರದಲ್ಲಿ ಮಾತ್ರ ನಾವು ಮಧ್ಯಮ ಮಿತಿಯ ಭೂಹಿಡುವಳಿಯನ್ನು ಪರಿಶಿಷ್ಟ ಜಾತಿ ಮತ್ತು ವರ್ಗದಲ್ಲಿ ಕಾಣಬಹುದು. ಹಾಗೇಯೇ ಮಧ್ಯಮ ಗಾತ್ರದ ಭೂಹಿಡುವಳಿದಾರರಲ್ಲಿ ಇತರ ವರ್ಗದವರ ಸಂಖ್ಯೆಯು ಪರಿಶಿಷ್ಟ ಜಾತಿ ವರ್ಗದವರಿಗೆ ಸರಿಸಮವಾಗಿಯೆ ಇದೆ. ಎರಡೂ ಗ್ರಾಮಗಳಲ್ಲಿ ದೊಡ್ಡ ಭೂಹಿಡುವಳಿಯ ಗಾತ್ರದ ಭೂಮಿಯನ್ನು ಹೊಂದಿರುವವರು ಇತರೆ ಜನಗಳು ಮಾತ್ರ. ಇದು ಬಹಳ ಅತಂಕಕಾರಿ ವಿಷಯವಾಗಿದೆ.

ಭೂಹಿಡುವಳಿ ಅಥವಾ ಒಡೆತನಕ್ಕೂ ಬಡತನ ರೇಖೆಗೂ ಸಾಪೇಕ್ಷ ಸಂಬಂಧವಿದೆ. ಹೆಚ್ಚಾಗಿ ಭೂಮಿಯನ್ನು ಹೊಂದಿರುವ ಜನ ಸಮುದಾಯವು ತಮ್ಮ ಕುಟುಂಬದ ಆದಾಯದ ಪರಿಮಿತಿಗೊಳಪಟ್ಟು ಉತ್ತಮವಾಗಿರುವುದು ಕಂಡುಬರುತ್ತದೆ. ಹಾಗೆಯೇ ಕಡಿಮೆ ಮಟ್ಟದ ಭೂಹಿಡುವಳಿಯನ್ನು ಹೊಂದಿದವರು ಬಡತನ ರೇಖೆಗಿಂತ ಕೆಳಗೆ ಜೀವಿಸುವುದನ್ನು ಕಾಣಬಹುದು. ಇದಕ್ಕೆ ಕಾರಣ ಭೂಮಿಗೆ ಅನುಗುಣವಾಗಿ ದೊರೆಯುವ ನೀರಾವರಿ, ಕೃಷಿ ಸಲಕರಣೆಗಳು ಹಾಗೂ ಕೃಷಿ ಭೂಮಿಯನ್ನು ಕೃಷಿ ಮಾಡಿದ ನಂತರ ದೊರೆಯುವ ಫಲ. ಅತಿ ಸಣ್ಣ ಭೂಮಿಯುಳ್ಳ ರೈತರು ಇವನ್ನೆಲ್ಲ ಹೊಂದಿಸಿಕೊಳ್ಳಲು ಪ್ರಯಾಸಪಡಬೇಕಾಗುತ್ತದೆ. ದೊಡ್ಡಗಾತ್ರದ ಭೂಮಿ ಹೊಂದಿರುವ ರೈತರು ಕೃಷಿಗೆ ಪೂರಕವಾಗಿ ಹಾಗೂ ಪರ್ಯಾಯವಾಗಿ ಬೇಕಾಗುವ ವ್ಯವಸ್ಥೆಯನ್ನು ಮುಂಚಿತವಾಗಿಯೇ ಹೊಂದಿಸಿಕೊಳ್ಳುವುದರಿಂದ ಅವರಿಗೆ ಸಮಸ್ಯೆಯೇಳದು. ಇಂತಹ ಸಂದರ್ಭದಲ್ಲಿ ಅತಿ ಸಣ್ಣ ಭೂಮಿ ಹೊಂದಿರುವವರು ಶ್ರಮ ವಿಭಜನೆ ಅಥವಾ ವಿನಿಮಯದ ರೀತಿಯಲ್ಲಿ ಮಧ್ಯಮ ಹಾಗೂ ದೊಡ್ಡ ಭೂಮಿತಿ ಹೊಂದಿದ ರೈತರೊಂದಿಗೆ ಹೊಂದಾಣಿಕೆ ಮಾಡಿಕೊಂಡು ಕೃಷಿಯನ್ನು ಮಾಡಬೇಕಾಗುತ್ತದೆ. ಹೆಚ್ಚಿನ ಸಂದರ್ಭಗಳಲ್ಲಿ ಇವರು ಕೂಲಿ ಕೆಲಸವನ್ನು ಮಾಡಬೇಕಾಗುತ್ತದೆ.

ಒಟ್ಟಾರೆಯಾಗಿ ಹೇಳುವುದಾರೆ ಈ ಗ್ರಾಮವು ಕೃಷಿ ಅಥವಾ ಪ್ರಾಥಮಿಕ ವಲಯವನ್ನು ಹೊಂದಿರುವ ಗ್ರಾಮವಾಗಿದೆ. ದ್ವಿತೀಯ ಮತ್ತು ತೃತೀಯ ವಲಯ ಅಥವಾ ಕೈಗಾರಿಕೆ ಮತ್ತು ಸೇವಾಲಯಗಳು ಇನ್ನೂ ಈ ಗ್ರಾಮವನ್ನು ತಲುಪಿಲ್ಲ. ಆದ್ದರಿಂದ ಈ ಗ್ರಾಮವು ಕೃಷಿಗೆ ಪೂರಕವಾಗಿದ್ದುಕೊಂಡು ಅಭಿವೃದ್ಧಿ ದೃಷ್ಟಿಯಿಂದ ತಟಸ್ಥವಾಗಿದೆ. ಹಿರೇಹೆಗ್ಡಾಳ್ ಗ್ರಾಮವನ್ನು ಅಲೋಕಿಸಿದಾಗ ಮೊದಲನೆಯದಾಗಿ ಇದು ಒಣ ಬೇಸಾಯವನ್ನು ಹೊಂದಿರುವ ಗ್ರಾಮವಾಗಿದೆ. ಹೆಚ್ಚಿನ ಜನರು ಕೃಷಿಯನ್ನು ಅವಲಂಬಿಸಿಕೊಂಡಿದ್ದಾರೆ. ದುಡಿಮೆಗಾರ ವರ್ಗದಲ್ಲಿ ಸುಮಾರು ಶೇ.೮೩ ರಷ್ಟು ದುಡಿಮೆಗಾರ ವರ್ಗದ ವರಮಾನ ಮತ್ತು ಉದ್ಯೋಗದ ಮೂಲ ಕೃಷಿಯನ್ನು ಅವಲಂಬಿಸಿದೆ.

ಸಮಾಜೋ ಆರ್ಥಿಕ ಅನಿವಾರ್ಯತೆಗೆ ಅನುಗುಣವಾಗಿ ಕುಟುಂಬದ ಗಾತ್ರವೂ ದೊಡ್ಡದಾಗಿರುತ್ತದೆ. ಕುಟುಂಬದ ಹೆಚ್ಚಿನ ಸದಸ್ಯರು ದುಡಿದರೂ ಹೊಟ್ಟೆ ತುಂಬದಿರುವ ಪರಿಸ್ಥಿತಿ ಇಲ್ಲೀಯೂ ಇದೆ.

ಈ ಗ್ರಾಮದ ಒಟ್ಟು ದುಡಿಮೆಗಾರರ ಸಂಖ್ಯೆ ೧೫೦೦. ಗ್ರಾಮದ ಒಟ್ಟು ದುಡಿಮೆಗಾರ ವರ್ಗದಲ್ಲಿ ಸಾಗುವಳಿದಾರರ ಪ್ರಮಾಣ ೮೧೫ (ಶೇ.೫೪.೩೩) ಮತ್ತು ಕೃಷಿ ಕಾರ್ಮಿಕರ ಸಂಖ್ಯೆ ४३४. ಸಾಗುವಳಿದಾರರು ಮತ್ತು ಕೃಷಿ ಕಾರ್ಮಿಕರನ್ನು ಸೇರಿಸಿದರೆ ಕೃಷಿಯನ್ನು ಅವಲಂಬಿಸಿಕೊಂಡಿರುವ ದುಡಿಮೆಗಾರ ವರ್ಗದ ಸಂಖ್ಯೆಯು ಪ್ರಾಪ್ತವಾಗುತ್ತದೆ. ಹಿರೇಹೆಗ್ಡಾಳ್ ಗ್ರಾಮದಲ್ಲಿ ಕೃಷಿಯನ್ನು ಅವಲಂಬಿಸಿಕೊಂಡಿರುವ ದುಡಿಮೆಗಾರ ಸಂಖ್ಯೆ ೧೨೪೯. ಗ್ರಾಮದ ಒಟ್ಟು ದುಡಿಮೆಗಾರ ವರ್ಗದಲ್ಲಿ ಕೃಷಿಯನ್ನು ಅವಲಂಬಿಸಿರುವವರ ಪ್ರಮಾಣ ಶೇ. ೮೩.೨೬. ಈ ಗ್ರಾಮವು ಕೃಷಿ ಪ್ರಧಾನ ಆರ್ಥಿಕತೆಯನ್ನು ಹೊಂದಿದೆ. ಈ ಗ್ರಾಮದಲ್ಲಿ ಕೃಷಿಯೇತರ ಚಟುವಟಿಕೆಗಳಲ್ಲಿ ನಿರತರಾಗಿರುವ ದುಡಿಮೆಗಾರರ ಪ್ರಮಾಣ ಕೇವಲ ಶೇ. ೧೬.೭೪. ಒಟ್ಟು ಜನಸಂಖ್ಯೆಯಲ್ಲಿ ದುಡಿಮೆಗಾರ ವರ್ಗದ ಪ್ರಮಾಣ ಶೇ. ೩೯.೯೩. ಒಟ್ಟು ದುಡಿಮೆಗಾರ ವರ್ಗದಲ್ಲಿ ಕೃಷಿ ಕಾರ್ಮಿಕರ ಪ್ರಮಾಣ ಶೇ. ೨೮.೯೩. ಇದು ರಾಜ್ಯಮಟ್ಟಕ್ಕೆ ಸಮಾನವಾಗಿರುವಂತಿದೆ. ಗ್ರಾಮದಲ್ಲಿ ಸಾಪೇಕ್ಷ್ಯವಾಗಿ ದುಡಿಮೆಯಲ್ಲಿ ನಿರತರಾಗಿರುವ ಜನರ ಪ್ರಮಾಣವು ರಾಜ್ಯಮಟ್ಟಕ್ಕಿಂತ ಅಧಿಕವಾಗಿದೆ.

ಮೇಲಿನ ವಿವರಗಳನ್ನು ಆಧರಿಸಿ ಗ್ರಾಮದಲ್ಲಿ ಕೃಷಿಯನ್ನು ಅವಲಂಬಿಸಿರುವ ದುಡಿಮೆಗಾರ ವರ್ಗದ ಪ್ರಮಾಣ ಶೇ.೮೩.೨೬ ಅಗಿದ್ದು ಇದು ಕೃಷಿಯ ಮೇಲೆ ವಿಪರೀತ ಒತ್ತಡವನ್ನು ಸೂಚಿಸುತ್ತದೆ. ಹಾಗೆಯೇ ಕೃಷಿ ಕಾರ್ಮಿಕರ ಪ್ರಮಾಣಕ್ಕಿಂತ ಸಾಗುವಾಳಿದಾರರ ಪ್ರಮಾಣವು ಹೆಚ್ಚಾಗಿರುವುದು ಇನ್ನೂ ಆತಂಕಾರಿ ವಿಷಯವಾಗಿದೆ. ಇದು ಗ್ರಾಮದಲ್ಲಿ ಕೃಷಿ ಭೂಮಿಯು ಕೆಲವೇ ಮಂದಿಯ ಕೈಯಲ್ಲಿ ಕೇಂದ್ರೀಕೃತವಾಗಿರುವುದನ್ನು ಸೂಚಿಸುತ್ತದೆ. ಇದು ವಿಲೋಮ ಅನುಪಾತದಂತೆ ಕಂಡುಬಂದರೂ ಅಭಿವೃದ್ಧಿಯ ಲಕ್ಷಣವಲ್ಲ ಎಂಬುದು ಸ್ಪಷ್ಟ. ಬಹಳ ಮುಂದುವರಿದ ಅದರಲ್ಲೂ ದಕ್ಷಿಣ ಕರ್ನಾಟಕದ ಕೆಲವು ಗ್ರಾಮಗಳಲ್ಲಿ ಕೃಷಿ ಕಾರ್ಮಿಕರ ಪ್ರಮಾಣವು ಸಾಗುವಳಿದಾರರಿಗಿಂತ ಕಡಿಮೆಯಿರುತ್ತದೆ. ಅದರರ್ಥ ಕೃಷಿ ಭೂಮಿಯು ತುಂಡು ತುಂಡಾಗಿ ವಿಭಜಿಸಲ್ಪಟ್ಟು ಹಿಡುವಳಿ ಚಿಕ್ಕದಾಗಿದ್ದು ಸಾಗುವಳಿದಾರರು ಹೆಚ್ಚಿರಬಹುದು. ಇಲ್ಲದೇ ಕೃಷಿ ಕಾರ್ಮಿಕರಿಗೆ ಕೃಷಿಯನ್ನು ಹೊರತುಪಡಿಸಿಯೂ ಇತರ ವಾಣಿಜ್ಯ ಕೃಷಿಗಳ ಶ್ರಮವು ದೊರೆಯುವ ಸಾಧ್ಯತೆಗಳಿವೆ. ಇದು ಒಂದು ರೀತಿಯಲ್ಲಿ ಸಕಾರಾತ್ಮಕ ಬೆಳವಣಿಗೆಯಾಗಿದ್ದು ಅಭಿವೃದ್ಧಿಗೆ ಪೂರಕವಾದಂತಿದೆ. ಆದರೆ ಹಿರೇಹೆಗ್ಡಾಳ್ ಗ್ರಾಮದ ಪರಿಸ್ಥಿತಿ ಭಿನ್ನವಾಗಿದ್ದು ವಿಷಮ ಸ್ಥಿತಿಯಲ್ಲಿದೆ. ಮೊದಲನೆಯದಾಗಿ ಕಂಡುಬರುವ ಕೃಷಿಗೆ ಅನುಕೂಲಕರವಾದ ಭೂಮಿಯು ಕೆಲವೇ ಜನರಲ್ಲಿದೆ. ಉಳಿದವರು ಕೃಷಿ ಕಾರ್ಮಿಕರಾಗಿರುತ್ತಾರೆ. ಇನ್ನೊಂದೆಡೆ ಈ ಸಾಗುವಾಳಿದಾರರಲ್ಲಿ ಮೇಲ್ಜಾತಿಯವರು ಹಾಗೂ ಕೆಲವೇ ಕೆಲವು ಮಂದಿ ಪರಿಶಿಷ್ಟ ಜಾತಿ ಮತ್ತು ವರ್ಗದವರು ಸೇರಿರುತ್ತಾರೆ. ಈ ಪರಿಶಿಷ್ಟ ಜಾತಿಯ ಸಾಗುವಾಳಿದಾರರ ಸ್ಥಿತಿಯು ಸಾಮಾನ್ಯ ಕೃಷಿ ಕಾರ್ಮಿಕರ ಪರಿಸ್ಥಿತಿಗಿಂತ ಭಿನ್ನವಾಗಿಲ್ಲ. ಇದಕ್ಕೆ ಹಲವಾರು ಕಾರಣಗಳನ್ನು ಕೊಡಬಹುದು. ಹಿರೇಹೆಗ್ಡಾಳ್ ಒಂದು ಒಣಭೂಮಿಯಾಗಿದೆ.

ಕೃಷಿಯು ಹೆಚ್ಚಾಗಿ ಮಳೆ, ಕೆರೆ ಹಾಗೂ ಬಾವಿ ನೀರಾವರಿಯನ್ನು ಆಶ್ರಯಿಸಿದೆ. ಕೃಷಿ ಕಾರ್ಮಿಕರಿಗೆ ಸಾಕಾಗುವಷ್ಟು ಮಾನವ ದುಡಿಮೆ ದಿನಗಳು ಲಭ್ಯವಾಗುತ್ತಿಲ್ಲ. ಅತಿ ಸಣ್ಣ ಹಿಡುವಳಿದಾರರ ಪರಿಸ್ಥಿತಿ ನಿಕೃಷ್ಟವಾಗಿದ್ದು ಇವರ ಸ್ಥಿತಿ ಕೃಷಿ ಕಾರ್ಮಿಕರಿಗಿಂತ ಭಿನ್ನವಾಗಿಲ್ಲವೆಂಬುದು ಕಂಡು ಬರುತ್ತದೆ.

ಅತಿ ಸಣ್ಣ ಹಿಡುವಳಿದಾರನ ಭೂಮಿಯ ಸಾಗುವಾಳಿ ಮತ್ತು ಬೆಳೆಯ ಪರಿ ಸಣ್ಣ, ಮಧ್ಯಮ ಹಾಗೂ ದೊಡ್ಡ ಹಿಡುವಳಿದಾರರ ಜೊತೆಗಿನ ಒಲವು ಹಾಗೂ ಸಂಬಂಧವನ್ನು ಅವಲಂಬಿಸಿದೆ. ಯಾಕೆಂದರೆ ಅತಿ ಸಣ್ಣ ಹಿಡುವಳಿದಾರನು ನೇಜಿ, ಉಳಿಮೆ ಹಾಗೂ ಬೆಳೆಗೆ ಬೇಕಾಗುವ ಹೆಚ್ಚಿನ ಪೂರಕ ವಸ್ತುಗಳಿಗೆ ದೊಡ್ಡ ರೈತರನ್ನೇ ಆಶ್ರಯಿಸಬೇಕಾದ ಪರಿಸ್ಥಿತಿ ಇದೆ. ಅಥವಾ ತಾನು ಮಧ್ಯಮ ಹಾಗೂ ದೊಡ್ಡ ರೈತರ ಭೂಮಿಯಲ್ಲಿ ಕೆಲಸ ಮಾಡಿ ಅವರ ಬಿತ್ತನೆ ಹಾಗೂ ಬೆಳೆ ಕಾರ್ಯಕ್ಕೆ ಸಹಕರಿಸಿ ನಂತರ ಇದಕ್ಕೆ ಪ್ರತಿಫಲವಾಗಿ ತನ್ನ ಭೂಮಿಯನ್ನು ಉಳುಮೆ ಮಾಡಬೇಕಾದ ಪರಿಸ್ಥಿತಿ ಕಂಡುಬರುತ್ತಿದೆ.

**ಕೃಷಿ ಮತ್ತು ಕೃಷಿಯೇತರ ಚಟುವಟಿಕೆಗಳು**

ಮೊದಲೇ ತಿಳಿಸಿದಂತೆ ಹಿರೇಹೆಗ್ಡಾಳ್ ಗ್ರಾಮವು ಒಂದು ಮುಚ್ಚಿದ ಯಾ ಏಕರೂಪದ ಆರ್ಥಿಕ ರಚನೆಯನ್ನು ಹೊಂದಿದೆ. ಇದನ್ನು ತಾಟಸ್ಥ್ಯ ಸ್ವರೂಪದ ಆರ್ಥಿಕತೆಯೆನ್ನಲೂಬಹುದು. ರಾಜ್ಯಮಟ್ಟದಲ್ಲಿ ಕೃಷಿಯನ್ನು ಅವಲಂಬಿಸಿರುವ ದುಡಿಮೆಗಾರ ವರ್ಗದ ಪ್ರಮಾಣ ಶೇ.೬೩.೧೨, ಇದ್ದರೆ ಈ ಗ್ರಾಮದಲ್ಲಿ (ಗ್ರಾಮದ ಸಮೀಕರಣವು ರಾಜ್ಯದ ಹೋಲಿಕೆಗೆ ವಿಹಿತವಾಗುವುದು ಎಂದೆನಿಸುವುದಾರೆ ಬಳ್ಳಾರಿ ಜಿಲ್ಲೆ ಹಾಗೂ ಕೂಡ್ಲಿಗಿ ತಾಲ್ಲೂಕಿನ ಚಿತ್ರಣ ಇದಕ್ಕಿಂತ ಭಿನ್ನವಾಗಿಲ್ಲ) ಕೃಷಿಯನ್ನು ಅವಲಂಬಿಸಿರುವ ದುಡಿಮೆಗಾರರ ಪ್ರಮಾಣ ಶೇ.೮೩.೨೬. ಕೃಷಿಯೇತರ ಆರ್ಥಿಕ ಚಟುವಟಿಕೆಗಳು ಇಲ್ಲವೆ ಇಲ್ಲ ಎನ್ನವಷ್ಟು ಕಡಿಮೆ. ಕೃಷಿಯ ಮೇಲೆ ಹೆಚ್ಚಿನ ಒತ್ತಡವಿದೆ. ಕೃಷಿಯೇತರ ಚಟುವಟಿಕೆಗಳಲ್ಲಿ ನಿರತರಾಗಿರುವ ದುಡಿಮೆಗಾರರ ಪ್ರಮಾಣ ಕೇವಲ ಶೇ.೧೬.೭೪. ಕೃಷಿ ಚಟುವಟಿಕೆಗಳನ್ನು ಬಿಟ್ಟರೆ ಗ್ರಾಮಾಂತರ ಪ್ರದೇಶಗಳಲ್ಲಿ ಜನರಿಗೆ ಅನ್ಯಮಾರ್ಗವೆ ಇಲ್ಲದಂತಾಗಿದೆ. ಅವಕಾಶಗಳ ವಿಸ್ತರಣೆಗೆ ಹಾಗೂ ಆಯ್ಕೆಗೆ ಸಾಧ್ಯವೇ ಇಲ್ಲದ ಬದುಕು ಈ ಗ್ರಾಮದಲ್ಲಿದೆ.

ಕೃಷಿಯೇತರ ಚಟುವಟಿಕೆಗಳನ್ನು ಕೂಡ್ಲಿಗಿ ತಾಲ್ಲೂಕಿನಲ್ಲಿ ಕಾಣುವುದು ತೀರಾ ದುರ್ಲಭವೆನ್ನಬಹುದು. ಪೇಟೆ, ಪಟ್ಟಣ ಪ್ರದೇಶಗಳಲ್ಲಿ ಸ್ವಲ್ಪ ಮಟ್ಟಿಗೆ ನಿಯಮಿತ ಕೃಷಿಯೇತರ ಚಟುವಟಿಕೆಗಳನ್ನು ಕಾಣಬಹುದಾಗಿದೆ. ಸಾರಿಗೆ ಸಂಪರ್ಕದ ಸಾಧನಗಳಿಂದಾಗಿ ಹಲವಾರು ಸಣ್ಣ ಪುಟ್ಟ ತೃತೀಯ ವಲಯದ ಅದರಲ್ಲೂ ಮುಖ್ಯವಾಗಿ ಸಾರಿಗೆ ಸಲಕರಣೆಗಳಿಗೆ ಸಂಬಂಧಿಸಿದ ಚಟುವಟಿಕೆಗಳು ನಡೆಯುತ್ತವೆ. ಇದೇನು ಹೇಳಿಕೊಳ್ಳುವಂತಹ ಬೆಳವಣಿಗೆಯೇನಲ್ಲ.

ಹಿರೇಹೆಗ್ಡಾಳ್ ಗ್ರಾಮದಲ್ಲಿ ಒಟ್ಟು ಸಾಗುವಾಳಿ ಭೂಮಿಯಲ್ಲಿ ಮೊದಲೇ ತಿಳಿಸಿದಂತೆ ಮಳೆಯನ್ನು ಹೊರತುಪಡಿಸಿ ಕೆರೆ ಮತ್ತು ಬಾವಿ ನೀರಾವರಿಯಿಂದ ಕೃಷಿಯನ್ನು ಮಾಡಲಾಗುತ್ತಿದೆ. ಈಗ ಸಣ್ಣ ಪ್ರಮಾಣದಲ್ಲಿ ಕೊಳವೆ ಬಾವಿಗಳು ಅಲ್ಲಲ್ಲಿ ಕಂಡುಬರುತ್ತವೆ. ಆದರೂ ಕೃಷಿಗೆ ಮಳೆ ಮತ್ತು ಕೆರೆ ನೀರಾವರಿಯೇ ಆಧಾರವಾಗಿದೆ. ಲಭ್ಯವಿರುವ ಮಾಹಿತಿಗೆ ಅನುಸಾರವಾಗಿ ಒಟ್ಟು ೫೯೩.೯೧ ಹೆಕ್ಟೇರುಗಳಷ್ಟು ಸಾಗುವಾಳಿ ಪ್ರದೇಶವು ಕೆರೆ ಮತ್ತು ಬಾವಿ ಮೂಲಗಳಿಂದ ಕೃಷಿಗೆ ನೀರಾವರಿಯನ್ನು ಪಡೆಯುತ್ತದೆ. ಸಾಮಾನ್ಯವಾಗಿ ಕೆರ ನೀರಾವರಿಯು ಅದರ ಸಮೀಪವಿರುವ ಭೂಮಿಗಳಿಗೆ ತುರ್ತಿನ ನೀರನ್ನುಣಿಸಿದರೆ ದೂರದ ಕೃಷಿ ಭೂಮಿಯು ಸಮೀಪದ ಭೂಮಿಗಳಿಂದ ಹರಿದ ನೀರಿನಿಂದ ಯಾ ಒಡ್ಡಿದ ನೀರಿನಿಂದ ನೀರಾವರಿಯನ್ನು ಪಡೆಯುತ್ತದೆ.

ಕೃಷಿಯಾಧಾರಿತ ಲಘು ಆರ್ಥಿಕ ಚಟುವಟಿಕೆಗಳಾದ ಎಮ್ಮೆ, ಕುರಿ ಮತ್ತು ಎತ್ತು ಸಾಗಾಣಿಕೆಯನ್ನು ಅಲ್ಪ ಪ್ರಮಾಣದಲ್ಲಿ ಈ ಗ್ರಾಮದಲ್ಲಿ ಕಾಣಬಹುದು. ಆದರೆ ಗ್ರಾಮದಲ್ಲಿ ಹೇಳಿಕೊಳ್ಳುವಂತಹ ಲಾಭದಾಯಕವಾದ ಅಥವಾ ದೊಡ್ಡ ಮಟ್ಟದ ಈ ಘಟಕಗಳಾವುವು ಕಂಡುಬರುದಿಲ್ಲ. ಎತ್ತು ಸಾಕಣೆಯಿಂದ ಸಣ್ಣ ಯಾ ಅತೀ ಸಣ್ಣ ರೈತರು ಗದ್ದೆಯ ಉಳುಮೆಗೆ ಮತ್ತು ಎತ್ತಿನ ಬಂಡಿಗೆ ಅನುಕೂಲಕರವಾಗಲೆಂದು ಉಪಯೋಗಿಸುತ್ತಾರೆ. ಇದು ಸಾಮಾನು ಸರಂಜಾಮು ಸಾಗಾಟ ಮತ್ತು ಸಾರಿಗೆ ಸಂಪರ್ಕ ಸಾಧನವಾಗಿಯೂ ಬಳಸಲ್ಪಡುತ್ತದೆ. ಇದು ಹೆಚ್ಚಾಗಿ ಕೂಡ್ಲಿಗಿಯಿಂದ ಹನಸಿ ಮಾರ್ಗವಾಗಿ ಕೆಲವೊಮ್ಮೆ ಹಗರಿಬೊಮ್ಮನಹಳ್ಳಿಗೂ ಹಾಗೂ ಇನ್ನೊಂದೆಡೆಯಿಂದ ಕೂಡ್ಲಿಗಿ ಹಾಗೂ ಶಿವಪುರಕ್ಕೆ ಸಾಗಾಟ ಸಾಧನವಾಗಿ ಬಳಸಲ್ಪಡುತ್ತದೆ. ಗ್ರಾಮದಲ್ಲಿ ಕುರಿ, ಎಮ್ಮೆ, ಎತ್ತು ಮತ್ತು ಕೋಳಿ ಸಾಕಾಣಿಕೆಯನ್ನು ಇನ್ನಷ್ಟು ಉತ್ತೇಜಿಸಬಹುದಾಗಿದೆ ಮತ್ತು ಇದರಿಂದ ನಿರೀಕ್ಷಿತ ಮಟ್ಟದಲ್ಲಿ ಲಾಭವನ್ನು ಪಡೆಯಬಹುದು. ಈ ಬಗ್ಗೆ ಗ್ರಾಮಪಂಚಾಯಿತಿಯು ಕಾರ್ಯೋನ್ಮುಖವಾಗಬೇಕಾಗಿದೆ. ಗ್ರಾಮದಲ್ಲಿ ಗಣಿಯಾಧಾರಿತ ಮತ್ತು ಅರಣ್ಯಾಧಾರಿತ ಆರ್ಥಿಕ ಚಟುವಟಿಕೆಗಳು ಇಲ್ಲ. ಗ್ರಾಮದಲ್ಲಿ ಸ್ವಲ್ಪ ಮಟ್ಟಿನ ಅರಣ್ಯ ಪ್ರದೇಶವಿದ್ದು ಅರಣ್ಯ ಭೂಮಿಯ ಉಸ್ತುವಾರಿಯು ಗ್ರಾಮ ಪಂಚಾಯತ್ ಅಧೀನಕ್ಕೆ ಬರುತ್ತದೆ. ಆದರೆ ಗ್ರಾಮದ ಕೆಲವು ನಿವಾಸಿಗಳು ತಿಳಿಸಿರುವಂತೆ ಕೃಷಿಗೆ ಪೂರಕವಾಗಿ ಅರಣ್ಯ ಭೂಮಿಯನ್ನು ತಾವು ಶ್ರಮಿಸಿ ಅದನ್ನು ಕೃಷಿ ಭೂಮಿಯನ್ನಾಗಿ ಪರಿವರ್ತಿಸಿದಾಗ ಇನ್ಯಾರದೊ ಕುಮ್ಮಕ್ಕಿನಿಂದ ಅರಣ್ಯಾಧಿಕಾರಿಗಳು ತಮ್ಮ ಮೇಲೆ ಅರಣ್ಯನಾಶ ಮತ್ತು ಮರಗಳ್ಳತನದ ಆಪಾದನೆ ಹೊರಿಸಿರುವುದರಿಂದ ಈ ಕುರಿತ ವ್ಯಾಜ್ಯವು ಇನ್ನೂ ನ್ಯಾಯಾಲದಲ್ಲಿರುವಾಗ ಈ ಅಪಾದಿತರು ಕೃಷಿ ಮಾಡುವ ಕನಸು ಹಾಗೂ ಭವಿಷ್ಯದ ದಿನಗಳ ಭಯಾನಕತೆಯನ್ನು ಎದುರಿಸಲಾಗದೆ ಖಿನ್ನರಾಗಿದ್ದಾರೆ.

ಇವರೆಲ್ಲರೂ ಕೃಷಿ ಕಾರ್ಮಿಕರಾಗಿದ್ದು ಬರೀ ಸಣ್ಣ ಪುಟ್ಟ ಜನತಾ ಮನೆಗಳನ್ನು ಮಾತ್ರ ಹೊಂದಿರುತ್ತಾರೆ. ಗ್ರಾಮದಲ್ಲಿ ಬಿದಿರು ಮತ್ತಿತರ ಬಹುಪಯೋಗಿ ಜೀವನಾಧಾರ ಮರಗಳು ಕಂಡುಬರುವುದಿಲ್ಲ. ಗ್ರಾಮದಲ್ಲಿ ಬೆರಳೆಣಿಕೆಯಷ್ಟು ಮಂದಿ ಕಮ್ಮಾರ ಮತ್ತು ಬಡಗಿ ಕೆಲಸಲದಲ್ಲಿ ನಿರತರಾಗಿರುತ್ತಾರೆ. ಇದು ಕೌಶಲ್ಯಾಧಾರಿತ ವೃತ್ತಿಯಾಗಿದ್ದು ವಂಶಪಾರಂಪರ್ಯವಾಗಿ ನಡೆದುಕೊಂಡು ಬರುತ್ತಿದೆ. ಇಲ್ಲಿ ಒಂದು ಸಬ್‌ಮರ್ಸಿಬಲ್ ವೈಂಡಿಂಗ್ ಅಂಗಡಿ ಇದೆ. ಗ್ರಾಮಸ್ಥರು ತಿಳಿಸುವಂತೆ ಇನ್ನೆರಡು ಇಂತಹ ಅಂಗಡಿಗಳ ಅವಶ್ಯಕತೆ ಇದೆ. ಯಾಕೆಂದರೆ ಸುಮಾರು ೨೫೦ ರಷ್ಟು ಪಂಪುಸೆಟ್ಟುಗಳು ಈ ಗ್ರಾಮದಲ್ಲಿವೆ. ಸುಮಾರು ೨೬ ಎಕರೆ ಭೂಮಿಯಲ್ಲಿ ರೇಷ್ಮೆ ಕೃಷಿಯು ಸಾಸಲವಾಡ ಗ್ರಾಮದಲ್ಲಿ ನಡೆಯುತ್ತಿವೆ. ಗ್ರಾಮದ ಎಲ್ಲ ಹಳ್ಳಿಗಳೂ ಸೇರಿ ಇಡೀ ಗ್ರಾಮಪಂಚಾಯಿತಿಯಲ್ಲಿ ೫ ಚಹಾದ ಅಂಗಡಿಗಳು, ಮತ್ತು ಸುಮಾರು ೧೦ ರಿಂದ ೧೫ ರಷ್ಟು ಇತರ ಸಣ್ಣ ಅಂಗಡಿಗಳಿವೆ. ಹಿರೇಹೆಗ್ಡಾಳ್‌ನಲ್ಲಿ ಒಂದು ಸಹಕಾರಿ ವ್ಯವಸಾಯ ಸೇವಾ ಸಂಘವೂ ಕಾರ್ಯ ನಿರ್ವಹಿಸುತ್ತಿದೆ. ಹುಣಸೆ ಮರದ ಫಸಲು ಕೆಲವೊಮ್ಮೆ ಹೇರಳವಾಗಿರುತ್ತದೆ.

**ಮಜೂರಿ :-** ಸಾಮಾನ್ಯವಾಗಿ ಕೃಷಿ ಕಾರ್ಮಿಕರು ಮತ್ತಿತರ ಕೆಲಸಗಾರರೇ ಅಧಿಕವಾಗಿರುವ ಹಿರೇಹೆಗ್ಡಾಳ್ ಗ್ರಾಮದಲ್ಲಿ ಕಾರ್ಮಿಕರ ಶ್ರಮಕ್ಕೆ ತಕ್ಕ ಕೂಲಿ ದೊರೆಯುತ್ತದೆ ಎಂದು ಹೇಳಲು ಸಾಧ್ಯವಿಲ್ಲ. ಕೂಲಿಯು ತೀರಾ ಕಡಿಮೆಯಾಗಿರುತ್ತದೆ.

ಸಿಮೆಂಟ್, ಮಣ್ಣು ಇದರ ಕೆಲಸಗಳಿಗೆ ಗಂಡಸರಿಗೆ ರೂ. ೪೦ ರಿಂದ ೬೦ ರೂಪಾಯಿವರೆಗೆ ಕೂಲಿ ನೀಡಲಾಗುತ್ತಿದೆ. ಒಳ್ಳೆಯ ತಾಂತ್ರಿಕ ಕೆಲಸಗಳಿಗೆ ೧೦೦ ರೂಪಾಯಿ ಮಜೂರಿ ನೀಡಲಾಗುತ್ತದೆ. ಸಿಮೆಂಟ್, ಮಣ್ಣು ಇತ್ಯಾದಿ ಕೆಲಸಗಳಿಗೆ ಹೆಣ್ಣುಮಕ್ಕಳಿಗೆ ರೂ. ೩೦ ರಿಂದ ೪೦ ರವರೆಗೆ ಕೂಲಿ ನೀಡಲಾಗುತ್ತದೆ. ಈ ಕೆಲಸವು ನಿರ್ದಿಷ್ಟ ಅವಧಿಯಲ್ಲಿ ಮಾತ್ರ ಇರುತ್ತದೆ. ಹುಣಸೆ ಮರದ ಬೆಳೆ ಹೊಡೆಯಲು ಸಾಮಾನ್ಯವಾಗಿ ಗಂಡಸರಿಗೆ ೨೫ ರೂಪಾಯಿ ಹಾಗೂ ಹೆಂಗಸರಿಗೆ ರೂ. ೨೦ ರ ಮಜೂರಿ ಕೊಡಲಾಗುತ್ತದೆ. ಹುಣಸೆ ಹಣ್ಣಿನ ಬೀಜ ತೆಗೆಯುವವರಿಗೆ ಬುಟ್ಟಿಗೆ ೬ ರೂಪಾಯಿ ಕೊಡಲಾಗುತ್ತದೆ. ಬುಟ್ಟಿಯಲ್ಲಿ ೬ ಕಿಲೋ ಗ್ರಾಂ ನಷ್ಟು ಹುಣಸೆ ಹಣ್ಣು ಇರುತ್ತದೆ. ಬೇಸಾಯದ ಕೆಲಸಕ್ಕೆ ಗಂಡಸರಿಗೆ ೨೦ ರೂಪಾಯಿ ಮತ್ತು ಹೆಣ್ಣುಮಕ್ಕಳಿಗೆ ೧೫ ರೂ. ಹಾಗೂ ರಸ್ತೆ ಕೆಲಸಕ್ಕೆ ರೂ. ೩೫ ರಿಂದ ೪೦ ರೂಪಾಯಿಗಳ ಕೂಲಿ ನೀಡಲಾಗುತ್ತಿದೆ. ದಿನಗೂಲಿ ಸಾಮಾನ್ಯವಾಗಿ ಗಂಡಸರಿಗೆ ರೂ. ೨೫ ಆದರೆ ಹೆಣ್ಣುಮಕ್ಕಳಿಗೆ ರೂ. ೧೫ ಆಗಿರುತ್ತದೆ.

ಹಿರೇಹೆಗ್ಡಾಳ್ ಗ್ರಾಮದ ಸಾಣೇಹಳ್ಳಿಯಲ್ಲಿ ಇಟ್ಟಿಗೆ ಕೆಲಸವನ್ನು ಸಹ ಮಾಡುತ್ತಾರೆ. ಸಾವಿರ ಇಟ್ಟಿಗೆ ನಿರ್ಮಾಣ ಮಾಡಿದರೆ ೨೦೦ ರೂಪಾಯಿಗಳ ಕೂಲಿ ದೊರೆಯುತ್ತದೆ. ೬ ಮಂದಿ ಕೆಲಸಗಾರರು ಒಂದು ದಿನಕ್ಕೆ ೩ ಸಾವಿರ ಇಟ್ಟಿಗೆ ಮಾಡಬಹುದಾಗಿದೆ. ಇದರಿಂದ ಒಬ್ಬೊಬ್ಬರು ದಿನಾ ನೂರು ರೂಪಾಯಿ ಕೂಲಿ ಪಡೆಯುತ್ತಾರೆ. ಹೊಲದೊಡೆಯನೆ ಸುಡಲು ಕಟ್ಟಿಗೆಯನ್ನು ಒದಗಿಸದರೂ, ಇಟ್ಟಿಗೆ ತಯಾರಿಸುವುದು ಬಹು ಕಷ್ಟದ ಕೆಲಸವಾಗಿದ್ದು, ದೈಹಿಕವಾಗಿ ಹೆಚ್ಚಿನ ದಣಿವಾಗುತ್ತದೆ ಎಂದು ಕೂಲಿಕಾರರ ಅಭಿಪ್ರಾಯ. ಮಳೆಗಾಲ ಹೊರತು ಪಡಿಸಿದರೆ ಉಳಿದೆಲ್ಲಾ ಕಾಲಮಾನದಲ್ಲೂ ಇಟ್ಟಿಗೆ ಸಿದ್ಧಪಡಿಸುವ ಅವಕಾಶಗಳಿದ್ದರೂ, ತೊಡಗಿಸಿಕೊಳ್ಳುವವರ ಸಂಖ್ಯೆ ಬಹಳ ಕಡಿಮೆ ಎನ್ನಬೇಕು.

**ಪರ್ಯಾಯ ಉದ್ಯೋಗ :-** ಹಿರೇಹೆಗ್ಡಾಳ್ ಕೃಷಿ ಪ್ರಧಾನ ಗ್ರಾಮವಾದುದರಿಂದ ಪ್ರಾಥಮಿಕ ವಲಯದಲ್ಲಿ ಹೆಚ್ಚಿನ ದುಡಿಯುವ ವರ್ಗ ಕೇಂದ್ರಿಕೃತವಾಗಿದೆ. ಆದರೆ ಪ್ರಾಥಮಿಕ ವಲಯದಿಂದ ಬರುವ ವರಮಾನ ಹಂಚಿಕೆ ಅಥವಾ ಪ್ರತಿಫಲ ಅದು ಸೇವೆಗೆ ತಕ್ಕ ಫಲ ಆಗಿರುತ್ತದೆಯೆ ಇಲ್ಲವೆ ಎಂಬುದರಲ್ಲಿ ಅನುಮಾನಗಳು ಇರುತ್ತವೆ. ಸಾಮಾನ್ಯವಾಗಿ ಕೃಷಿ ಪ್ರಧಾನ ಅರ್ಥ ವ್ಯವಸ್ಥೆಯಲ್ಲಿ ಜೋಳ, ಭತ್ತ, ಶೇಂಗಾ, ಸೂರ್ಯಕಾಂತಿ ಇತ್ಯಾದಿ ಬೆಳೆಗಳು ನಗದು ಬೆಳೆಗಳು ಅಥವಾ ವಾಣಿಜ್ಯ ಬೆಳೆಗಳು ಅಲ್ಲದಿರುವುದರಿಂದ ಇವುಗಳ ಗ್ರಾಮದೊಳಗೆ ವಸ್ತು ವಿನಿಮಯದ ರೂಪದಲ್ಲೂ ಚಲಾವಣೆಯಾಗಬಹುದು. ಕೃಷಿ ಅಥವಾ ಪ್ರಾಥಮಿಕ ವಲಯದ ದುಡಿಮೆ ಬಿಟ್ಟರೆ ಹೇಳಿಕೊಳ್ಳುವಂತಹ ವಾಣಿಜ್ಯ ಬೆಳೆಗಳು ಮತ್ತು ಕೃಷಿಯೇತರ ಚಟುವಟಿಕೆಗಳು ಈ ಗ್ರಾಮದಲ್ಲಿ ಇಲ್ಲದ ಕಾರಣ ಜನರ ಬದುಕು ದುಸ್ತರವಾಗಿದೆ. ಗ್ರಾಮಸ್ಥರೊಬ್ಬರು ತಿಳಿಸುವಂತೆ ಒಕ್ಕಲುತನ ಬಿಟ್ಟರೆ ಊರು ಬಿಡಬೇಕು. ಏನೀ ಊರು ಬಿಡುವುದು ಎಂದ ಕೇಳಿದರೆ ಸಾಮಾನ್ಯವಾಗಿ ಕೊಯಿಲು ಅಥವಾ ನೇಜಿ ಸಂದರ್ಭದಲ್ಲಿ ಮಾತ್ರ ಭತ್ತದ ಅಥವಾ ಇತರ ಬೆಳೆಗಳ ಕೆಲಸ ಇರುವುದು ಇನ್ನುಳಿದಂತೆ ದಿನಗೂಲಿ ಕೆಲಸಗಳು ಕಡಿಮೆ ಅಥವಾ ಕೆಲವೊಮ್ಮೆ ಇಲ್ಲವೇ ಇಲ್ಲ ಎನ್ನಬಹುದಾದುದರಿಂದ ಊರಿನ ಗಂಡು ಹಾಗೂ ಹೆಣ್ಣುಮಕ್ಕಳು

ಕೊಯಿಲು ಅಥವಾ ನೇಜಿಯ ನಂತರ ಕಾಫಿ ಸೀಮೆಗೆ ಅಥವಾ ಮಂಗಳೂರಿಗೆ ದುಡಿಯಲಿಕ್ಕೆ ಹೋಗುತ್ತಾರೆ. ಗದ್ದೆಗಳಿಗೆ ನೀರಿನ ಆಶ್ರಯ ಇರುವವರು ಮಾತ್ರ ತಮ್ಮ ಭುಮಿಯಲ್ಲಿ ಕೃಷಿ ಮಾಡುತ್ತಾರೆ.

ಸಾಮಾನ್ಯವಾಗಿ ಕೃಷಿ ಮತ್ತು ಕೃಷಿಯೇತರ ಉದ್ಯೋಗಗಳು ಕಾಫಿ ಸೀಮೆಯಲ್ಲಿ ಅಥವಾ ಮಂಗಳೂರಿನಲ್ಲಿ ದೊರೆಯುತ್ತವೆ. ಕಾಫಿಯು ವಾಣಿಜ್ಯ ಬೆಳೆ ಆಗಿರುತ್ತದೆ. ಮಂಗಳೂರಿನಲ್ಲಿ ಕಟ್ಟಡ ನಿರ್ಮಾಣದ ಕೆಲಸ, ಕೈಗಾರಿಕೆಗಳು ಹಾಗೂ ರಸ್ತೆ ನಿರ್ಮಾಣದ ಕೆಲಸ ಕಾರ್ಯಗಳು ವ್ಯಾಪಕವಾಗಿ ದೊರೆಯುತ್ತವೆ. ಗ್ರಾಮಸ್ಥರೊಬ್ಬರು ಹೇಳುವಂತೆ ಕಾಫಿ ಸೀಮೆಯವರು ಒಬ್ಬನಿಗೆ ೧೦೦೦ ರೂಪಾಯಿಗಳನ್ನು ಕೊಟ್ಟರೆ ಅದನ್ನು ತೀರಿಸುವ ತನಕ ಕೆಲಸ ಮಾಡಬೇಕಾಗುತ್ತದೆ. ಸಾಮಾನ್ಯವಾಗಿ ಮನೆಯ ಹೆಂಗಸರನ್ನು ಕೆಲಸಕ್ಕೆ ಹಾಗೂ ಅಡುಗೆ ಮಾಡುವುದಕ್ಕೂ ಸಹ ಕರೆದುಕೊಂಡು ಹೋಗುತ್ತಾರೆ. ಈ ಕೆಲಸ ಕಾರ್ಯಗಳ ಜವಾಬ್ದಾರಿಯನ್ನು ನೋಡಿಕೊಳ್ಳಲು ಮತ್ತು ಕೆಲಸಗಾರರನ್ನು ಕರೆತರಲು ಕೆಲವು ಬ್ರೋಕರ್ ಅಥವಾ ಮಧ್ಯವರ್ತಿಗಳಿರುತ್ತಾರೆ. ಅವರು ಒಂದು ವಾಹನದಲ್ಲಿ ಬಂದು ಕೆಲಸಕ್ಕೆ ಆಳುಗಳನ್ನು ಕರೆದುಕೊಂಡು ಹೋಗುತ್ತಾರೆ. ಕೆಲಸ ಮುಗಿದ ಬಳಿಕ ಅಂದರೆ ಕೊಟ್ಟ ಹಣದ ಪ್ರತಿಫಲ ಅದಕ್ಕೆ ಸಮಾನವಾದ ದುಡಿಮೆ ಆದನಂತರ ಇವರನ್ನು ಬಿಟ್ಟುಬಿಡುತ್ತಾರೆ. ಇದು ಒಂದು ರೀತಿಯಲ್ಲಿ ಜೀತದಾಳು ಮಾದರಿಯನ್ನೆ ಹೋಲುವಂತಿದೆ. ಆದರೆ ದಿನಗೂಲಿಗಿಂತ ಹೆಚ್ಚಿನ ಮಜೂರಿ ದೊರೆಯುವುದರಿಂದ ಕೆಲವು ಮಂದಿ ಉತ್ತಮ ಉಳಿತಾಯವನ್ನು ಮಾಡುತ್ತಾರೆ ಎಂದು ಹಳ್ಳಿಗರು ಹೇಳುತ್ತಾರೆ.

**ಸಾರಾಯಿ ಅಂಗಡಿ :-** ಕೂಡ್ಲಿಗಿ ತಾಲ್ಲೂಕಿನ ಪೇಟೆಯ ಮದ್ಯಭಾಗದಲ್ಲಿ ಒಂದು ಸಾರಾಯಿ ಅಂಗಡಿ ಇರುವಂತೆ ಹಿರೇಹೆಗ್ಡಾಳ್ ಗ್ರಾಮದಲ್ಲೂ ಸಾರಾಯಿ ಅಂಗಡಿಗಳಿವೆ. ದಿನವಿಡೀ ದುಡಿತದ ದುಗುಡವನ್ನು ಮರೆಯಲು ಕೂಲಿಯಾಳು ಜನಗಳು ಹೆಚ್ಚಾಗಿ ಸಾರಾಯಿ ಅಂಗಡಿಯ ಮೊರೆ ಹೋಗುತ್ತಾರೆ. ಹಿರೇಹೆಗ್ಡಾಳ್ ಗ್ರಾಮ ಪಂಚಾಯತ್ ಹತ್ತಿರದಲ್ಲಿ ಒಂದು ಸಾರಾಯಿ ಅಂಗಡಿ ಇದ್ದು ಒಂದು ಪ್ಯಾಕೆಟ್‌ಗೆ ೮.೫೦ ರೂಪಾಯಿ ದರ ಇದೆ. ಇಲ್ಲಿ ದಿನಾ ನೂರು ಪ್ಯಾಕೆಟ್ ಸಾರಾಯಿ ವ್ಯಾಪಾರ ಆಗುತ್ತದೆ. ಸಾಣೇಹಳ್ಳಿಯಲ್ಲಿಯೂ ಒಂದು ಸಾರಾಯಿ ಅಂಗಡಿ ಇದೆ. ಬೊಪ್ಪಲಾಪುರ ಮತ್ತು ಸಾಸಲವಾಡದಲಿ ಸಾರಾಯಿ ಅಂಗಡಿ ಇಲ್ಲದಿದ್ದರೂ ಅಲ್ಲಲ್ಲಿ ಸಾರಾಯಿ ದೊರೆಯುವುದೆಂದು ಗ್ರಾಮಸ್ಥರು ಹೇಳುತ್ತಾರೆ.

ಸಾರಾಯಿ ಅಂಗಡಿಗೆ ಸಂಬಂಧಿದಂತೆ ಕೆಲವು ಗ್ರಾಮಗಳು ಅವುಗಳದೇ ಆದ ಹಣಕಾಸಿನ ಮಾದರಿ ವಿನಿಮಯ ಟೋಕನ್‌ಗಳನ್ನು ಚಲಾಯಿಸುತ್ತವೆ. ಸಾಮಾನ್ಯವಾಗಿ ೧೦ ರೂಪಾಯಿ ನೀಡಿ ಒಂದು ಪ್ಯಾಕೆಟ್ ಸಾರಾಯಿ ಪಡೆದರೆ ೧.೫೦ ರೂಪಾಯಿ ಹಿಂದಕ್ಕೆ ಪಡೆಯಬೇಕಾಗುತ್ತದೆ. ಚಿಲ್ಲರೆಯ ಅಭಾವದ ಕಾರಣ ಸಾರಾಯಿ ಅಂಗಡಿಗಳು ೧.೫೦ ರೂಪಾಯಿ ಟೋಕನ್‌ಗಳನ್ನು ಗಿರಾಕಿಗಳಿಗೆ ನೀಡಿ ಮರುದಿನ ಇದನ್ನು ಪುನಃ ಸಾರಾಯಿ ಅಂಗಡಿಯಲ್ಲಿ ಸಾರಾಯಿಗೆ ವಿನಿಮಯ ಮಾಡುತ್ತಾರೆ. ಈ ಟೋಕನ್ ಆ ಊರಿನ ಸಾರಾಯಿ ಅಂಗಡಿಗೆ ಮಾತ್ರ ಸೀಮಿತವಾಗಿರುತ್ತದೆ. ಇಂತಹ ಹಲವಾರು ಉದಾಹರಣೆಗಳು ಒಂದೊಂದು ಗ್ರಾಮದಲ್ಲಿ ಕಂಡುಬರುತ್ತವೆ.

**ರಾಜಕೀಯ ಚಿತ್ರಣ :-** ಹಿರೇಹೆಗ್ಡಾಳ್ ಗ್ರಾಮ ಪಂಚಾಯತ್ ಕೂಡ್ಲಿಗಿ ತಾಲ್ಲೂಕಿನ ಕೂಡ್ಲಿಗಿ ವಿಧಾನಸಭಾ ವ್ಯಾಪ್ತಿಗೆ ಒಳಪಡುತ್ತದೆ. ೧೯೮೩ ರ ಪಂಚಾಯತ್ ಕಾಯ್ದೆಯನ್ವಯ ಈ ಗ್ರಾಮವು ಶಿವಪುರ ಮಂಡಲ ಪಂಚಾಯತಿಗೆ ಒಳಪಟ್ಟಿತ್ತು.

ಹಿರೇಹೆಗ್ಡಾಳ್ ಗ್ರಾಮ ಪಂಚಾಯತ್ ಮುಖ್ಯ ಕಚೇರಿಯು ಹಿರೇಹೆಗ್ಡಾಳ್ ಬಸ್‌ನಿಲ್ದಾಣದಿಂದ ಸುಮಾರು ಒಂದೂವರೆ ಫರ್ಲಾಂಗ್ ದೂರದಲ್ಲಿ ಪೂರ್ವಕ್ಕಿದೆ. ಬಸ್‌ನಿಲ್ದಾಣದಿಂದ ಕೂಡ್ಲಿಗಿ ಪೇಟೆಗೆ ೯ ಕಿ. ಮೀ. ದೂರವಿದೆ. ಸಾಮಾನ್ಯವಾಗಿ ಹಳ್ಳಿಗಳಲ್ಲಿ ಪಂಚಾಯತ್ ರಾಜಕಾರಣವು ಬಹಳ ವಿಶಿಷ್ಟತೆಯಿಂದ ಕೂಡಿರುತ್ತದೆ. ಹಿಂದಿನಿಂದಲೂ ಇಲ್ಲಿ ಸ್ಥಳೀಯಾಡಳಿತೆಯು ಪ್ರಚಲಿತದಲ್ಲಿತ್ತು. ೧೯೫೯ ರ ಕಾಯ್ದೆಯನ್ವಯ ಗ್ರಾಮ ಪಂಚಾಯತ್ ವ್ಯವಸ್ಥೆ ಇತ್ತು ಎಂದು ಶ್ರೀ ಶೆಟ್ಟಿಗುರುಸಿದ್ಧಪ್ಪನವರು ಹೇಳುತ್ತಾರೆ. ಇವರು ಸುಮಾರು ೧೨ ವರ್ಷಗಳಿಗೂ ಹೆಚ್ಚು ಕಾಲ ಪಂಚಾಯತ್ ಅಧ್ಯಕ್ಷರಾಗಿದ್ದರು. ಅವರು ತಿಳಿಸುವಂತೆ ಸದಸ್ಯರು ವಿವಿಧ ಜಾತಿ ವರ್ಗಗಳಿಗೆ ಸೇರಿದ್ದರು

ಹಾಗೂ ಮಹಿಳೆಗೆ ಮೀಸಲಾತಿ ಆಗಲೂ ಚಾಲ್ತಿಯಲ್ಲಿತ್ತು ಎನ್ನುತ್ತಾ ರೆ. ಸಾಮಾನ್ಯವಾಗಿ ಮಹಿಳೆಯನ್ನು ನೇಮಕಮಾಡುವುದರ ಮೂಲಕ ಸಹಕರಣಗೊಳಿಸಲಾಗುತ್ತಿತ್ತು.

**೧೯೮೩ ರ ಕಾಯ್ದೆ :-** ೧೯೮೩ ರ ಕರ್ನಾಟಕ ಜಿಲ್ಲಾಪರಿಷತ್ತುಗಳು, ತಾಲ್ಲೂಕು ಪಂಚಾಯತ್ ಸಮಿತಿಗಳು, ಮಂಡಲ ಪಂಚಾಯತ್‌ಗಳು ಮತ್ತು ನ್ಯಾಯಪಂಚಾಯತ್‌ಗಳ ಕಾಯ್ದೆಯನ್ವಯ ಈ ಗ್ರಾಮವು ಶಿವಪುರ ಮಂಡಲಕ್ಕೆ ಸೇರಿತ್ತು. ಮಹಿಳಾ ಸದ್ಯರು ಇದ್ದರು. ಗ್ರಾಸಭೆಯು ಆಗಾಗ ನಡೆಯುತ್ತಿತ್ತು. ಕೆಲವೊಮ್ಮೆ, ತಾಲ್ಲೂಕು ಮಟ್ಟದ ಅಧಿಕಾರಿಗಳು ಸಭೆಯಲ್ಲಿ ಭಾಗವಹಿಸಿದ್ದರು. ಹೊಂದಾಣಿಕೆ ಪ್ರವೃತ್ತಿಗಿಂತಲೂ ಗಲಾಟೆ ವಾತಾವರಣ ಸೃಷ್ಟಿಯಾಗುತ್ತಿತ್ತು. ಸಮಜಾಯಿಸುವಿಕೆ ಹೆಚ್ಚಿನ ಅಸ್ಪದವಿರಲಿಲ್ಲ. ನಿರೀಕ್ಷಿತ ಮಟ್ಟದ ಅಭಿವೃದ್ಧಿ ಕಾರ್ಯುಗಳು ಗ್ರಾಮದಲ್ಲಿ ಜರಗಲಿಲ್ಲವೆಂದು ತಿಳಿಯುತ್ತದೆ.

೧೯೮೩ನೇ ಪಂಚಾಯತ್ ಕಾಯ್ದೆಯ ನಿಯಮಾವಳಿಗಳು ಪರಿಣಾಮಕಾರಿಯಾಗಿ ಜಾರಿಗೆ ಬರಲಿಲ್ಲ ಎಂದು ತಿಳಿದುಬರುತ್ತದೆ. ಅದು ಇರುತ್ತಿದ್ದರೆ ಕಾಯ್ದೆಯಲ್ಲಿ ಗ್ರಾಮಸಭೆ ಮತ್ತು ಅವುಗಳ ಅಸ್ತಿತ್ವದಿಂದಾಗುವ ಹಲವಾರು ರಚನಾತ್ಮಕ ಕಾರ್ಯಗಳು ಯಾವುದು ಅನುಷ್ಠಾನಗೊಳ್ಳಲಿಲ್ಲ. ಇದಕ್ಕೆ ಆಶ್ಚರ್ಯಪಡಬೇಕಾದ ಆಗತ್ಯವೂ ಇಲ್ಲ. ಯಾಕೆಂದರೆ ಜಿಲ್ಲಾಪರಿಷತ್ ಜಿಲೆಯಲ್ಲಿ ಉನ್ನತ ಕಾರ್ಯಾಂಗವಾಗಿದ್ದು ಅದು ಹೆಚ್ಚಿನ ಅಧಿಕಾರಿಗಳೊಂದಿಗೆ ಕಾರ್ಯನಿರ್ವಹಿಸುತಿತ್ತು. ಮಧ್ಯೆ ಅಧಿಕಾರ ರಹಿತವಾಗಿದ್ದ ತಾಲ್ಲೂಕು ಪಂಚಾಯತ್ ಸಮಿತಿ ಹೆಚ್ಚಾಗಿ ನಾಮ ನಿರ್ದೇಶಿತ ಅಂಗವಾಗಿತ್ತು. ಮಂಡಲ ಪಂಚಾಯತ್ ಮಂಡಲ ವ್ಯಾಪ್ತಿಯಲ್ಲಿ ಹೆಚ್ಚು ಅಧಿಕಾರಯುತವಾಗಿತ್ತು. ಮಂಡಲ ಪ್ರಧಾನರೆಂದರೆ ಮಂಡಲ ಪಂಚಾಯತ್‌ನ ಕಾರ್ಯಾಂಗದ ಮುಖ್ಯಸ್ಥರಾಗಿದ್ದರು. ಗ್ರಾಮಸಭೆ ನಿರೀಕ್ಷಿತ ಮಟ್ಟದಲ್ಲಿ ಕಾರ್ಯರೂಪಕ್ಕೆ ಬಂದಿಲ್ಲ ಹಾಗೂ ಇದು ಕರ್ನಾಟಕದಲ್ಲಿ ಪ್ರಾರಂಭಗೊಳ್ಳಲೇ ಇಲ್ಲ ಎಂದು ಡಾ. ಜೋಶಿಯವರು ತಮ್ಮ ಅಧ್ಯಯನದಲ್ಲಿ ತಿಳಿಸುತ್ತಾರೆ. ಆದ್ದರಿಂದ ಬಳ್ಳಾರಿ ಜಿಲ್ಲೆಯಲ್ಲಿ ಅಥವಾ ಕೂಡ್ಲಿಗಿಯ ಹಿರೇಹೆಗ್ಡಾಳ್‌ನಲ್ಲಿ ಈ ಕೆಳಮಟ್ಟದ ವ್ಯವಸ್ಥೆ ಸರಿಯಾಗಿ ಕಾರ್ಯರೂಪಕ್ಕೆ ಬಂದಿಲ್ಲವೆಂದರೆ ಆಶ್ಚರ್ಯವೇನಿಲ್ಲ. ಏಕೆಂದರೆ ಮುಂದುವರಿದ ಜಿಲ್ಲೆಗಳಲ್ಲಿನ ತಳಮಟ್ಟದ ಸಂಸ್ಥೆಯ ಸ್ಥಿತಿಯೂ ಹೇಳಿಕೊಳ್ಳುವಷ್ಟು ಉತ್ತಮವಾಗಿರಲಿಲ್ಲ ಎಂಬುದು ಸಹ ಗಮನಾರ್ಹ. ಆದರೂ ಒಂದು ಬದಲಾವಣಾ ಹಂತದ ಪ್ರಕ್ರಿಯೆ ಪ್ರಾರಂಭವಾಯಿತು ಅಥವಾ ತಳವೂರಲು ದಾಪುಗಾಲು ಹಾಕಿತು ಎನ್ನಬಹುದು. ೧೯೯೩ ರ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮದನ್ವಯ ಗ್ರಾಮ ಪಂಚಾಯತ್ ಚುನಾವಣೆಗಳು ೧೯೯೩ ಡಿಸೆಂಬರ್‌ನಲ್ಲಿ ಜರಗಿದವು. ಹೊಸ ಗ್ರಾಮ ಪಂಚಾಯತ್ ವ್ಯವಸ್ಥೆ ೧೯೯೪ ಜನವರಿಯಿಂದ ಅನಿಷ್ಠಾನಕ್ಕೆ ಬಂದವು.

**ಹಿರೇಹೆಗ್ಡಾಳ್ ಗ್ರಾಮ ಪಂಚಾಯತ್ ಮತ್ತು ೧೯೯೩ರ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ**

೧೯೯೩ರ ಪಂಚಾಯತ್ ಅಧಿನಿಯಮದಂತೆ ಹಿರೇಹೆಗ್ಡಾಳ್ ಗ್ರಾಮ ಪಂಚಾಯತ್‌ಗೆ ಚುನಾವಣೆಗಳು ನಡೆದವು. ಈ ಗ್ರಾಮ ಪಂಚಾಯತ್‌ನಲ್ಲಿ ೧೦ ಮಂದಿ ಸದಸ್ಯರಿದ್ದಾರೆ. ಇವು ಹಿರೇಹೆಗ್ಡಾಳ್, ಸಾಸಲವಾಡ ಮತ್ತು ಬೊಪ್ಪಲಾಪುರ ಹಾಗೂ ಸಾಣೇಹಳ್ಳಿಗಳನ್ನೊಳಗೊಂಡ ಗ್ರಾಮ ಪಂಚಾಯತ್ ಆಗಿರುವುದರಿಂದ ಪ್ರತಿ ಗ್ರಾಮದಿಂದಲೂ ಸದಸ್ಯರನ್ನು ಆರಿಸಲಾಯಿತು. ಹಿರೇಹೆಗ್ಡಾಳ್ ಗ್ರಾಮದಿಂದ ೪ ಮಂದಿಯನ್ನು, ಸಾಸಲವಾಡದಿಂದ ೩ ಮಂದಿ, ಬೊಪ್ಪಲಾಪುರದಿಂದ ಇಬ್ಬರು ಹಾಗೂ ಸಾಣೇಹಳ್ಳಿಯಿಂದ ಒಬ್ಬರನ್ನು ಅಯ್ಕೆ ಮಾಡಲಾಯಿತು. ಇದರಲ್ಲಿ ಹಿರೇಹೆಗ್ಡಾಳ್, ಮತ್ತು ಸಾಸಲವಾಡ ಎಲ್ಲಾ ಅಭ್ಯರ್ಥಿಗಳು ಚುನಾಯಿತರಾದರೆ ಬೊಪ್ಪಲಾಪುರ ಮತ್ತು ಸಾಣೇಹಳ್ಳಿಯ ಇಬ್ಬರು ಅಭ್ಯರ್ಥಿಗಳು ಅವಿರೋಧವಾಗಿ ಆಯ್ಕೆಯಾದರು. ಬೊಪ್ಪಲಾಪುರದ ಇನ್ನೊಬ್ಬ ಅಭ್ಯರ್ಥಿ ಚುನಾಯಿತರಾದರು.

**ಚುನಾವಣೆ :-** ಸಾರ್ವತ್ರಿಕ ವಯಸ್ಕ ಮತದಾನ ಪದ್ಧತಿಯನ್ನು ೧೯೫೧ ರಿಂದ ಭಾರತದ ಸಂವಿಧಾನ ಜಾರಿಗೆ ತಂದಿದೆ ಮತ್ತು ಇದು ನಮ್ಮ ಪ್ರಜಾತಾಂತ್ರಿಕ ವ್ಯವಸ್ಥೆಯ ಮೂಲ ಮಂತ್ರವೂ ಆಗಿದೆ. ಯಾಕೆಂದರೆ ಸ್ವಾತಂತ್ರ್ಯ ಪೂರ್ವದಲ್ಲಿ ಚುನಾವಣೆಗಳು ವ್ಯಾಪಕವಾಗಿ ಸಾರ್ವತ್ರಿಕವಾಗಿರದೆ ಸೀಮಿತ ಮತದಾನವಾಗಿತ್ತು. ಇದು ಕೆಲವು ಅರ್ಹತೆಗಳನ್ನು ಹೊಂದಿದವರಿಗೆ ಮಾತ್ರ ದೊರಕುತ್ತಿತ್ತು (ಉದಾಹರಣೆಗೆ ಆಸ್ತಿ, ಅಂತಸ್ತು, ಶಿಕ್ಷಣ ಮುಂತಾದ ಗಣ್ಯ ಲಕ್ಷಣಗಳು) ಅಂದರೆ ಚುನಾವಣೆ ಅಥವಾ ಮತದಾನವು ಹೆಚ್ಚಾಗಿ

ಗಣ್ಯವರ್ಗದವರಿಗೆ ಮೀಸಲಿರಿಸಿದಂತಿತ್ತು. ಆದರೆ ಸಾರ್ವತ್ರಿಕ ವಯಸ್ಕ ಮತದಾನದಿಂದಾಗಿ ಈ ಅನಿಷ್ಟಗಳು ಕಳೆದು ಸರ್ವರಿಗೂ ಕೆಲವೊಂದು ಅನರ್ಹತೆಗಳನ್ನು ಹೊರತುಪಡಿಸಿ ಉಳಿದಂತೆ ಮತದಾನದ ಹಕ್ಕನ್ನು ನೀಡಲಾಯಿತು. ಮೊದಲಿಗೆ ಮತದಾನದ ವಯಸ್ಸು ೨೧ ಆಗಿತ್ತು. ಆದರೆ ಕೇಂದ್ರ ಸರಕಾರವು ಸಂವಿಧಾನಕ್ಕೆ ೬೧ ನೇ ತಿದ್ದುಪಡಿಯನ್ನು ತರುವುದರ ಮೂಲಕ ಮತದಾನದ ವಯಸ್ಸನ್ನು ೧೮ಕ್ಕೆ ಇಳಿಸಿ ಯುವಜನಾಂಗಕ್ಕೆ ಮತದಾನದ ಅವಕಾಶವನ್ನು ಇನ್ನಷ್ಟು ವಿಸ್ತರಿಸಿದೆ.

ಇದಕ್ಕೆ ಸ್ಪಂದಿಸಿ ಕರ್ನಾಟಕ ಸರಕಾರವು ದೇಶದಲ್ಲೆ ಪ್ರಥಮ ಬಾರಿಗೆ ಎಂಬಂತೆ ೧೯೮೭ ರಲ್ಲಿ ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆಗಳು ನಡೆಯುವಾಗ ಮತದಾನದ ವಯಸ್ಸು ೨೧ ರಿಂದ ೧೮ ಕ್ಕೆ ಇಳಿಸಿ ಮತದಾನವನ್ನು ಯುವನಾಂಗಕ್ಕೆ ಇನ್ನಷ್ಟು ವಿಸ್ತರಿಸಿ ದೇಶದ ಹೆಗ್ಗಳಿಕೆಗೆ ಪ್ರಶಂಸನೀಯವಾಗಿದೆ. ಕರ್ನಾಟಕದ ಈ ಯಶಸ್ಸನ್ನು ಕಂಡು ಆಂಧ್ರಪ್ರದೇಶ, ಮಹಾರಾಷ್ಟ್ರ ಹಾಗೂ ಇತರ ರಾಜ್ಯಗಳು ಅದನ್ನು ಪ್ರಯೋಗಾತ್ಮಕವಾಗಿ ಜಾರಿಗೆ ತಂದಿತು.

ಸಂವಿಧಾನದ ಈ ತಿದುಪಡಿ ಮತ್ತು ಸ್ಥಳೀಯ ಸಂಸ್ಥೆಗಳ ಚುನಾವಣೆ ಇವೆರಡೂ ಕರ್ನಾಟಕದಲ್ಲಿ ಏಕಕಾಲಕ್ಕೆ ವರದಾನವಾದಂತಾಯಿತು ಎಂಬುದು ಬಲ್ಲವರ ಅಭಿಪ್ರಾಯ. ೧೯೮೭ ರ ಚುನಾವಣೆಯಂತೆ ೧೯೯೩ ರ ಪಂಚಾಯತ್ ಚುನಾವಣೆಯು ವ್ಯಾಪಕಗೊಂಡು ಮಹತ್ತರವಾದ ಸ್ಥಾನವನ್ನು ಪಡೆದಿದೆ. ಇನ್ನಷ್ಟು ಯುವಜನರು ಪ್ರಜಾತಾಂತ್ರಿಕವಾಗಿ ಹಾಗೂ ರಾಜಕೀಯವಾಗಿ ಚುನಾವಣೆಯಲ್ಲಿ ಬಹಳಷ್ಟು ಉತ್ಸಾಹದಿಂದ ಈ ಕಾರ್ಯದಲ್ಲಿ ಭಾಗವಹಿಸಿದರು. ಇತ್ತೀಚೆಗೆ ನಡೆದ ೨೦೦೦ ನೇ ಸಾಲಿನ ಪಂಚಾಯತ್ ಚುನಾವಣೆಗಳು ಸಹ ಬಹಳಷ್ಟು ಆಸಕ್ತಿಯಿಂದ ಕೂಡಿದ್ದವು. ಇಲ್ಲಿ ಬಹಳ ಆಶ್ಚರ್ಯಕರ ಬೆಳವಣಿಗೆಯೆಂದರೆ ಅಭ್ಯರ್ಥಿಗಳ ಅವಿರೋಧ ಆಯ್ಕೆ. ಇದರಲ್ಲಿ ಅವಿರೋಧ ಎಂಬುದಕ್ಕೆ ಭಾರೀ ಅರ್ಥ ಮತ್ತು ಬೆಲೆ ಇದೆ ಎಂಬುದಾಗಿ ತಿಳಿದಿರುವುದು ಸಾರ್ವತ್ರಿಕ ಸತ್ಯವಾಗಿದೆ. ಅವಿರೋಧವಾಗಿ ಆಯ್ಕೆ ಬಯಸುವ ಹೆಚ್ಚಿನ ಅಭ್ಯರ್ಥಿಗಳು ಒಂದಿ ನಿರ್ದಿಷ್ಟ ಮೊತ್ತವನ್ನು ಆ ಗ್ರಾಮದ ಅಭಿವೃದ್ಧಿಗೆ ತಾನು ನೀಡುವುದಾಗಿ ಹೇಳುತ್ತಾನೆ. ನಾಲ್ಕು ಅಥವಾ ಐದು ಮಂದಿ ಅಭ್ಯರ್ಥಿಗಳು ಚುನಾವಣೆಗೆ ಸ್ಪರ್ಧಿಸಿದಲ್ಲಿ ಬಹಳಷ್ಟು ಹಣವೂ ವ್ಯಯವಾಗುತ್ತದೆ. ಆದ್ದರಿಂದ ಈ ನಾಲ್ಕೈದು ಅಭ್ಯರ್ಥಿಗಳಲ್ಲಿ ಪ್ರಬಲನಾದವನು ಉಳಿದವರು ಖರ್ಚು ಮಾಡುವ ಹಣಕ್ಕಿಂತ ಸ್ವಲ್ಪ ಹೆಚ್ಚಿಗೆ ಸೇರಿಸಿ ತಾನು ಈ ಮೊತ್ತವನ್ನು ಗ್ರಾಮದ ಅಭಿವೃಧಿಗೆ ನೀಡುವುದರಿಂದ ತನ್ನನ್ನು ಅವಿರೋಧವಾಗಿ ಆಯ್ಕೆ ಮಾಡಬೇಕೆಂದು ಕೋರುವನು. ಇದಕ್ಕೆ ಗ್ರಾಮಸ್ಥರು ಮತ್ತಿತರ ಸ್ಪರ್ಧಾಕಾಂಕ್ಷಿಗಳು ಒಪ್ಪಿಗೆ ನೀಡುತ್ತಾರೆ. ಇದರಿಂದ ಚುನಾವಣಾ ವಿಷಯವು ಅತಿ ಸೂಕ್ಷ್ಮವಾಗಿ ಬಗೆಹರಿದು ಅವಿರೋಧ ಆಯ್ಕೆ ನಡೆಯುತ್ತದೆ. ಇದು ರಾಜ್ಯಾದ್ಯಂತ ನಡೆದಂತೆ ವರದಿಯಾಗಿದೆ. ಸ್ವತಃ ಮುಖ್ಯಮಂತ್ರಿಯವರ ಸ್ವಕ್ಷೇತ್ರದಲ್ಲಿ ನಡೆದಿದೆ ಎಂದರೆ ಇದರ ವ್ಯಾಪ್ತಿ ಮತ್ತು ಪರಿಣಾಮವನ್ನು ಊಹಿಸಬಹುದು.

ಒಂದರ್ಥದಲ್ಲಿ ಇದು ಗ್ರಾಮಸ್ಥರ ರಾಜಕೀಯ ಹಕ್ಕನ್ನು ಮೊಟಕುಗೊಳಿಸಿದಂತಿದೆ. ಪ್ರಜಾತಾಂತ್ರಿಕವಾದ ಮತದಾನದ ಹಕ್ಕು ಗ್ರಾಮಸ್ಥರ ಬರೀ ರಾಜಕೀಯ ಹಕ್ಕು ಮಾತ್ರವಲ್ಲ ಜನಾಭಿಪ್ರಾಯದ ಒಂದು ಪರಿಣಾಮಕಾರಿ ಆಯುಧವೂ ಆಗಿದೆ. ಅವಿರೋಧವಾಗಿ ಆಯ್ಕೆ ಆಗುವವರ ಸಾಮಾಜಿಕ ನೆಲೆಗಳನ್ನು ಅರಿತರೆ ಇದು ಜನಾದೇಶವೋ ಅಥವಾ ಸ್ಥಾಪಿತ ಹಿತಾಸಕ್ತಿಯ ಭದ್ರತೆಯೋ ಎಂಬುದು ಸ್ಪಷ್ಟವಾಗುತ್ತದೆ. ಸರ್ವಸಂಮತಿಯಿಂದ ಅಂದರೆ ಜನಾಭಿಪ್ರಾಯದ ಒಲವಿನಿಂದ ಅವಿರೋಧವಾಗಿ ಆಯ್ಕೆ ಆಗುವ ಅಭ್ಯರ್ಥಿ ಮತ್ತು ಈ ಮೇಲಿನ ರೀತಿಯಿಂದ ಅವಿರೋಧವಾಗಿ ಆಯ್ಕೆ ಯಾಗುವ ಆಭ್ಯರ್ಥಿಗೆ ಬಹಳ ವ್ಯತ್ಯಾಸಗಳಿವೆ ಎಂಬುದು ಅಷ್ಟೇ ಸತ್ಯ. ಜನಾದೇಶದ ಒಲವಿನಿಂದ ಆಯ್ಕೆಯಾಗುವ ಆಭ್ಯರ್ಥಿಯು ಜನಾಭಿಪ್ರಾಯವನ್ನು ಗೆದ್ದರೆ ಮೇಲಿನ ಪ್ರಕ್ರಿಯೆಯಿಂದ ಆಯ್ಕೆಯಾದ ಅಭ್ಯರ್ಥಿಯು ಜನಾದೇಶವನ್ನು ಕಗ್ಗೊಲೆ ಮಾಡಿದಂತಾಗುತ್ತದೆ ಎಂಬುದು ಉಲ್ಲೇಖನೀಯ. ಈ ರೀತಿಯಿಂದ ಆದ ಗ್ರಾಮ ಪಂಚಾಯತ್‌ನ ಗ್ರಾಮಸಭೆಯು ಹೇಗಿರಬಹುದು ಮತ್ತು ಆ ಗ್ರಾಮದ ಗ್ರಾಮಸಭೆ ಸದಸ್ಯರಿಗೆ ಈ ಅಭ್ಯರ್ಥಿಯು ಯಾವ ರೀತಿ ಉತ್ತರದಾಯಿಯಾಗಬಲ್ಲದು ಎಂಬುದು ಮಹತ್ತರವಾದ ಪ್ರಶ್ನೆ.

ಈ ರೀತಿಯ ಅವಿರೋಧ ಆಯ್ಕೆ ವಿಧಾನದಲ್ಲಿ ಒಮ್ಮತ ಎಂಬುದು ಒಂದು ಸಂದೇಹಾತ್ಮಕ ಕಲ್ಪನೆಯಾಗಿದೆ. ಯಾಕೆಂದರೆ ಇದು ಅವಿರೋಧವಾಗಿ ಸ್ಪರ್ಧಿಸುವ ಅಭ್ಯರ್ಥಿಯ ವ್ಯಕ್ತಿತ್ತವನ್ನು ಅಂದರೆ - ಜಾತಿ, ದುಡ್ಡಿನ ಬಲ, ಪ್ರಭಾವ, ಆಸ್ತಿ ಅಂತಸ್ತು ಮತ್ತು ರಾಜಕೀಯ ಲೆಕ್ಕಾಚಾರ ಇವುಗಳನ್ನು ಒಳಗೊಂಡಿರುತ್ತದೆ. ಸಾಮಾನ್ಯವಾಗಿ ಹಳ್ಳಿಯ ಮೇಲ್ಜಾತಿ ಶ್ರೀಮಂತರು ತಮ್ಮ ಹಣ ಮತ್ತು ಅಂತಸ್ತಿನ

ಮೂಲಕ ರಾಜಕೀಯ ಲೆಕ್ಕಾಚಾರ ಹಾಕಿ ಇತರರ ಮೇಲೆ ಆಮಿಷ ಇಲ್ಲವೇ ಒತ್ತಡ ಹೇರಿ ತಮ್ಮ ಬೇಳೆ ಬೇಯಿಸಿಕೊಳ್ಳುವುದು ಜನಜನಿತವಾಗಿದೆ. ಗ್ರಾಮಸ್ಥರು ತಿಳಿದೂ ತಿಳಿಯದಿರುವಂತೆ ಇದನ್ನು ವ್ಯಾಪಕ ಪ್ರತಿರೋಧವಿದ್ದರೂ ಮೌನವಾಗಿ ಒಪ್ಪಿಕೊಳ್ಳುತ್ತಾರೆ. ಆಗ ಗ್ರಾಮಸ್ಥರ ಪಾತ್ರವೇ ನಗಣ್ಯವಾದಂತೆ. ಒಂದು ಪ್ರಜಾತಾಂತ್ರಿಕ ವ್ಯವಸ್ಥೆಯೊಳಗೆ ಸಂವಿಧಾನ ದತ್ತವಾದ ತಳಮಟ್ಟದ ಸಂಸ್ಥೆಗಳ ಚುನಾವಣೆಗೆ ಚುನಾವಣಾ ಆಯೋಗ ಮತ್ತು ಪೂರಕವಾದ ನಿಯಾಮಾವಳಿಗಳು ಇರುವಾಗ ಒಬ್ಬನು ತನ್ನ ಪ್ರಭಾವದ ಮೂಲಕ ಇತರರ ಸ್ಪರ್ಧಾಕಾಂಕ್ಷಿ ಮನೋಭಾವನ್ನು ಕುಗ್ಗಿಸುವುದು ಇಲ್ಲವೇ ಅವರ ರಾಜಕೀಯ ಹಕ್ಕುಗಳನ್ನು ಮೊಟಕುಗೊಳಿಸುವುದು ಎಷ್ಟು ಸಮಂಜಸ ಎಂದು ಗ್ರಾಮಸ್ಥರಾದರೂ ಚಿಂತಿಸಬೇಕು. ಏಣಿಶ್ರೇಣಿ ಸಮಾಜವು ಹಳ್ಳಿಯಲ್ಲಿ ಅನಮ್ಯವಾಗಿ ತಳವೂರಿರುವಾಗ ಇದನ್ನು ಪ್ರತಿರೋಧಿಸುವ ಅರ್ಹತೆ ಗ್ರಾಮಸ್ಥರಿಗಿದೆಯೇ ಅಥವಾ ಸಬಲೀಕರಣ ಯಾ ಸಶಕ್ತೀಕರಣ ಪ್ರಕ್ರಿಯೆಯಲ್ಲಿ ಇದರ ಅಗತ್ಯವಿದೆಯೇ ಎಂಬುದನ್ನು ವಿವೇಚಿಸಬೇಕಾಗಿದೆ.

ಇದಕ್ಕೆ ವಿರುದ್ಧವಾಗಿ ಅಂದರೆ ಪ್ರಜಾತಾಂತ್ರಿಕ ವ್ಯವಸ್ಥೆಗೆ ಹಾಗೂ ಅಭಿವೃದ್ಧಿ ದೃಷ್ಟಿಕೋನಕ್ಕೆ ಈ ಪ್ರಕ್ರಿಯೆ ಪೂರಕವಾಗಿದೆ ಎಂದು ಆಯ್ಕೆಯಾದ ಪ್ರಭಾವೀ ಅಭ್ಯರ್ಥಿ ಹೇಳಬಹುದು. ಯಾಕೆಂದರೆ ಚುನಾವಣೆ ನಡೆದರೆ ಇತರ ಅಭ್ಯರ್ಥಿಗಳಿಗೆ ಓಟು ದೊರೆಯದಂತೆ ಹಾಗೂ ಆತನನ್ನು ಗ್ರಾಮಸ್ಥರು ಒಂದು ರೀತಿ ಬಹಿಷ್ಕೃತರಾಗಿ ಕಾಣುವಂತೆ ಮಾಡುವ ಸಾಮರ್ಥ್ಯ ಈ ಪ್ರಭಾವೀ ವ್ಯಕ್ತಿಗಿರುವಾಗ ಗ್ರಾಮಪಂಚಾಯತಿಯ ಕಾರ್ಯಕ್ಷಮತೆ ಹೇಗಿರಬಹುದೆಂದು ನಾವೂ ಊಹಿಸಬಹುದು. ಕಳೆದ ಮಾರ್ಚ್ ತಿಂಗಳಲ್ಲಿ ಕೂಡ್ಲಿಗಿ ತಾಲ್ಲೂಕಿನ ೩೩ ಗ್ರಾಮ ಪಂಚಾಯತ್ ಚುನಾವಣೆಗಳಲ್ಲಿ ಒಟ್ಟು ೪೭೫ ಸದಸ್ಯರ ಪೈಕಿ ೧೦೮ ಮಂದಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಉಳಿದ ೩೬೭ ಸದಸ್ಯರು ಚುನಾವಣೆಯಲ್ಲಿ ಆರಿಸಿ ಬಂದಿದ್ದಾರೆ.

ಇನ್ನು ೧೯೯೩ರ ಹಿರೇಹೆಗ್ಡಾಳ್ ಗ್ರಾಮಪಂಚಾಯತಿಯ ಚುನಾವಣಾ ಪ್ರಕ್ರಿಯೆಯನ್ನು ನೋಡೋಣ. ಇಲ್ಲಿ ೮ ಮಂದಿ ಅಭ್ಯರ್ಥಿಗಳನ್ನು ಚುನಾಯಿಸಲಾದರೆ ಇಬರನ್ನು ಅವಿರೋಧವಾಗಿ ಆರಿಸಲಾಗಿದೆ. (ಕೋಷ್ಟಕ ೫) ಮೊದಲೆಯದಾಗಿ ಕಾಯ್ದೆಗನುಗುಣವಾಗಿ ಮೀಸಾಲಾತಿ ಪಾಲಿಸಬೇಕಾಗುತ್ತದೆ.ಇದರ ಉಲ್ಲಂಘನೆಯಾಗುವಂತಿಲ್ಲ. ಯಾಕೆಂದರೆ ಇವೆಲ್ಲ ಸಂವಿಧಾನದತ್ತವಾಗಿದೆ. ಆದ್ದರಿಂದ ಇಲ್ಲಿ ಪರಿಶಿಷ್ಟ ಜಾತಿ, ವರ್ಗ, ಹಿಂದುಳಿದವರು ಮತ್ತು ಮಹಿಳಾ ಮೀಸಲಾತಿ ಎಲ್ಲವೂ ಆನಿವಾರ್ಯ. ಹಿರೇಹೆಗ್ಡಾಳ್ ಗ್ರಾಮಪಂಚಾಯತ್ ಮೇಲುನೋಟಕ್ಕೆ ಇದಕ್ಕೆ ಬದ್ಧವಾಗಿ ನಡೆದಿದೆ ಎಂದು ಕಂಡುಬಂದರೂ ನಿಜವಾದ ಚುನಾವಣಾ ಪ್ರಕ್ರಿಯೆ ರಾಜಕಾರಣವಿರುವುದು ಆಭ್ಯರ್ಥಿಯ ಅಯ್ಕೆಗೆ ಸಂಬಂಧಿಸಿದಂತೆ.

ಸಮಾನ್ಯವಾಗಿ ಪ್ರತಿ ಗ್ರಾಮಗಳಲ್ಲಿ ಹಿರಿಯರು ಅಥವಾ ಯಜಮಾನರು ಎಂದು ಗುರುತಿಸಿಕೊಳ್ಳುವ ಜನರು ಇರುತ್ತಾರೆ. ಇವರು ಪ್ರಭಾವಿ ವ್ಯಕ್ತಿಗಳು ಮತ್ತು ಇವರ ಮಾತನ್ನು ಚಾಚೂ ತಪ್ಪದೇ ಅನುಸರಿಸಬೇಕಾಗುತ್ತದೆ. ಪ್ರತಿ ಜಾತಿ ವರ್ಗದಲ್ಲಿ ಈ ಹಿರಿಯರು ಅಥವಾ ಯಜಮಾನರು ಇರುತ್ತಾರೆ. ಇವರು ಹಿರಿಯರು ಹಾಗೂ ವಯಸ್ಸಾದವರು ಆಗಿರುವುದರಿಂದ ಇವರ ಮಾತಿಗೆ ಊರಲ್ಲಿ ಹೆಚ್ಚಿನ ಪ್ರಾಶಸ್ತ್ಯವಿರುತ್ತದೆ ಮತ್ತು ಜನರು ಹೆಚ್ಚಾಗಿ ಇವರು ವಿರುದ್ಧ ಯಾರೂ ಸ್ಪರ್ಧಿಸದಂತೆ ನೋಡಿಕೊಳ್ಳುತ್ತಾರೆ. ಹೆಚ್ಚಾಗಿ ಅವೊರೋಧ ಅಯ್ಕೆ ನಡೆಯಲು ಇವರು ಬಯಸುತ್ತಾರೆ. ಇವರ ಮಾತಿನ ವಿರುದ್ಧ ಯಾರಾದರೂ ಸ್ಪರ್ಧಿಸಿದಲ್ಲಿ ಆ ಅಭ್ಯರ್ಥಿಗೆ ಊರಲ್ಲಿ ಮತ ನೀಡದಂತೆ ನೋಡಿಕೊಳ್ಳುತ್ತಾರೆ. ಇದು ಊರಿನ ಯಜಮಾನರ ಚುನಾವಣಾ ಪ್ರಕ್ರಿಯೆ ರಾಜಕಾರಣ.

ಇನ್ನು ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗಕ್ಕೆ ಸಂಬಂಧಿಸಿ ಇಲ್ಲೂ ಅದೇ ನಡಾವಳಿ ಕಂಡು ಬರುತ್ತದೆ ಮೇಲ್ವರ್ಗದವರ ತೆರೆಮರೆಯ ಹಸ್ತಕ್ಷೇಪವು ಇರುತ್ತದೆ. ಸಾಮಾನ್ಯವಾಗಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗ ಅಥವಾ ದಲಿತ ಕ್ಷೇತ್ರವು ಒಂದು ಸೂಕ್ಷ್ಮ ಗ್ರಾಹಿ ಹಾಗೂ ನಿರ್ಣಾಯಕ ಕ್ಷೇತ್ರವಾಗಿರುವುದರಿಂದ ಪಂಚಾಯತ್‌ನ ಅಭಿವೃದ್ಧಿ ಅಥವಾ ವಿರೋಧ ಪ್ರತಿರೋಧಗಳು ಈ ಕ್ಷೇತ್ರವನ್ನು ಅವಲಂಬಿಸಿರುವುದರಿಂದ ಮೇಲ್ಜಾತಿಗಳು ತಮಗೆ ನಿಷ್ಠನಾಗಿರುವ ಈ ವರ್ಗದ ಅಭ್ಯರ್ಥಿಗಳು ಚುನಾವಣೆಯಲ್ಲಿ ಸ್ಪರ್ಧಿಸಲು ಅನುವು ಮಾಡುವಂತೆ ಆ ವರ್ಗದ ಯಜಮಾನರಲ್ಲಿ ಪರೋಕ್ಷವಾಗಿ ಒತ್ತಡ ಹಾಕುತ್ತಾರೆ. ಹಾಗೂ ಸಫಲರಾಗುತ್ತಾರೆ. ಇವರೆಲ್ಲ ಹೆಬ್ಬೆಟ್ಟು ಒತ್ತುವ ಹಾಗೂ ಪ್ರತಿರೋಧವಿಲ್ಲದ ಅಭ್ಯರ್ಥಿಗಳಾಗಿರುತ್ತಾರೆ. ಇದರಿಂದ ಮೇಲ್ವವರ್ಗದವರ ಆಸೆ ಆಕಾಂಕ್ಷೆಗಳು ಯಾವುದೇ ವಿರೋಧವಿಲ್ಲದೆ ಈಡೇರುವುದು. ಹಿರೇಹೆಗ್ಡಾಳ್ ಗ್ರಾಮದ ಯಜಮಾನರು ಯಾ ಹಿರಿಯರು ಶೆಟ್ರ ಗುರುಸಿದ್ಧಪ್ಪ (ಹಿರೇಹೆಗ್ಡಾಳ್),

ಬಣಕಾರ ಸಿದ್ಧಲಿಂಗಪ್ಪ, ತಳವಾರ ಮೂಗುಬಸಪ್ಪ, ಮೈದೂರು ಚೆನ್ನಬಸಪ್ಪಾ, ಪತ್ತಿರಾಜ, ಮತ್ತು ಶಂಕರಪ್ಪ (ಬೊಪ್ಪಲಾಪುರ), ಸಾಣೇಹಳ್ಳಿ ಯಾಜಮಾನರು ಮಲಕನಹಳ್ಳಿ ಚೌಡಪ್ಪ, ಗುಲುಗುಲು ಹನುಮಂತಪ್ಪ, ಕಾಳಿಂಗೇರಿ ಗೋವಿಂದಪ್ಪ, ಹೊನ್ನೂರಪ್ಪ ಮತ್ತು ಅರಗನಳ್ಳಿ ನಾಗಪ್ಪ.

**ಅಭ್ಯರ್ಥಿಗಳ ಸಾಮಾಜಿಕ ನೆಲೆಗಳು :-** ನಾವು ಹೇಗೆ ಒಂದು ಗ್ರಾಮ ಅಥವಾ ಗ್ರಾಮಪಂಚಾಯತಿಯ ಸಮಾಜೋ- ಆರ್ಥಿಕ ರಾಜಕೀಯ ನೆಲೆಗಳನ್ನು ಅಭ್ಯಸಿಸುತ್ತೇವೆಯೇ ಹಾಗೆಯೇ ಒಂದು ಗ್ರಾಮಪಂಚಾಯತಿಯ ಸದಸ್ಯರುಗಳ ಸಾಮಾಜಿಕ ನೆಲೆಗಳು ಅಗತ್ಯವಾಗಿವೆ. ಸಾಮಾಜಿಕ ನೆಲೆಗಳೆಂದರೆ ಕೇವಲ ಸಾಮಾಜಿಕ ಅಂಶವಾಗಿರದೆ ಅವರ ಆರ್ಥಿಕ, ರಾಜಕೀಯ ಹಾಗೂ ಸಾಂಸ್ಕೃತಿಕ ಅಂಶಗಳನ್ನು ಇದು ಬಿಂಬಿಸುತ್ತದೆ. ಇದು ಸದಸ್ಯರು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಬಲ್ಲವರೇ ಹಾಗೂ ಸಂಘರ್ಷ ಸನ್ನಿವೇಶಗಳನ್ನು ನಿಭಾಯಿಸುವ, ಅದಷ್ಟು ಕಡಿಮೆಗೊಳಿಸಿ ಗ್ರಾಮದ ವಾತಾವರಣವನ್ನು ಸರಳೀಕರಿಸುವ ಮನೋಭಾವ ಅಥವಾ ಸಾಮರ್ಥ್ಯವನ್ನು ಹೊಂದಿರುವರೆ ಎಂಬುದಾಗಿ ತಿಳಿಯಲು ಸಹಕಾರಿಯಾಗುತ್ತದೆ. ಅದರೆ ಇಲ್ಲಿ ಒಂದು ವಿಷಯ ಸ್ಪಷ್ಟವಾಗಿದೆ. ಯಜಮಾನರ ಶಿಪಾರಸ್ಸಿನಿಂದ ಪ್ರೇರಿತರಾದ ಅಭ್ಯರ್ತಿಗಳು ಚುನಾವಣೆಯನ್ನೆದುರಿಸಿ ಆಯ್ಕೆಯಾದರೂ ಪ್ರತಿರೋಧಗಳಿದ್ದಾಗಲೂ ಅದನ್ನೆದುರಿಸಿ ಚುನಾಯಿತರಾಗಿದ್ದಾರೆ. ಇದಕ್ಕೆ ಮೂಲ ಪ್ರೇರಣೆ ಮತ್ತು ಗೆಲುವಿನ ಅಂಶ ಯಜಮಾನರ ಪ್ರಭಾವ ಎಂಬುದು ಗಮನಾರ್ಹ. ಇನ್ನೊಂದೆಡೆ ಸೋತ ಅಭ್ಯರ್ಥಿಗಳು ಯಜಮಾನರ, ಅಭ್ಯರ್ಥಿಗಳ ಮತ್ತು ಗ್ರಾಮಸ್ಥರ ಕೆಂಗಣ್ಣಿಗೂ ವಿರೋಧಕ್ಕೂ ಗುರಿಯಾಗುವುದು ಅಷ್ಟೇ ದುರದೃಷ್ಟಕರ ಬೆಳವಣಿಗೆಯಾಗಿದೆ. ಈ ಯಜಮಾನರ ಪ್ರಭಾವವು ಒಟ್ಟಾರೆಯಾಗಿ ಗ್ರಾಮಸ್ಥರ ಒಟ್ಟು ಜನಾಭಿಪ್ರಾಯವಾಗಿ ಮೂಡಿ ಬರುವುದಿದೆಯಲ್ಲ ಅದುವೇ ಬಹಳ ಆಶ್ಚರ್ಯ. ಇದೇ ತೋರಿಕೆಗೆ ಒಮ್ಮತ ಎಂದೆಣಿಸುತ್ತದೆ. ಯಾಕೆಂದರೆ ವಿರೋಧಿ ಅಭ್ಯರ್ಥಿಯು ಡೆಪಾಸಿಟ್ ಕಳೆದುಕೊಳ್ಳಲು ಯಜಮಾನ ಅಥವಾ ಗ್ರಾಮಸ್ಥರ ಜನಾದೇಶವು ಈ ರೀತಿ ಸಹಕಾರಿಯಾಗುವುದಾದರೆ ಜನತಾಂತ್ರಿಕ ವ್ಯವಸ್ಥೆಯನ್ನು ನಾವು ಪರಿಹಾಸ್ಯ ಮಾಡಿದಂತಾಗುತ್ತದೆ.

ಹಿರೇಹೆಗ್ಡಾಳ್ ಗ್ರಾಮಪಂಚಾಯತ್ ಸದಸ್ಯರ ಸಮಾಜೋ ಆರ್ಥಿಕ ನೆಲೆಗಳನ್ನು ಪರಿಶೀಲಿಸಿದಾಗ ಚುನಾಯಿತ ಮತ್ತು ಅವಿರೋಧ ಆಯ್ಕೆಯ ಹಿಂದಿರುವ ಜಾಡು ಸ್ಪಷ್ಟವಾಗಿ ಕಾಣುತ್ತದೆ. ಅವಿರೋಧ ಆಯ್ಕೆಯಾದ ಒಬ್ಬ ಸದಸ್ಯ ಉಪ್ಪಾರ ಜಾತಿಯವರಾದರೆ ಇನ್ನೊಬ್ಬ ಬೋವಿ ಜಾತಿಯವರು. ಇಬ್ಬರೂ ಅಕ್ಷರಸ್ಥರೆ. ಚುನಾಯಿತರಾದವರಲ್ಲಿ ಇಬ್ಬರೂ ಪರಿಶಿಷ್ಟ ಜಾತಿಯ ಸದಸ್ಯರು ಅನಕ್ಷರರಾಗಿದ್ದಾರೆ ಎಂಬುದು ಗಮನಾರ್ಹ. ಇದರಲ್ಲಿ ಒಬ್ಬರು ಮಹಿಳೆ. ಒಟ್ಟು ೧೦ ಮಂದಿ ಸದಸ್ಯರಲ್ಲಿ ೪ ಮಂದಿ ಮಹಿಳೆಯರು. ಇತರರಲ್ಲಿ ಐದು ಮಂದಿ ಲಿಂಗಾಯಿತರು, ಒಬ್ಬ ನಾಯಕ ಮಹಿಳೆಯಿದ್ದಾರೆ. ಇಬ್ಬರು ಲಿಂಗಾಯಿತ ಮಹಿಳೆಯರಲ್ಲಿ ಒಬ್ಬರು ಅಧ್ಯಕ್ಷರಾಗಿದ್ದಾರೆ. ಸದಸ್ಯರ ಜಾತಿ ಇತ್ಯಾದಿ ವಿವರಗಳನ್ನು ಕೋಷ್ಟಕದಲ್ಲಿ ಕಾಣಬಹುದು.

ಸದಸ್ಯರುಗಳಲ್ಲಿ ಒಬ್ಬ ಪರಿಶಿಷ್ಟ ಜಾತಿಯ ಸದಸ್ಯನನ್ನು ಹೊರತುಪಡಿಸಿ ಎಲ್ಲರೂ ಭೂಮಿಯನ್ನು ಹೊಂದಿದ್ದಾರೆ. ಉಳಿದಿಬ್ಬರೂ ಅದೇ ಜಾತಿಯ ಸದಸ್ಯರಿಗೆ ಭೂಮಿ ಇದೆ.ಹಾಗೆಯೇ ನಾಯಕ ಜನಾಂಗದ ಸದಸ್ಯರು ಸಹ. ಒಟ್ಟಾರೆಯಾಗಿ ಸದಸ್ಯರುಗಳ ಭೂ ಹಿಡುವಳಿ ಪ್ರಮಾಣ ೨ ಎಕರೆಯಿಂದ ೩೦ ಎಕರೆವರೆಗೆ ಇರುತ್ತದೆ ಎಂದು ಲಭ್ಯವಿರುವ ಮಾಹಿತಿಗಳಿಂದ ತಿಳಿಯುತ್ತದೆ. ಒಟ್ಟು ಮೂರು ಮಂದಿ ಪರಿಶಿಷ್ಟ ಜಾತಿಯ ಸದಸ್ಯರಲ್ಲಿ ಒಬ್ಬರು ಭೂ ರಹಿತವಾದರೆ ಉಳಿದಿಬ್ಬರೂ ೭ ಮತ್ತು ಎರಡು ಎಕರೆ ಭೂಮಿ ಹೊಂದಿರುತ್ತಾರೆ. ನಾಯಕ ಪಂಗಡದ ಸದಸ್ಯರು ೮ ಎಕರೆ ಭೂಮಿ ಹೊಂದಿದ್ದಾರೆ. ಉಳಿದ ಐವರು ಮೇಲ್ಜಾತಿಯ ಸದಸ್ಯರಲ್ಲಿ ಒಬ್ಬರು ೨೦ ಎಕರೆ, ಇಬ್ಬರು ೧೦ ಎಕರೆ, ಒಬ್ಬರು ೧೨ ಎಕರೆ, ಮತ್ತು ಒಬ್ಬರು ೧೪ ಎಕರೆ ಭೂಮಿ ಹೊಂದಿದ್ದಾರೆ. ಇವುಗಳಲ್ಲಿ ಕೆಲವು ನೀರಾವರಿ ಭೂಮಿಯಾದರೆ ಕೆಲವು ಒಣ ಭೂಮಿಯಾಗಿರುತ್ತದೆ.

ಇದರಲ್ಲಿ ಒಬ್ಬ ಸದಸ್ಯರು ೧೯೭೮ ರಲ್ಲಿ ಗ್ರಾಮಪಂಚಾಯತ್ ಸದಸ್ಯರಾಗಿದ್ದರು. ಇವರು ಹೊಲವನ್ನು ಗುತ್ತಿಗೆ ಕೊಟ್ಟು ಅಂಗಡಿ ವ್ಯಾಪಾರ ನಡೆಸುತಿದ್ದಾರೆ. ಈ ಸದಸ್ಯರಿಗೆ ಪೂರ್ವ ರಾಜಕೀಯ ಅನುಭವವಿದ್ದರೂ ತಮ್ಮ ಸದಸ್ಯತ್ವವನ್ನು ಪರಿಣಾಮಕಾರಿಯಾಗಿ ತೊಡಗಿಸದಿರುವ ಹಾಗೆ ಕಾಣುತ್ತಾರೆ. ಇತರ ಸದಸ್ಯರೆಲ್ಲರೂ ಪೂರ್ವ ರಾಜಕೀಯಾ ಅನುಭವವಿಲ್ಲದವರು.

# ೨. ಗ್ರಾಮಸಭೆ

ಪಂಚಾಯತ್ ರಾಜ್ ಅಥವಾ ಗ್ರಾಮಿಣ ಸ್ಥಳೀಯಾಡಳಿತ ಚರಿತ್ರೆಯನ್ನು ಅವಲೋಕಿಸಿದಾಗ ಗ್ರಾಮಸಭೆ ಪರಿಕ್ಪನೆಯು ಬಹಳ ಹಿಂದಿನಿಂದಲೂ ಅಸ್ತಿತ್ವದಲ್ಲಿದೆ. ಅದರ ಕಾರ್ಯನಿರ್ವಹಣೆಯ ಕುರಿತು ಕೆಲವು ಅಧ್ಯಯನಗಳು ಬೆಳಕು ಚೆಲ್ಲಿವೆ. ಬ್ರಿಟಿಷರ ಕಾಲದಲ್ಲಿ ಲಾರ್ಡ್ ರಿಪ್ಪನ್‌ನು ಸ್ಥಳೀಯಾಡಳಿತೆಯ ಕಾರ್ಯಸುಗಮತೆಗಾಗಿ ಕೆಲವೊಂದು ಕಾರ್ಯಕ್ರಮಗಳನ್ನು ರೂಪಿಸಿ ಅನಿಷ್ಠಾನಗೊಳಿಸಿದನು. ಆದರೆ ಇದನ್ನು ಅಧಿಕಾರಿವರ್ಗದವರೇ ನಿಭಾಯಿಸುತ್ತಿದ್ದರು ಮತ್ತು ಜನ ಪ್ರತಿನಿಧಿಗಳು ನಿರೀಕ್ಷಿತ ಮಟ್ಟದಲ್ಲಿ ಇರಲಿಲ್ಲ. ಬದಲಾಗಿ ಬೆರಣಿಕೆ ಮಂದಿಯಷ್ಟು ಪ್ರತಿನಿಧಿಗಳನ್ನು ಆಯ್ಕೆ ಮಾಡುವ ಬದಲು ಸಹಕರಣಗೊಳಿಸಲಾಗುತ್ತಿತ್ತು. ಇವರು ನಾಮ ಮಾತ್ರ ಪ್ರತಿನಿಧಿಗಳಾಗಿದ್ದರು. ಆನಂತರ ಹಲವಾರು ಕಾಯ್ದೆ ಕಾನೂನುಗಳು ಜಾರಿಗೊಂಡರೂ ಇವು ನಿರೀಕ್ಷಿತ ಪ್ರಮಾಣದಲ್ಲಿ ಜನ ಪ್ರತಿನಿಧಿಗಳನ್ನು ಚುನಾಯಿಸಿಲ್ಲ. ಹಾಗೆಯೇ ಮಹಿಳಾ ಪ್ರತಿನಿಧಿಗಳಿಗೂ ಅವಕಾಶವಿರಲಿಲ್ಲ. ೧೯೫೯ರ ಮೈಸೂರು ಗ್ರಾಮ ಪಂಚಾಯತ್ ಮತ್ತು ಸ್ಥಳೀಯ ಬೋರ್ಡ್ ಕಾಯ್ದೆಯಲ್ಲಿ ಗ್ರಾಮಸಭೆಯ ಸ್ಪಷ್ಟ ಉಲ್ಲೇಖನವಿರಲಿಲ್ಲ. ಆದರೆ ಗ್ರಾಮಸ್ಥರು ಸಭೆಸೇರಿ ಗ್ರಾಮದ ಅಭಿವೃದ್ಧಿ ಕಾರ್ಯಕ್ರಮಗಳ ಬಗ್ಗೆ ಗ್ರಾಮ ಪಂಚಾಯತ್‌ಗೆ ಸಲಹೆ ಸೂಚನೆಗಳನ್ನು ನೀಡಲು ಅಸ್ಪದವಿತ್ತು. ಅಲ್ಲದೆ ಗ್ರಾಮದ ಆಡಳಿತ ಮತ್ತು ಆಯವ್ಯಯದ ವರದಿಯನ್ನು ಗ್ರಾಮ ಪಂಚಾಯತ್ ಗ್ರಾಮಸ್ಥರಿಗೆ ತಿಳಿಸಬೇಕಾಗಿತ್ತು. ಗ್ರಾಮ ಪಂಚಾಯತ್ ಈ ಸಲಹೆಗಳನ್ನು ಒಪ್ಪಬಹುದು ಇಲ್ಲವೇ ಬಿಡಬಹುದಿತ್ತು. ಹೀಗೆ ಗ್ರಾಮಸಭೆ ಪರಿಕ್ಪನೆಯು ಯಾವುದೇ ನಿಶ್ಚಿತ ಕಾರ್ಯಗಳಿಲ್ಲದೆ ಅಸ್ತಿತ್ವದಲ್ಲಿತ್ತು.

ಕರ್ನಾಟಕದಲ್ಲಿ ಗ್ರಾಮಸಭೆ ಕಾರ್ಯಕ್ಷಮತೆಯ ಪ್ರಾಯೋಗಿಕ ನೆಲೆಯನ್ನು ಐತಿಹಾಸಿಕವಾದ '೧೯೮೩ ರ ಕರ್ನಾಟಕ ಜಿಲ್ಲಾಪರಿಷತ್ತುಗಳು. ತಾಲ್ಲೂಕು ಪಂಚಾಯತ್ ಸಮಿತಿಗಳು, ಮಂಡಲ ಪಂಚಾಯತಿಗಳು ಮತ್ತು ನ್ಯಾಯಪಂಚಾಯತ್‌ಗಳ ಕಾಯ್ದೆ' ಯು ಒದಗಿಸಿತು. ಈ ಕಾಯ್ದೆಯು ಗ್ರಾಮಸಭೆಯನ್ನು ಶಾಸನಾತ್ಮಕವಾಗಿ ಜಾರಿಗೊಳಿಸಿ ಕೆಲವು ನಿರ್ದಿಷ್ಟ ಅಧಿಕಾರ ಪ್ರಕಾರ್ಯಗಳನ್ನು ಸ್ಪಷ್ಟಪಡಿಸಿತು. ಇದು ಮಂಡಲ ಪಂಚಾಯತಿಯ ಕಾರ್ಯನಿರ್ವಹಣೆಯ ಮೇಲೆ ವಿಶೇಷ ಪ್ರಭಾವ ಬೀರಿದವು. ಮಂಡಲ ಪಂಚಾಯತಿಯ ಕಾರ್ಯಾಂಗ ಮುಖ್ಯಸ್ಥನಾದ ಮಂಡಲ ಪ್ರಧಾನರ ಬಗೆಗೂ ಇವು ಕೆಲವೊಂದು ಅಧಿಕಾರ ಸಂಬಂಧಿ ಸಲಹೆ ಸೂಚನೆಗಳನ್ನು ನೀಡಿತು. ಮಂಡಲವು ಗ್ರಾಮ ಸಂಕುಲವನ್ನು ಒಳಗೊಂಡಿರುವುದರಿಂದ ಸಾಮಾನ್ಯವಾಗಿ ಗ್ರಾಮಸಭೆಯು ಬೃಹತ್ ಅಂಗವಾಗಿ ಕೆಲಸಮಾಡುತ್ತಿತ್ತು. ಕೆಲವೊಮ್ಮೆ ಇದು ಮಂಡಲ ಪಂಚಾಯತು ಕಚೇರಿ ಅಥವಾ ಸಂಬಂಧಿಸಿದ ಗ್ರಾಮಗಳಲ್ಲೂ ನಡೆಯುತ್ತಿತ್ತು. ಗ್ರಾಮಸಭೆಯ ಸಲಹೆ ಶಿಫಾರಸ್ಸುಗಳಿಗೆ ಮಂಡಲ ಪಂಚಾಯತು ಮನ್ನಣೆ ನೀಡುತಿತ್ತು.

೧೯೯೨ರಲ್ಲಿ ಸಂವಿಧಾನ ೭೩ ನೇ ತಿದ್ದುಪಡಿಯಿಂದ ಪಂಚಾಯತ್ ರಾಜ್ ಸಂಸ್ಥೆಗಳು ಸಾಂವಿಧಾನಿಕ ಮನ್ನಣೆ ಪಡೆದವು. ಇದರೊಂದಿಗೆ ಗ್ರಾಮಸಭೆಯು ಸಾಂವಿಧಾನಿಕ ಸ್ಥಾನಮಾನ ಪಡೆಯಿತು. ತತ್ಪರಿಣಾಮವಾಗಿ ಕರ್ನಾಟಕ ಸರಕಾರವು ೧೯೯೩ ರ ಕರ್ನಾಟಕ ಪಂಚಾಯತ್ ರಾಜ್ ಕಾಯ್ದೆಯನ್ನು ರೂಪಿಸಿ ಜಾರಿಗೊಳಿಸಿತು. ಇದರಂತೆ ಸರಕಾರದ ಸಾಮನ್ಯ ಆದೇಶಗಳಿಗೆ ಒಳಪಟ್ಟು ಗ್ರಾಮಸಭೆಯು ಕಾಲಕಾಲಕ್ಕೆ ಸೇರತಕ್ಕದು. ಆದರೆ ಯಾವುದೇ ಎರಡು ಸಭೆಗಳ ನಡುವೆ ಆರು ತಿಂಗಳಿಗಿಂತ ಹೆಚ್ಚಿನ ಅಂತರ ಇರತಕ್ಕದ್ದಲ್ಲ. ಗ್ರಾಸಭೆಯು ಕಾಯ್ದೆಯಲ್ಲಿ ರೂಪಿಸುವ ವಿಷಯಗಳನ್ನು ಪರಿಶೀಲಿಸತಕ್ಕದ್ದು ಮತ್ತು ಗ್ರಾಮಪಂಚಾಯತಿಗೆ ಶಿಫಾರಸ್ಸುಗಳನ್ನು ಮತ್ತು ಸಲಹೆಗಳನ್ನು ನೀಡಬಹುದು. ಗ್ರಾಮ ಪಂಚಾಯತಿಯು ಗ್ರಾಮಸಭೆಯ ಶಿಫಾರಸ್ಸುಗಳನ್ನು ಮತ್ತು ಸಲಹೆಗಳನ್ನು ಸೂಕ್ಷ್ಮವಾಗಿ ಪರಿಶೀಲಿಸತಕದ್ದು.

ಹಿರೇಹೆಗ್ಡಾಳ್ ಗ್ರಾಮ ಪಂಚಾಯತಿಯ ಲಭ್ಯವಿರುವ ವರದಿಗಳಿಂದ ಗ್ರಾಮಸಭೆಗಳು ನಡೆದಿವೆ ಎಂಬುದನ್ನು ತೋರಿಸುತ್ತವೆ. ೧೯೯೫ ರಿಂದ ೯೯ ರವರೆಗೆ ಒಟ್ಟು ೧೦ ಬಾರಿ ಗ್ರಾಮಸಭೆಗಳು ನಡೆದಿವೆ. ಕಾಯ್ದೆಯಂತೆ ಗ್ರಾಮಸಭೆಗಳು ಕಾಲಕಾಲಕ್ಕೆ ನಡೆದರೂ ಎರಡು ಸಭೆಗಳ ನಡುವೆ ಆರು ತಿಂಗಳಿಗಿಂತ ಹೆಚ್ಚಿನ ಅಂತರ ಕಂಡುಬಂದಿದೆ. ಇದು ಗ್ರಾಮ ಪಂಚಾಯತಿಯ ಇಷ್ಟಕ್ಕನುಸಾರವಾಗಿಯೇ ಅಥವಾ ಗ್ರಾಮಸ್ಥರ ಒತ್ತಾಯದ ಮೇರೆಗೆ ನಡೆದಿದೆಯೆ ಎಂಬುದು ತಿಳಿದಿಲ್ಲ. ೯೫ನೇ ಸಾಲಿನಲ್ಲಿ ಎರಡು ಗ್ರಾಮ ಗ್ರಾಮಸಭೆಗಳು

ನಡೆದರೆ ೯೭ ನೇ ಸಾಲಿನಲ್ಲಿ ೩ ಗ್ರಾಮಸಭೆಗಳು ನಡೆದಿರುವುದನ್ನು ವರದಿಗಳು ತೋರಿಸುತ್ತವೆ. ಆದರೆ ೯೯ ನೇ ಸಾಲಿನಲ್ಲಿ ಕೇವಲ ಒಂದೇ ಗ್ರಾಸಭೆ ನಡೆದಿದೆ. ಒಟ್ಟಾರೆ ನಡೆದ ೧೦ ಗ್ರಾಮಸಭೆಗಳಲ್ಲಿ ಕೇವಲ ೪ ಗ್ರಾಮಸಭೆಗಳಲ್ಲಿ ಮಾತ್ರ ಒಟ್ಟು ೮೦ ಜನರ ಸಹಿಯನ್ನು ಹಾಜರಾತಿಗಾಗಿ ಸಂಗ್ರಹಿಸಲಾಗಿದೆ. ಇವುಗಳಲ್ಲಿ ೩ ಗ್ರಾಮ ಸಭೆಗಳಲ್ಲಿ ಇಂದಿರಾ ಆವಾಸ್ ಫಲಾನುಭವಿಗಳ ಅಯ್ಕೆ ನಡೆದರೆ, ೩ ಗ್ರಾಮಸಭೆಗಳಲ್ಲಿ ಐ. ಆರ್. ಡಿ.ಪಿ. ಫಲಾನುಭವಿಗಳನ್ನು ಗುರುತಿಸಲಾಗಿದೆ. ಒಂದು ಗ್ರಾಮಸಭೆಯಲ್ಲಿ ಹಸಿರು ಕಾರ್ಡು ಪಡಿತರದಾರರನ್ನು ಆಯ್ಕೆ ಮಾಡಿದರೆ, ಇನ್ನೊಂದರಲ್ಲಿ ಗ್ರಾಮೀಣ ಗುಂಪು ಯೋಜನೆ ಅಡಿಯಲ್ಲಿ ಫಲಾನುಭವಿಗಳನ್ನು ಅಯ್ಕೆ ಮಾಡಲಾಗಿದೆ. ವಿಶೇಷ ಘಟಕ ಯೋಜನೆ ಕುರಿತಂತೆ ಫಲಾನುಭವಿಗಳನ್ನು ಇನೊಂದು ಗ್ರಾಮಸಭೆಯಲ್ಲಿ ಆಯ್ಕೆ ಮಾಡಲಾಗಿದೆ. ೯೮ ರಲ್ಲಿ ನಡೆದ ಗ್ರಾಮಸಭೆಯಲ್ಲಿ ೫ ಮಂದಿ ವಿವಿಧ ಇಲಾಖಾ ಅಧಿಕಾರಿಗಳು ಬಾಗವಹಿಸಿದ್ದರು ಎಂದು ವರದಿಗಳು ತಿಳಿಸುತ್ತವೆ. ವಿಶೇಷ ಘಟಕ ಯೋಜನೆ ಮತ್ತು ಗ್ರಾಮೀಣ ಗುಂಪು ಯೋಜನೆಯಡಿ ಪರಿಶಿಷ್ಟ ಜಾತಿ, ವರ್ಗದ ಸಣ್ಣ ರೈತರಿಗೆ ಪ್ರಯೋಜನ ನೀಡಲಾಗಿದೆ.

ಆಯ್ದ ಪ್ರಶ್ನಾವಳಿಯ ಮೂಲಕ ಗ್ರಾಮ ಪಂಚಾಯತ್‌ನ ಜನರನ್ನು ಹಾಗೂ ಜನ ಪ್ರತಿನಿಧಿಗಳನ್ನು ಭೇಟಿ ಮಾಡಿ ಸಂದರ್ಶನ ನಡೆಸಿ ಮಾಹಿತಿ ಪಡೆಯಲಾಯಿತು. ಚುನಾಯಿತ ಪ್ರತಿನಿಧಿಗಳೆಲ್ಲರಿಗೂ ಗ್ರಾಮಸಭೆ ನಡೆದಿದೆ ಮತ್ತು ಅಂತಹ ಒಂದು ಸಂಸ್ಥೆ ಅಸ್ತಿತ್ವದಲ್ಲಿ ಇದೆ ಎಂಬ ಜ್ಞಾನವಿದೆ. ಗ್ರಾಮಸಭೆಗಳಲ್ಲಿ ಫಲಾನುಭವಿಗಳ ಆಯ್ಕೆ ನಡೆಯುತ್ತದೆ ಎಂಬುದು ಗೊತ್ತಿದೆ. ಆದರೆ ಆಯವ್ಯಯ ಪಟ್ಟಿ, ಸಮಿತಿ ಮುಂತಾದವುಗಳ ಬಗ್ಗೆ ಹೆಚ್ಚಿನ ವಿವರ ಸದಸ್ಯರಿಂದಾಗಲೀ ಅಥವಾ ಗ್ರಾಮಸ್ಥರಿಂದಲೂ ದೊರೆತಿಲ್ಲ.

ಗ್ರಾಮಸಭೆ ಮತ್ತು ಅದರಲ್ಲಿ ಯೋಜಿಸಲಾದ ಕಾರ್ಯಕ್ರಮಗಳನ್ನು ಅವಲೋಕಿಸಿದಾಗ ಹಿರೇಹೆಗ್ಡಾಳ್ ಗ್ರಾಮಪಂಚಾಯಿತಿಯ ಪರಿಸ್ಥಿತಿ ನಮಗೆ ಅರ್ಥವಾಗುತ್ತದೆ. ಮೊದಲನೆಯದಾಗಿ ಗ್ರಾಮಸಭೆಗಳನ್ನು ಕಾಯ್ದೆಗನುಗುಣವಾಗಿ ಕಾಲಾನುಕಾಲಕ್ಕೆ ನಡೆಸಿರುತ್ತಾರೆ ಎಂದು ತಿಳಿಸಿದರೂ ಪ್ರತಿ ಗ್ರಾಮಸಭೆಯ ಮಧ್ಯೆ ಕಾಯ್ದೆ ತಿಳಿಸಿದಂತೆ ಕಾಲದ ಅಂತರ ಸ್ಪಷ್ಟವಾಗಿಲ್ಲ. ಇನ್ನು ಕೆಲವೆಡೆ ಗ್ರಾಮಸಭೆ ನಡೆಸುವ ಕರಿತು ಗ್ರಾಮಸ್ಥರಿಗೆ ಸರಿಯಾದ ಮಾಹಿತಿ ನೀಡದಿರುವುದು. ಕೆಲವು ಜನಪ್ರತಿನಿಧಿಗಳು, ಕಾರ್ಯದರ್ಶಿ ಹಾಗೂ ಬಿಲ್‌ಕಲೆಕ್ಟರ್ ರವರು ತಾವು ಟಾಂ ಟಾಂ ಹೊರಡಿಸಿಯೂ ಜನ ಗ್ರಾಮಸಭೆಗೆ ಬರುವುದಿಲ್ಲ ಎಂದು ತಿಳಿಸಿರುತ್ತಾರೆ. ಹೆಚ್ಚಿನ ಗ್ರಾಮಸ್ಥರು ತಮಗೆ ಟಾಂ ಟಾಂ ಹೊರಡಿಸಿದ್ದೆ ಗೊತ್ತಿಲ್ಲವೆನ್ನುತ್ತಾರೆ. ಹೀಗಾಗಿ ಅಧಿಕಾರಿ ಮತ್ತು ಜನಪ್ರತಿನಿಧಿಗಳು ಗ್ರಾಮಸಭೆಗೆ ಬೇಕಾದ ಪೂರ್ವಸಿದ್ಧತೆಯನ್ನು ಸರಿಯಾಗಿ ಮಾಡಿರುವುದಿಲ್ಲ. ಮಾಡಿದರೂ ಗ್ರಾಮಸ್ಥರು ಇದರ ಬಗ್ಗೆ ಹೆಚ್ಚಿನ ಆಸಕ್ತಿಯನ್ನು ವಹಿಸಿಲ್ಲದಿರುವುದು ಕಂಡುಬರುತ್ತದೆ. ಗ್ರಾಮಸ್ಥರು ಗ್ರಾಮಸಭೆಗೆ ಹೋಗುವಾಗ ತಾವು ಯಾವ ರೀತಿ ಸಿದ್ಧತೆಗೊಳ್ಳಬೇಕು ಇಲ್ಲವೇ ಅಲ್ಲಿ ನಡೆಯುವ ಚಟುವಟಿಕೆಗಳ ಕುರಿತು ತಮ್ಮ ಪಾತ್ರವೇನು ಎಂಬುದರ ಬಗ್ಗೆ ಯಾವುದೇ ಅರಿವಿಲ್ಲದಿರುವುದು ಸಹ ಅಷ್ಟೇ ಸ್ಪಷ್ಟವಾಗಿದೆ. ಗ್ರಾಮಸ್ಥರು, ಪ್ರತಿನಿಧಿಗಳು ಹಾಗೂ ಅಧಿಕಾರಿಗಳು ಸಹ ಈ ಬಗ್ಗೆ ಉದಾಸೀನ ಮನೋಭವ ಹೊಂದಿದ್ದಾರೆ ಎಂಬುದು ಖಚಿತವಾಗುತ್ತದೆ. ಆದರೆ ಗ್ರಾಮಸಭೆ ನಡೆದ ವರದಿಯ ನಡಾವಳಿಗಳಲ್ಲಿ ನಮೂದಿಸಿರುವ ಸಹಿಗಳ ಸಂಖ್ಯೆಯನ್ನು ನೋಡಿದಾಗ ಅದರ ಬಗ್ಗೆ ನಮಗೆ ಯಾವುದೇ ಅಭಿಪ್ರಾಯವನ್ನು ನೀಡಲಾಗುವುದಿಲ್ಲ. ಯಾಕೆಂದರೆ ನಿಜವಾಗಿ ಅಷ್ಟು ಮಂದಿ ಸಹಿಯಿರುವ ಸದಸ್ಯರುಗಳು ಭಾಗವಹಿಸಿದ್ದಾರೋ ಇಲ್ಲವೋ ಎಂದು ಹೇಳುವುದು ಕಷ್ಟದ ಮಾತು. ಯಾಕೆಂದರೆ ಕೆಲವೊಮ್ಮೆ ಜನಪ್ರತಿನಿಧಿಗಳು ಮತ್ತು ಅಧಿಕಾರಿಗಳು ತಿಳಿಸಿರುವಂತೆ ಹಳ್ಳಿಯಲ್ಲಿ ಗ್ರಾಮಸಭೆಯನ್ನು ನಡೆಸುವುದು ಕಷ್ಟ. ಸರಕಾರ ಕೊಡುವ ಯೋಜನೆಗಳು ೩ ಅಥವಾ ೪ ಮಂದಿಗೆ ಮಾತ್ರ ಉಪಯೋಗವಾಗಲು ಆಸ್ಪದವಿದ್ದರೆ ಸುಮಾರು ೫೦ ಅಥವಾ ೧೦೦ ಮಂದಿ ಅರ್ಜಿ ಸಲ್ಲಿಸಿರುತ್ತಾರೆ ಮತ್ತು ಅಷ್ಟೂ ಮಂದಿ ಗ್ರಾಮಸಭೆಗೆ ಬಂದರೆ ಅವರನ್ನು ನಿಯಂತ್ರಿಸುವುದು ಕಷ್ಟ. ಜನಗಳು ಕುಡಿದು ಬರುತ್ತಾರೆ. ಇದರಿಂದ ಹೊಡೆದಾಟಗಳಾಗುವ ಸಂಭವವೇ ಹೆಚ್ಚು. ಫಲಾನುಭವಿ ಆಯ್ಕೆಯೇನೇ ಕಷ್ಟವಾಗುತ್ತದೆ ಎಂದು ಅವರು ತಿಳಿಸುತ್ತಾರೆ. ಇದು ಬಹಳ ಮುಖ್ಯವಾದ ಸಮಸ್ಯೆಯಾಗಿದೆ. ಇಲ್ಲಿ ನಮಗೆ ಹಲವಾರು ಪ್ರಶ್ನೆಗಳು ಉದ್ಭವಿಸುತ್ತವೆ. ಗ್ರಾಮಸಭೆ ಎಂದರೆ ಏನು, ಅದರ ಕಾರ್ಯಸ್ವರೂಗಳು ಏನು, ಅದು ಒಂದು ಬರೀ ಫಲಾನುಭವಿ ಆಯ್ಕೆಯ ವೇದಿಕೆಯ ಅಥವಾ ಅದಕ್ಕಿಂತ ಭಿನ್ನವಾದ ಪಾತ್ರ ಈ ಗ್ರಾಮ ಸಭೆಗಿದೆಯೆ ಎಂಬುದು ಎಲ್ಲರನ್ನು ಕಾಡುವ ಪ್ರಶ್ನೆಯಾಗಿದೆ.

ಇದಕ್ಕೆ ಸುಲಭವಾಗಿ ಉತ್ತರಿಸಲು ಸಾಧ್ಯ. ಇಲ್ಲವೆ ಉತ್ತರಿಸದಿರಲು ಸಾಧ್ಯ. ಉತ್ತರಿಸ ಬೇಕಾದರೆ ಕಾಯ್ದೆಯಲ್ಲೇ ನಮಗೆ ಉತ್ತರ ಸಿಗುತ್ತದೆ. ಉತ್ತರಿಸಲಾಗದಿದ್ದರೆ ಇದಕ್ಕೆ ಎಲ್ಲರೂ - ಜನಪ್ರತಿನಿಧಿಗಳು, ಅಧಿಕಾರಿಗಳು ಹಾಗೂ ಮುಖ್ಯವಾಗಿ ಗ್ರಾಮಸ್ಥರು ಸಹ ಹೊಣೆಗಾರರಾಗಿರುತ್ತಾರೆ.

ಹಿರೇಹೆಗ್ಡಾಳ್ ಈ ಸ್ಥಿತಿಯನ್ನು ಗಮನಿಸಿದಾಗ ಇದು ಕೇವಲ ಈ ಗ್ರಾಮಕ್ಕೆ ಸೀಮಿತವಾದ ಪ್ರಶ್ನೆಯಲ್ಲ ಇದು ಎಲ್ಲ ಗ್ರಾಮಪಂಚಾಯತ್‌ಗಳಿಗೂ ಅನ್ವಯವಾಗುತ್ತದೆ. ಮೊದಲನೆಯದಾಗಿ ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳು ಕಾಯ್ದೆಯನ್ನು ಸರಿಯಾಗಿ ಉಪಯೋಗಿಸದೆ ಇರುವುದು ಮೇಲ್ನೋಟಕ್ಕೆ ಸ್ಪಷ್ಟವಾಗಿದೆ. ಯಾಕೆಂದರೆ ಸಾಮಾನ್ಯವಾಗಿ ಅಧ್ಯಕ್ಷನಾದವನು ಇಲ್ಲವೇ ಇತರ ಪ್ರಬಲ ಸದಸ್ಯನು ಅಧ್ಯಕ್ಷರ ಜತೆಗೂಡಿ ಕಾರ್ಯದರ್ಶಿಯೊಂದಿಗೆ ಯೋಜನೆಗಳ ವಿವರಗಳನ್ನು ಪಡೆದು ಅವರೊಳಗೆ ಒಂದು ರೀತಿಯ ತಿಳುವಳಿಕೆ ಏರ್ಪಟ್ಟಂತೆ ಗ್ರಾಮಸಭೆ ಅಥವಾ ಪಂಚಾಯತ್ ಸಭೆಯ ಕಾರ್ಯಕಲಾಪಗಳನ್ನು ನಡೆಸಿ ಕೊಂಡು ಹೋಗುತ್ತಾರೆ. ಇದರಿಂದ ಅವರ ಲೆಕ್ಕಾಚಾರಗಳಿಗೆ ಅನುಕೂಲವಾಗುವುದು. ಕೆಲವೆಡೆ ಉತ್ತಮ ಅಧ್ಯಕ್ಷರಿದ್ದರೆ ಕಾರ್ಯದರ್ಶಿ ದುರ್ಬಲನಾಗಿರಬಹುದು. ಇನ್ನೊಂದೆಡೆ ಕಾರ್ಯದರ್ಶಿ ಪ್ರಬಲನಾಗಿದ್ದರೆ ಅಧ್ಯಕ್ಷ ಸ್ವಲ್ಪ ಮೃದು ಹಾಗೂ ದುರ್ಬಲನಾಗಿರುವನು. ಇನ್ನೂ ಕೆಲವೆಡೆ ವರದಾನವೆಂಬಂತೆ ಏನೋ ಅಧ್ಯಕ್ಷರು ಮಹಿಳೆಯಾಗಿದ್ದರೆ ಮತ್ತು ಅವರಿಗೆ ಗ್ರಾಮಪಂಚಾಯತು ಮತ್ತು ಗ್ರಾಮಸಭೆಯನ್ನು ನಿಬಾಯಿಸುವ ಅವಶ್ಯಕ ಸಾಮರ್ಥ್ಯ ಅಥವಾ ನೈಪುಣ್ಯತೆ ಇಲ್ಲದಿದ್ದರೆ ಒಂದೋ ಇತರ ಪ್ರಬಲ ಸದಸ್ಯರು ಇದನ್ನು ಮಾಡುತ್ತಾರೆ. ಇಲ್ಲವೇ ಕಾರ್ಯದರ್ಶಿ ಇದನ್ನು ನಿಭಾಯಿಸುತ್ತಾನೆ. ಅಥವಾ ಒಂದಿಬ್ಬರು ಪ್ರಬಲ ಸದಸ್ಯರು ಮತ್ತು ಕಾರ್ಯದರ್ಶಿಯೂ ಸೇರಿ ನಿಭಾಯಿಸುವ ಹುನ್ನಾರದೊಳಗೆ ಸಿಲುಕಿರುತ್ತಾರೆ. ಹಿರೇಹೆಗ್ಡಾಳ್ ಗ್ರಾಮಪಂಚಾಯತನ್ನು ಈ ಕೊನೆಯ ಗುಂಪಿನಲ್ಲಿ ಸೇರಿಸಿದರೆ ತಪ್ಪಗಲಾರದೆಂದು ಮೇಲು ನೋಟಕ್ಕೆ ಕಂಡುಬರುತ್ತದೆ. ಇನ್ನೂ ಕೆಲವೆಡೆ ಅದು ಮಹಿಳೆ ಅಥವಾ ಪುರುಷನೇ ಇರಲಿ ಪಂಚಾಯತ್ ಅಧ್ಯಕ್ಷನಾಗಿದ್ದರೆ ಮತ್ತು ಆತ ಸ್ವಲ್ಪ ದುರ್ಬಲನಾಗಿದ್ದರೆ ಇಲ್ಲಿ ಮೂರನೆಯವರೆಗೆ ಅವಕಾಶವೇ ಹೆಚ್ಚು. ಇಲ್ಲಿ ದುರ್ಬಲ ಎಂದರೆ ಅಧಕ್ಷ ಎನ್ನಲಾಗದು ಆದರೆ ಆ ದೌರ್ಬಲ್ಯಕ್ಕೆ ಅವರದ್ದೆ ಕಾರಣಗಳಿರಬಹುದು. ನಿಬಾಯಿಸುವ ನೈಪುಣ್ಯತೆ ಇರದಿದ್ದಲ್ಲಿ ಪ್ರಬಲ ಸದಸ್ಯರು ಇಲ್ಲವೇ ಕಾರ್ಯದರ್ಶಿ ಅಥವಾ ಇವರಿಬ್ಬರೂ ಜಂಟಿಯಾಗಿ ತಮ್ಮ ಕಾರ್ಯ ನಿರ್ವಹಿಸಲು ಅಣಿಯಾಗುತ್ತಾರೆ. ಹೆಚ್ಚಾಗಿ ಈ ಅಧ್ಯಕ್ಷರು (ಮಹಿಳಾ ಅಥವಾ ಪುರುಷ) ಮೇಲೆ ತಿಳಿಸಿದಂತೆ ತಮಗೆ ಏನೋ ತಿಂಗಳಿಗೆ ಸ್ವಲ್ಪ ಹಣ ಸಿಗುವುದರಿಂದ (೩೦೦ ರೂಪಾಯಿ) ಅದರಲ್ಲೆ ತೃಪ್ತಿ ಪಡೆಯುವ ಸಾಧ್ಯತೆ ಇರಲೂಬಹುದು. ಯಾಕೆಂದರೆ ತೀರಾ ಹಿಂದುಳಿದ ಹಳ್ಳಿ ಪ್ರದೇಶದ ಗ್ರಾಮಪಂಚಾಯತಿಯು ಒಬ್ಬ ಅಧ್ಯಕ್ಷನಾದರೆ ಈ ಮೊತ್ತ ದೊರೆಯುವುದೆಂದರೆ ಅದು ಒಂದು ವರದಾನ ಎಂದೆಣಿಸುವುದರಲ್ಲೂ ಸಂಶಯವಿಲ್ಲ. ಇದು ಸಾರ್ವತ್ರಿಕ ಸತ್ಯವಲ್ಲವಾದರೂ ಕೆಲವು ನಿರ್ದಿಷ್ಟತೆಗಳಿಗೆ ಈ ಮಾದರಿ ಉಪಯೋಗವಾಗಬಹುದು. ನಮ್ಮ ಈ ಪ್ರದೇಶ ಹಳ್ಳಿಗರಿಗೆ ಈ ಮೊತ್ತ ಸಿಗುವುದೆಂದರೆ ಒಂದು ದೊಡ್ಡ ಅವಕಾಶವೆ. ಹಾಗಾಗಿ ಅವರೂ ಸುಮ್ಮನಾಗಿ ಬಿಡುವ ಪ್ರಮೇಯವೂ ಇರಬಹುದು. ನೈಪುಣ್ಯತೆ ಇದ್ದರೂ ಸಹ ಪ್ರಬಲ ಸಹ ಸದಸ್ಯರ ಪ್ರಭಾವ, ಒತ್ತಡ ಇತ್ಯಾದಿ ಇದ್ದರೆ ಇವರುಗಳು ಸುಮ್ಮನಾಗಲೂಬಹುದು. ಇಂತಹ ಸಂದರ್ಭದಲ್ಲಿ ಈ ಪ್ರಬಲ ಸದಸ್ಯರ ಮಾತೇ ಅಂತಿಮವಾಗಿರುತ್ತದೆ. ಅಧ್ಯಕ್ಷರು ಎಲ್ಲದಕ್ಕೂ ಸಹಿಹಾಕುತ್ತಾರೆ. ಇದಕೆ ಪೂರಕವಾಗಿ ಹೆಚ್ಚಿನ ಕಾರ್ಯದರ್ಶಿಗಳು ತಮ್ಮ ಪಾತ್ರವನ್ನು ನಿರ್ವಹಿಸುತ್ತಾರೆ.

ಹೀಗಿರುವಾಗ ಗ್ರಾಮಸಭೆಯನ್ನು ಯಾವ ರೀತಿ ಸುಧಾರಿಸಬಹುದು ಎಂಬುದನ್ನು ವಿವರಿಸುವುದು ಕಷ್ಟಸಾಧ್ಯ. ಇದಕ್ಕೆ ಪೂರಕವಾಗಿ ಈ ಹಳ್ಳಿಯ ಜನಜೀವನವು ಹೊಂದಿಕೊಂಡಿರುವಾಗ ಅಲ್ಲಿ ವಿರೋಧ-ಪ್ರತಿರೋಧದ ಮಾತೇ ಬರುವುದಿಲ್ಲ. ಹಳ್ಳಿಯಲ್ಲಿರುವ ಹೆಚ್ಚಿನ ಅಕ್ಷರಸ್ಥರು ಹಾಗೂ ಇತರ ಉದ್ಯೋಗಿಗಳು ತಮಗೇಕೆ ತೊಂದರೆ ಎಂದು ತಮ್ಮ ಪಾಡಿಗೆ ತಾವಿದ್ದು ಬಿಡುತ್ತಾರೆ. ಪಂಚಾಯತು ವ್ಯವಸ್ಥೆ ಪ್ರತಿರೋಧವಿದ್ದಲ್ಲಿ ಅದಕ್ಕೆ ಪೂರಕವಾದ ಮಾರ್ಗೋಪಾಯಗಳನ್ನು ಅನುಸರಿಸಿಕೊಳ್ಳುವುದರಿಂದ ಇಂಥವುಗಳನ್ನು ನೇರವಾಗಿ ಪರಶ್ನಿಸುವುದು ಹಳ್ಳಿಗರಿಗೆ ಕಷ್ಟವಾಗುತ್ತದೆ. ಇಂಥ ಸಂದಿಗ್ಧತೆಯಲ್ಲಿ ಪಂಚಾಯತ್ ಸದಸ್ಯರೆಂದರೆ ಕೇವಲ ಪ್ರಬಲ ಸದಸ್ಯರು ಮಾತ್ರ. ಇವರು ಜಾರಿ ಮಾಡುವ ತೀರ್ಮಾನಗಳೇ ಕಾಯ್ದೆಗಳಾಗುತ್ತವೆ. ಇದು ನಮ್ಮ ಗ್ರಾಮದ ಕಿರು ಗಣರಾಜ್ಯದ ಒಂದು ಮಾದರಿಯಾಗಿರುತ್ತದೆ. ಇದು ತೀರಾ ಹಳ್ಳಿ ಪ್ರದೇಶದ ಗ್ರಾಮಪಂಚಾಯತ್‌ನಲ್ಲಿ ಮಾತ್ರ ಇರುವುದು ಎಂದು ನಿಖರವಾಗಿ ಹೇಳಲಾಗದು. ಪೇಟೆ ಪಟ್ಟಣಕ್ಕೆ ತಾಗಿಕೊಂಡಿರುವ ಪ್ರದೇಶಗಳ ಗ್ರಾಮಪಂಚಾಯತ್‌ಗಳಲ್ಲಿ ಸಾಕ್ಷರತೆ, ತಕ್ಕಮಟ್ಟಿನ ಸುಧಾರಿತ

ಆರ್ಥಿಕ ಪರಿಸ್ಥಿತಿ, ಅರಿವು, ಇತ್ಯಾದಿ ಇರುವಲ್ಲಿ ಈ ತರದ ಪ್ರಕ್ರಿಯೆ ಕಂಡು ಬರುವುದಿಲ್ಲವೆನ್ನಲಾಗದು. ಗ್ರಾಮಪಂಚಾಯತ್ ಅಥವಾ ಗ್ರಾಮಸಭೆಯ ಕಾರ್ಯಕ್ಷಮತೆಯು ಆ ಗ್ರಾಮದ ಗ್ರಾಮಸ್ಥರು ಮತ್ತು ತಾವು ಆರಿಸಿ ಕಳುಹಿಸುವ ಜನಪ್ರತಿನಿಧಿಗಳನ್ನು ಅವಲಂಬಿಸಿರುತ್ತದೆ. ಬದಲಾಗಿ ಅಧಿಕಾರಿಗಳ ಮೇಲಲ್ಲ ಎಂಬುದನ್ನು ಸಹ ತಿಳಿದುಕೊಳ್ಳಬೇಕು. ಪಂಚಾಯತ್‌ನ ದಾಖಲೆಗಳಲ್ಲಿ ವರದಿಗೊಂಡಂತೆ ನಡೆದಿರುವ ಗ್ರಾಮಸಭೆಯ ವಿವರಗಳನ್ನು ನೀಡಲಾಗಿದೆ.

**ಹಿರೇಹೆಗ್ಡಾಳ್ ಗ್ರಾಮಸಭೆ**

೦೧) ಸೆಪ್ಟೆಂಬರ್ ೯೫ - ಇಂದಿರಾ ಆವಾಸ್ ಫಲಾನುಭವಿಗಳ ಗುರುತಿಸುವಿಕೆ, ೧೪ ಮನೆಗಳು, ೨೮ ಜನರ ಸಹಿ ಇದೆ (ಹಾರಾತಿ).
೦೨) ೪.೧೦.೯೬ ಹಸಿರು ಕಾರ್ಡು ಪಡಿತರದಾರರನ್ನು ಆಯ್ಕೆ ಮಾಡುವುದರ ಕುರಿತಂತೆ.
೦೩) ೩೦.೭.೯೬ ಐ.ಆರ್.ಡಿ.ಪಿ. ಫಲಾನುಭವಿಗಳನ್ನು ಗುರುತಿಸುವುದಕ್ಕಾಗಿ ೨೫ ಜನರ ಸಹಿ ಇದೆ. ೨೮ ಫಲಾನುಭವಿಗಳನ್ನು ಗುರುತಿಸಿದ್ದಾರೆ.
೦೪) ೧೩.೮.೯೬. ಇಂದಿರಾ ಆವಾಸ್ ಯೋಜನೆಯಡಿ ೧೪ ಫಲಾನುಭವಿಗಳ ಆಯ್ಕೆ, ೧೭ ಜನರ ಸಹಿ ಇದೆ.
೦೫) ೨.೧೨.೯೬ ಹೆಚ್ಚುವರಿ ಇಂದಿರಾ ಆವಾಸ್ ಯೋಜನೆಯ ಫಲಾನುಭವಿಗಳ ಆಯ್ಕೆ, ೧೦ ಮಂದಿ ಫಲಾನುಭವಿಗಳ ಆಯ್ಕೆ ೧೦ ಜನರ ಸಹಿ ಇದೆ.
೦೬) ೨.೬.೯೭ ಐ.ಆರ್.ಡಿ.ಪಿ. ಫಲಾನುಭವಿಗಳನ್ನು ಗುರುತಿಸಲು.
೦೭) ೨೮.೭.೯೭ ಗ್ರಾಮೀಣ ಗುಂಪು ಯೋಜನೆ ಅಡಿಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸಣ್ಣ ರೈತರಿಗೆ ಪ್ರಯೋಜನ ನೀಡುವ ಕುರಿತು ಸಭೆ. ೧೮ ಇಲಾಖೆಯಿಂದ ಫಲಾನುಭವಿ ಆಯ್ಕೆ.
೦೮) ೧೭.೬.೯೮ ಐ.ಆರ್.ಡಿ.ಪಿ. ಯೋಜನೆಯ ಅಡಿಯಲ್ಲಿ ಫಲಾನುಭವಿಗಳನ್ನು ಆಯ್ಕೆ ಮಾಡಲಾಯಿತು.
೦೯) ೩.೯.೯೮ ವಿಶೇಷ ಘಟಕ ಯೋಜನೆ ಉಪಯೋಗದ ಅನ್ವಯ ಗುಂಪು ಗ್ರಾಮದ ಪ. ಜಾತಿ ಹಾಗೂ ಪ. ಪಂಗಡದ ಸಣ್ಣ ರೈತರಿಗೆ ಪ್ರಯೋಜನ ನೀಡುವ ಕುರಿತು ಫಲಾನುಭವಿಗಳ ಆಯ್ಕೆ. ೫ ಮಂದಿ ವಿವಿಧ ಇಲಾಖಾ ಅಧಿಕಾರಿಗಳು ಹಾಜರಿದ್ದರು.
೧೦) ೧೮.೯.೯೯

**ಜವಾಹರ್ ರೋಜ್‌ಗಾರ್ ಯೋಜನೆ**

ಗ್ರಾಮೀಣ ನಿರುದ್ಯೋಗ ಮತ್ತು ಅರೆ ಯುದ್ಯೋಗವನ್ನು ಕಡಿಮೆ ಮಾಡುವ ದೃಷ್ಟಿಯಿಂದ ಹಿಂದಿನ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಕಾರ್ಯಕ್ರಮ ಮತ್ತು ಗ್ರಾಮೀಣ ಭೂ ರಹಿತ ಉದ್ಯೋಗ ಭರವಸೆ ಯೋಜನೆಗಳನ್ನು ವಿಲೀನಗೊಳಿಸಿ ಭಾರತ ಸರಕಾರವು ೧.೪.೮೯ ರಿಂದ ಜವಾಹರ್ ರೋಜ್‌ಗಾರ್ ಯೋಜನೆಯನ್ನು ಪ್ರಾರಂಭಿಸಿತು. ಗ್ರಾಮೀಣ ಪ್ರದೇಶದಲ್ಲಿನ ನಿರುದ್ಯೋಗ ಮತ್ತು ಅರೆ ಉದ್ಯೋಗಿ ಪರುಷರು ಮತ್ತು ಮಹಿಳೆಯರಿಗೆ ಹೆಚ್ಚುವರಿ ಲಾಭದಾಯಕ ಉದ್ಯೋಗವನ್ನು ಸೃಷ್ಟಿಸುವುದೇ ಈ ಯೋಜನೆಯ ಮುಖ್ಯ ಉದ್ದೇಶ. ಗ್ರಾಮೀಣ ಪ್ರದೇಶಗಳಲ್ಲಿ ಆರ್ಥಿಕವಾಗಿ ಅತ್ಯಾವಶ್ಯಕವಾದ ಸೌಲಭ್ಯಗಳನ್ನು ಬಲಪಡಿಸಿ ನಿರಂತರ ಉದ್ಯೋಗವನ್ನು ಸೃಜಿಸುವುದು, ಪ್ರತ್ಯಕ್ಷ ಮತ್ತು ಪರೋಕ್ಷ ಸೌಲಭ್ಯಗಳಿಗೆ ಕಾರಣವಾಗುವ ಸಮುದಾಯ ಮತ್ತು ಸಾಮಾಜಿಕ ಸ್ವತ್ತುಗಳು ಮತ್ತು ಇತರ ಆಸ್ತಿಗಳನ್ನು ಸೃಜಿಸುವುದು ಮತ್ತು ಗ್ರಾಮೀಣ ಪ್ರದೇಶ ದಲ್ಲಿರುವ ಜನರ ಗುಣಮಟ್ಟದಲ್ಲಿ ಒಟ್ಟಾರೆ ಸುಧಾರಣೆ ತರುವುದು ಯೋಜನೆಯ ಇತರ ಉದ್ದೇಶಗಳಾಗಿರುತ್ತವೆ.

ಬಡತನ ರೇಖೆಯಿಂದ ಕೆಳಗಿರುವ ಗ್ರಾಮೀಣ ಜನರು ಈ ಯೋಜನೆಯ ಪ್ರಯೋಜನ ಪಡೆಯಬಹುದು. ಪರಿಶಿಷ್ಟ ಜಾತಿ, ವರ್ಗ ಮತ್ತು ಜೀತಮುಕ್ತ ಕೂಲಿಕಾರರಿಗೆ ಆದ್ಯತೆ ನೀಡಲಾಗುವುದು. ಶೇ. ೩೦ ರಷ್ಟು ಉದ್ಯೋಗಾವಕಾಶಗಳನ್ನು ಮಹಿಳೆಯರಿಗಾಗಿ ಮೀಸಲಿಡಲಾಗಿದೆ. ಈ ಯೋಜನೆಯು ಕೇಂದ್ರ ಪುರಸ್ಕೃತವಾಗಿದ್ದು ಯೋಜನೆಯ ವೆಚ್ಚವನ್ನು ಕೇಂದ್ರ ಮತ್ತು ರಾಜ್ಯಗಳ ನಡುವೆ ಕ್ರಮವಾಗಿ ೮೦:೨೦ರ ಪ್ರಮಾಣದಲ್ಲಿ ಹಂಚಿಕೊಳ್ಳಲಾಗಿದೆ. ಇಂದಿರಾ ಆವಾಸ್ ಯೋಜನೆ ಹಾಗೂ ದಶಲಕ್ಷ ಬಾವಿ ಯೋಜನೆಗಳು

ಜವಾಹರ್ ರೋಜ್‌ಗಾರ್ ಯೋಜನೆಯ ಉಪಯೋಜನೆಗಳಾಗಿರುತ್ತವೆ. ಜಿಲ್ಲೆಗೆ ಬಿಡುಗಡೆ ಮಾಡಿದ ಜವಾಹರ್ ರೋಜ್‌ಗಾರ್ ಯೋಜನೆಯ ಒಟ್ಟು ಅನುದಾನದಲ್ಲಿ ಶೇ. ೧೦ರಷ್ಟನ್ನು ಇಂದಿರಾ ಆವಾಸ್ ಯೋಜನೆಗಾಗಿಯೂ, ಶೇ. ೩೦ ರಷ್ಟನ್ನು ದಶಲಕ್ಷ ಬಾವಿ ಯೋಜನೆಗಾಗಿಯೂ ತೆಗೆದಿರಿಸಿ ಉಳಿದ ಹಣದಲ್ಲಿ ಶೇ. ೮೦ ರಷ್ಟನ್ನು ಗ್ರಾಮ ಪಂಚಾಯತ್‌ಗಳ ಮೂಲಕ ಹಾಗೂ ಶೇ. ೨೦ ರಷ್ಟನ್ನು ಜಿಲ್ಲಾ ಪಂಚಾಯತ್ ಮೂಲಕ ಖರ್ಚು ಮಾಡಿ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತದೆ. ಜಿಲ್ಲಾ ಪಂಚಾಯತ್ ಮತ್ತು ಗ್ರಾಮಪಂಚಾಯತ್ ಮಟ್ಟದಲ್ಲಿ ಕನಿಷ್ಟ ಶೇ. ೨೨.೫ ರಷ್ಟು ಹಣವನ್ನು ಪರಿಶಿಷ್ಟ ಜಾತಿ ಮತ್ತು ವರ್ಗದವರಿಗೆ ನೇರವಾದ ಸೌಕರ್ಯಗಳನ್ನು ಒದಗಿಸತಕ್ಕಂಥ ಕಾಮಗಾರಿಗಳಿಗೆ ಮೀಸಲಾಗಿಡಲಾಗುತ್ತದೆ. ಎಲ್ಲಾ ಕಾಮಗಾರಿಗಳಿಗೂ ಕೂಲಿ ಬಟವಾಡೆ ಮತ್ತು ಕೂಲಿಯೇತರ ಬಟವಾಡೆಯ ಪ್ರಮಾಣವನ್ನು ೬೦:೪೦ ರ ಪ್ರಮಾಣದಲ್ಲಿ ನಿರ್ವಹಿಸಲಾಗುವುದು. ಆಹಾರ ಧಾನ್ಯವನ್ನು ರಿಯಾಯಿತಿ ದರದಲ್ಲಿ ವೇತನದ ಅಂಗವಾಗಿ ಒಂದು ಮಾನವ ದಿನಕ್ಕೆ ೨ ಕೆ. ಜಿ. ಯಂತೆ ವಿತರಿಸಲಾಗುವುದು. ಕನಿಷ್ಟ ಮಜೂರಿ ರೂ. ೨೬ ಆಗಿದೆ. ೧೯೯೩ ರ ಜವಾಹರ್ ರೋಜ್‌ಗಾರ್ ಯೋಜನೆಯ ಎರಡನೆ ವಾಹಿನಿಯಂತೆ ಸಾಮಗ್ರಿ ವೆಚ್ಚವು ಶೇ. ೪೦ ಕ್ಕಿಂತ ಹೆಚ್ಚಾಗಿರುವಲ್ಲಿ ಜೆ. ಆರ್. ವೈಯ (ಜ. ರೋ. ಯೋ.) ಅನುದಾನವನ್ನು ಕೂಲಿಯಾಗಿ ಶೇ. ೬೦ನ್ನು ಪಾವತಿಸಿರುವುದರ ಖಚಿತತೆಗಾಗಿ ರಾಜ್ಯ ಘಟಕದ ಇತರ ಯೋಜನೆ ಯೋಜನೇತರ ಹಂಚಿಕೆ ವಿಭಾಗದಲ್ಲಿಯ ಅನುದಾನವನ್ನು ಕೂಡಿಸಿಕೊಳ್ಳಬಹುದು.

ಪಂಚಾಯತ್‌ಗಳು ಜೆ. ಆರ್. ವೈಯ ಅನುದಾನದಲ್ಲಿ ಶಾಲಾ ಕೋಣೆಗಳ ನಿರ್ಮಾಣ, ಅಂಗನವಾಡಿ ಕೇಂದ್ರದ ಕಟ್ಟಡಗಳ ನಿರ್ಮಾಣ, ಗ್ರಾಮದಿಂದ ಗ್ರಾಮಕ್ಕೆ ಸಂಪರ್ಕ ಒದಗಿಸುವ ಲಿಂಕ್ ರಸ್ತೆಗಳ ಅಭಿವೃದ್ಧಿ, ಗ್ರಾಮ ನೈರ್ಮಲ್ಲೀಕರಣ, ಸಸಿನೆಟ್ಟು ಮರ ಬೆಳೆಸುವುದು ಇತ್ಯಾದಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಬಹುದು. ಕೇಂದ್ರ ಸರಕಾರವು ೧೯೯೯ ರ ಏಪ್ರಿಲ್ ೧ ರಿಂದ ಗ್ರಾಮೀಣಾಭಿವೃದ್ಧಿಗೆ ಸಂಬಂಧಪಟ್ಟ ಎಲ್ಲಾ ಯೋಜನೆಗಳನ್ನು ಸಂಯೋಜಿಸಿ ಹೊಸತಾಗಿ ಸ್ವರ್ಣ ಜಯಂತಿ ಗ್ರಾಮ ಸ್ವರೋಜ್‌ಗಾರ್ ಯೋಜನೆ (ಎಸ್. ಜಿ. ಎಸ್. ವೈ.)ಯನ್ನು ಪ್ರಾರಂಭಿಸಿದೆ.

ಪ್ರತಿ ಗ್ರಾಮಪಂಚಾಯತ್ ಜೆ. ಆರ್. ವೈ. ನ ವಾರ್ಷಿಕ ಕ್ರಿಯಾ ಯೋಜನೆಯನ್ನು ರೂಪಿಸುತ್ತದೆ. ಇದರ ಜೊತೆಗೆ ಸರಕಾರವು ಪಂಚಾಯತ್‌ಗೆ ತಲಾನುದಾನವನ್ನು ನೀಡುತ್ತದೆ ಮತ್ತು ಪಂಚಾಯತ್ ಕರ ಸಂಗ್ರಹವನ್ನು ಮಾಡುತ್ತದೆ. ಇದೆಲ್ಲವನ್ನು ಒಟ್ಟು ಸೇರಿಸಿ ಅಂದರೆ ಖರ್ಚು ವೆಚ್ಚವನ್ನು ಲೆಕ್ಕಹಾಕಿ ಪಂಚಾಯತ್ ಆಯವ್ಯಯ ಪಟ್ಟಿಯನ್ನು ರೂಪಿಸುತ್ತದೆ.

ಜೆ. ಆರ್. ವೈ. ಕ್ರಿಯಾ ಯೋಜನೆಯನ್ವಯದ ಹಣವನ್ನು ಈ ನಾಲ್ಕು ಘಟಕಗಳಿಗೆ ವಿನಿಯೋಗಿಸಲಾಗುವುದು.

೧. ಘಟಕ ಒಂದು - ಮಿತ ಉತ್ಪಾದನಾ ಕಾಮಗಾರಿ - ಇದಕ್ಕೆ ಶೇ. ೩೫ ರಷ್ಟನ್ನು ವಿನಿಯೋಗಿಸಲಾಗುವುದು.
೨. ಘಟಕ ಎರಡು - ಸಾಮಾಜಿಕ ಅರಣ್ಯ ಕಾಮಗಾರಿ - ಇದಕ್ಕೆ ಶೇ. ೨೫.
೩. ಘಟಕ ಮೂರು - ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ವರ್ಗದವರ ಅಭಿವೃದ್ಧಿ ಕಾಮಗಾರಿ - ಇದಕ್ಕೆ ಶೇ. ೨೨.೫.
೪. ಘಟಕ ನಾಲ್ಕು - ಇತರ ಕಾಮಗಾರಿ - ಇದಕ್ಕೆ ಶೇ. ೧೭.೫ ರಷ್ಟನ್ನು ವಿನಿಯೋಗಿಲಾಗುವುದು.

ಘಟಕ ಒಂದರಲ್ಲಿ ಕಲ್ಲು ಬಂಡೆ ಹಾಸುವುದು, ಚರಂಡಿ ನಿರ್ಮಾಣ, ಗ್ರಾಮನೈರ್ಮಲ್ಯ ಇತ್ಯಾದಿ. ಪ್ರಮುಖ ಕಾಮಗಾರಿಗಳಾಗಿವೆ. ಘಟಕ ನಾಲ್ಕರಲ್ಲಿ ರಸ್ತೆ ಮತ್ತು ಕಟ್ಟಡ ನಿರ್ಮಾಣ ಕಾಮಗಾರಿಗಳನ್ನು ಮಾಡಬಹುದು.

ಹಿರೇಹೆಗ್ಡಾಳ್ ಗ್ರಾಮಪಂಚಾಯತಿಯ ಜವಾಹರ್ ರೋಜ್‌ಗಾರ್ ಯೋನನೆಯ ೧೯೯೪ - ೯೫ ರಿಂದ ೧೯೯೮ - ೯೯ ರವರೆಗಿನ ೫ ವರ್ಷದ ಅಂದಾಜು ಪ್ರಸ್ತಾಪ, ಮತ್ತು ಘಟಕವಾರು ಖರ್ಚಿನ ವಿವರಗಳನ್ನು ಮುಂದೆ ಕೋಷ್ಟಕ ೬ರಲ್ಲಿ ಕಾಣಬಹುದು. ಹಿರೇಹೆಗ್ಡಾಳ್ ಗ್ರಾಮಪಂಚಾಯತಿಯ ೧೯೯೪ - ೯೫ ನೇ ಸಾಲಿನ ಅಂದರೆ ಗ್ರಾಮಪಂಚಾಯತ್ ವ್ಯವಸ್ಥೆ ಕಾರ್ಯರೂಪಕ್ಕೆ ಬಂದ ಪ್ರಥಮ ವರ್ಷದ ಯೋಜನೆಯ ಅಂದಾಜು ಪ್ರಸ್ತಾಪ ರೂ. ೧,೨೫,೮೦೦ ಇದ್ದರೆ ಲೆಕ್ಕಾ ತನಿಖಾ ವರದಿಯಲ್ಲಿ ರೂ. ೧,೬೯,೭೦೦ ಇವೆ. ಇನ್ನುಳಿದಂತೆ

೯೫ - ೯೬ ರಿಂದ ೯೯ ರವರೆಗಿನ ಯೋಜನೆಯ ಅಂದಾಜು ಪ್ರಸ್ತಾಪ ಮತ್ತು ಲೆಕ್ಕ ತನಿಖಾ ವರದಿಯು ಸರಿಸಮವಾಗಿರುವುದನ್ನು ಕಾಣಬಹುದು.

ಗ್ರಾಮಪಂಚಾಯತ್ ಪ್ರತಿ ವರ್ಷ ತನ್ನ ಜೆ. ಆರ್. ವೈ. ಕ್ರಿಯಾ ಯೋಜನೆ ಅಂದಾಜು ಪ್ರಸ್ತಾಪವನ್ನು ರೂಪಿಸಿ ಅದನ್ನು ತಾಲ್ಲೂಕು ಪಂಚಾಯತಿಗೆ ಸಲ್ಲಿಸುತ್ತದೆ. ಪ್ರತಿವರ್ಷ ಹಿಂದಿನ ಸಾಲಿನ ಕ್ರಿಯಾ ಯೋಜನೆಯ ಮೊತ್ತಕ್ಕೆ ಶೇ.೧೫ ರಷ್ಟು ಹೆಚ್ಚಿಗೆ ಅಂದಾಜು ಮೊತ್ತದ ಪ್ರಸ್ತಾಪ ತೋರಿಸಿ ಪ್ರಸ್ತುತ ಸಾಲಿನ ಕ್ರಿಯಾಯೋಜನೆಯನ್ನು ರೂಪಿಸುತ್ತದೆ. ಸರಕಾರವು ಇದಕ್ಕೆ ಸಮವಾದ ಮೊತ್ತವನ್ನು ನೀಡಬಹುದು ಇಲ್ಲವೇ ಕಡಿತಗೊಳಿಸಬಹುದು. ಆದರೆ ಗ್ರಾಮಪಂಚಾಯತ್ ಇದ್ದುದರಲ್ಲಿ ಮುಂದುವರೆಸಿಕೊಂಡು ಹೋಗುತ್ತದೆ. ಆದರೆ ಕ್ರಿಯಾ ಯೋಜನೆಯ ಅಂದಾಜು ಪ್ರಸ್ತಾಪಕ್ಕೆ ಹೋಲಿಸಿದರೆ ದೊರೆಯುವ ಅನುದಾನವು ಪ್ರಸ್ತಾಪದ ಮೊತ್ತಕ್ಕಿಂತ ತೀರಾ ಕಡಿಮೆಯಾಗಿರುವುದು ಕಂಡುಬರುತ್ತದೆ. ೧೯೯೪ ರಿಂದ ೯೯ ರವರೆಗಿನ ೫ ವರ್ಷದ ಯೋಜನೆಯ ಅನುದಾನ, ಒಟ್ಟು ಜಮಾ, ಖರ್ಚು ಮತ್ತಿತರ ವಿವರಗಳನ್ನು ಮುಂದೆ ಕೋಷ್ಟಕ ೭ರಲ್ಲಿ ತೋರಿಸಲಾಗಿದೆ. ಒಟ್ಟು ಜೆ. ಆರ್. ವೈ. ತಲಾನುದಾನ ರೂ. ೫,೬೫,೧೦೦ ಆದರೆ ಒಟ್ಟು ಜಮಾ ರೂ. ೫,೭೦,೩೫೯ ಆಗಿವೆ. ಒಟ್ಟು ಖರ್ಚು ರೂ. ೫,೬೭,೫೪೩ ಆಗಿವೆ. ಪ್ರಸ್ತುತ ವರ್ಷದ ಅನುದಾನ, ಹಿಂದಿನ ವರ್ಷದಲ್ಲಿ ಖರ್ಚಾಗಿ ಉಳಿದ ಹಣ ಮತ್ತು ಅದರ ಅಂತ್ಯ ಶಿಲ್ಕು ಹಾಗೂ ಬ್ಯಾಂಕ್ ಬಡ್ಡಿ ಸೇರಿ ಒಟ್ಟು ಜಮಾ ಆಗುತ್ತದೆ. ಇದರಲ್ಲಿ ಪ್ರಸ್ತುತ ವರ್ಷದ ಖರ್ಚು ಕಳೆದು ಉಳಿದ ಅಂತ್ಯ ಶಿಲ್ಕು ಮತ್ತದರ ಬಡ್ಡಿ ದರ ಸೇರಿ ಮುಂದಿನ ವರ್ಷದ ಒಟ್ಟು ಜಮಾ ಮೊತ್ತವಾಗುತ್ತದೆ. ಶೇ. ೭.೫ ರಷ್ಟನ್ನು ಗ್ರಾಮಪಂಚಾಯತ್ ಆಡಳಿತ ವೆಚ್ಚಕ್ಕೆ ವಿನಿಯೋಗಿಸಬಹುದು.

ಸಮಾನ್ಯವಾಗಿ ಕ್ರಿಯಾಯೋಜನೆಯ ಪ್ರತಿ ವರ್ಷದ ಕಾರ್ಯು ಅನುಷ್ಠಾನವು ಗ್ರಾಸಭೆಯ ನಿರ್ಣಯದ ಮೇಲೆ ಅವಲಂಬಿತವಾಗಿರುತ್ತದೆ. ಹೆಚ್ಚಾಗಿ ಐ. ಆರ್. ಡಿ. ಪಿ. ಫಲಾನುಭವಿಗಳನ್ನು, ಇಂದಿರಾ ಆವಾಸ್ ಮನೆ, ಹಸಿರು ಕಾರ್ಡ್, ಪಡಿತರ ಚೀಟಿ ಫಲಾನುಭವಿಗಳ ಆಯ್ಕೆ ಗ್ರಾಸಭೆಯಲ್ಲಿ ನಡೆಯುತ್ತದೆ ಇದು ಗ್ರಾಸಭೆಯಯಲ್ಲಿ ಅನುಮೋದನೆಯು ಆಗಬೇಕಾಗುತ್ತದೆ. ಆದರೆ ಹಿರೇಹೆಗ್ಡಾಳ್‌ನಲ್ಲಿ ಈ ಪ್ರಕ್ರಿಯೆಗಳು ಗ್ರಾಸಭೆಯಯಲ್ಲಿ ಅನುಮೋದನೆಯಾಗಿದೆಯೆ ಎಂಬುದನ್ನು ನಿಖರವಾಗಿ ಹೇಳಲಾಗದು. ಹಾಗೆಯೇ ಜೆ. ಆರ್. ವೈ ಯೋಜನೆಯಡಿ ಘಟಕವಾರು ಮೊತ್ತವನ್ನು ವಿನಿಯೋಗಿಸುತ್ತಾರೆ. ಹೆಚ್ಚಾಗಿ ಘಟಕ ೩ ರ ಮೊತ್ತ ಶೇ. ೨೨.೫ ಅಂದರೆ ಪರಿಶಿಷ್ಟ ಜಾತಿ ವರ್ಗಗಳಿಗೆ ಮೀಸಲಿರಿಸಿದ ಹಣವನ್ನು ಖರ್ಚು ಮಾಡುತ್ತಾರೆ. ಇಲ್ಲವಾದಲ್ಲಿ ಆ ಹಣ ಯಾಕೆ ವಿನಿಯೋಗವಾಗಿಲ್ಲ ಎಂದು ವಿವರಿಸಬೇಕಾಗುತ್ತದೆ ಮತ್ತು ಸ್ಪಷ್ಟೀಕರಣ ನೀಡದಿದ್ದಲ್ಲಿ ಅನುದಾನವು ತಡೆಹಿಡಿಯಲ್ಪಡುತ್ತದೆ ಹಾಗೇಯೇ ಪರಿಶಿಷ್ಟ ಜಾತಿ ಮತ್ತು ವರ್ಗದ ಜನಸಂಖ್ಯೆಯು ಗ್ರಾಮದಲ್ಲಿ ಹೆಚ್ಚಾಗಿದ್ದರೆ ಅನುದಾನವು ಹೆಚ್ಚಿಗ ದೊರೆಯುತ್ತದೆ. ಹೆಚ್ಚಿನ ಸಂದರ್ಭಗಳಲ್ಲಿ ಘಟಕ ೨ ರ ಅನುದಾನವನ್ನು ಸಸಿನೆಡುವ ಬದಲು ಇತರ ಕಾಮಗಾರಿಗಳಿಗೆ ವಿನಿಯೋಗಿಸಲಾಗಿದೆ.

೧೯೯೭ - ೯೮ ರಿಂದ ಈ ಗ್ರಾಮಪಂಚಾಯತ್‌ಗೆ ಹತ್ತನೇ ಹಣಕಾಸು ಯೋಜನೆ ಅನುದಾನವನ್ನು ನೀಡಲಾಗಿದೆ. ಎರಡು ವರ್ಷಗಳಲಿ ಒಟ್ಟು ರೂ. ೧,೧೮,೫೦೦ ನ್ನು ನೀಡಲಾಗಿದೆ.

೧೯೯೭ - ೯೬ ರ ಜೆ. ಆರ್.ವೈ. ಯ ಕ್ರಿಯಾ ಯೋಜನೆಯಲ್ಲಿ ರೂಪಿಸಿದ ೨,೭೩೦ ಮಾನವ ದಿನಗಳಲ್ಲಿ ಕೇವಲ ೪೧೪ ಮಾನವ ದಿನಗಳನ್ನು ಉತ್ಪಾದನೆ ಮಾಡಲಾಗಿದೆ. ಉಳಿದವುಗಳನ್ನು ಮಾಡಲಾಗಿಲ್ಲ. ೧೯೯೬ - ೯೭ ರಲ್ಲಿ ಒಟ್ಟು ೮,೮೦೦ ಮಾನವ ದಿನಗಳನ್ನು ತೋರಿಸಲಾಗಿ ಅದರಲ್ಲಿ ಕೇವಲ ೧,೩೫೦ ಮಾನವ ದಿನಗಳು ಉತ್ಪನ್ನವಾಗಿದ್ದು ಉಳಿದ ೭,೪೫೦ ಮಾನವ ದಿನಗಳನ್ನು ಉತ್ಪಾದಿಸಲಾಗಿಲ್ಲ. ಹಾಗೆಯೇ ಹೆಣ್ಣು ಮಕ್ಕಳಿಗೆ ಶೇ. ೩೦ ರಷ್ಟು ಮಾನವ ದಿನಗಳನ್ನು ಒದಗಿಸಿಲ್ಲ. ೧೯೯೭ - ೯೮ ರಲ್ಲೂ ಮಾನವ ದಿನಗಳ ಉತ್ಪಾದನೆಯಲ್ಲಿ ನಿಗದಿತ ಗುರಿ ಸಾಧಿಸಿಲ್ಲ. ಮಹಿಳೆಯರಿಗೂ ಶೇ. ೩೦ ರಷ್ಟು ಮಾನವ ದಿನಗಳನ್ನು ಒದಗಿಸಿಲ್ಲ. ಇವೆಲ್ಲಾ ಲೆಕ್ಕ ತನಿಖಾ ವರದಿಯ ಸಂದರ್ಭದಲ್ಲಿ ಕಂಡುಬರುವ ನ್ಯೂನತೆಗಳಾಗಿವೆ.

**ಬಂಡೆ ಹಾಸುವುದು**

ಹಿರೇಹೆಗ್ಡಾಳ್ ಗ್ರಾಮಪಂಚಾಯತಿಯ ಜೆ. ಆರ್.ವೈ. ಯ ಕಾಮಗಾರಿಗಳ ವರದಿ ಹಾಗೂ ಇದರ ಭೌತಿಕ ಕಾರ್ಯಗಳನ್ನು ನೋಡಿದಾಗ ೫ ವರ್ಷಗಳಲ್ಲಿ ಸುಮಾರು ರೂ. ೩,೫೮,೯೫೫ನ್ನು ಬಂಡೆ ಹಾಸುವುದಕ್ಕಾಗಿ ಖರ್ಚು ಮಾಡಿದ್ದಾರೆ. ಅಂದರೆ ಜೆ. ಆರ್.ವೈ. ತಲಾನುದಾನ ಒಟ್ಟು ರೂ. ೫,೬೫,೧೦೦ ಆದರೆ ಇದರಲ್ಲಿ ರೂ. ೩,೫೮,೯೫೫ ನ್ನು ಬಂಡೆಹಾಸುವಿಕೆಗೆ ವಿನಿಯೋಗಿಸಲಾಗಿದೆ. ಈ ಮೊತ್ತವು ಯೋಜನೆಯ ೪ ಘಟಕಗಳನ್ನು ಸೇರಿರುತ್ತದೆ . ಹೆಚ್ಚಿನ ಕಾಮಗಾರಿಗಳು ಪಂಚಾಯತ್‌ನ ಮುಖ್ಯ ಭಾಗದಲ್ಲಿ ಅಂದರೆ ಪ್ರಬಲ ವರ್ಗದವರ ಮನೆಗಳ ಮುಂದಿನ ಓಣಿಗಳಲ್ಲಿ ಮಾಡಲಾಗಿದೆ. ಇನ್ನು ಕೆಲವು ಹರಿಜನ ಕೇರಿ ಹಾಗೂ ಕೇರಿಯಲ್ಲಿನ ದೇವಸ್ಥಾನದ ಮುಂಭಾಗದಲ್ಲಿ ಹಾಸಲಾಗಿದೆ. ದೇವಸ್ಥಾನದ ಮುಂಭಾಗದಲ್ಲಿ ಹಾಸಿರುವುದರ ಹಿಂದೆ ಆ ಸಮಾಜದವರ ಸಕ್ರಿಯ ಸಹಭಾಗಿತ್ವವಿದೆ. ಇಲ್ಲದಿದ್ದಲ್ಲಿ ಆ ಕಾಮಗಾರಿಯು ಇನ್ನೆಲ್ಲೋ ಆಗುತ್ತಿತ್ತು ಮತ್ತು ಇದರ ಹಿಂದೆ ದೊಡ್ಡ ರಾಜಕೀಯವಿದೆ ಎನ್ನುತ್ತಾರೆ ಕೇರಿ ನಿವಾಸಿಗಳು, ಕಾಮಗಾರಿಯು ೪ ಹಳ್ಳಿಗಳಲ್ಲೂ ಕಾರ್ಯಗತವಾಗಿದೆ. ಆದರೆ ಇಷ್ಟೊಂದು ಹಣವನ್ನು ಬಂಡೆ ಹಾಸುವುದಕ್ಕಾಗಿ ಇನಿಯೋಗಿಸಿದರೆ ಅಂದರೆ ಅನುದಾನದ ಶೇ.೬೩ ರಷ್ಟನ್ನು ಇದೊಂದೆ ಕಾಮಗಾರಿಗೆ ಬಳಸಿದರೆ ಇನ್ನಿತರ ಅಭಿವೃದ್ಧಿ ಕಾರ್ಯಗಳನ್ನು ಯಾರು ಹೇಗೆ ಮತ್ತು ಯಾವ ಆದ್ಯತೆಗಳನಿಟ್ಟುಕೊಂಡು ಮಾಡಬೇಕಾಗಿದೆ ಎಂದು ವಿವೇಚಿಸಬೇಕು. ಸಾಮಾನ್ಯವಾಗಿ ಈ ಪ್ರದೇಶದ ಎಲ್ಲಾ ಗ್ರಾಮ ಪಂಚಾಯತ್‌ಗಳು ಹೆಚ್ಚಿನ ಹಣವನ್ನು ಕೇವಲ ಬಂಡೆ ಹಾಸುವುದಕ್ಕಾಗಿ ವಿನಿಯೋಗಿಸಿವೆ. ಆದರೆ ಇದರ ಉಪಯುಕ್ತತೆ, ಇದರ ಗುಣ ಮಟ್ಟ ಮತ್ತು ಇದು ಯಾರ ಅಭಿವೃದ್ಧಿಗೆ ಅಂದರೆ ಸಮಾಜದ ಯಾವ ವರ್ಗದವರ ಬೀದಿಯಲ್ಲಿ ಇದನ್ನು ಹಾಸಲಾಗುತ್ತದೆ ಎಂಬುದನ್ನು ಪರೀಕ್ಷಿಸಬೇಕಾಗುತ್ತದೆ. ಸಾಮಾನ್ಯವಾಗಿ ಪಂಚಾಯತಿಯ ಅಧ್ಯಕ್ಷನಾದವನು ತನ್ನ ಮನೆ ಮುಂದಿನ ಓಣಿಯಲ್ಲಿ ಇದನ್ನು ಮಾಡಿಸುತ್ತಾನೆ. ಮತ್ತು ಇದು ಇನ್ನೊಬ್ಬ ಅಧ್ಯಕ್ಷ ಬಂದಾಗ ಅವನ ಮನೆ ಮುಂದೆ ನಡೆಯುತ್ತದೆ. ಆದರೆ ಅದು ಕೇವಲ ಕೆಲವರ ಒಳಿತಿಗೆ ಮೀಸಲು. ಅಪೂರ್ಣವಾಗಿ ಉಳಿದರೆ ಎಲ್ಲರಿಗೂ ಉಪಯೋಗವಾಗುವ ಕಾಮಗಾರಿ ಯಾವಾಗ ಮುಗಿಯುವುದು ಎಂಬ ಪ್ರಶ್ನೆ ಏಳುತ್ತದೆ. ಹಳ್ಳಿಯ ಎಲ್ಲಾ ಜನವರ್ಗ ವಾಸಿಸುವ ಓಣಿಗಳಲ್ಲಿ ಆದ್ಯತೆಗನುಗುಣವಾಗಿ ಮಾಡಿದರೆ ಇಂಥ ಕಾಮಗಾರಿ ಪರಿಣಾಮಕಾರಿಯಾದೀತು. ಇಲ್ಲವಾದಲ್ಲಿ ಅಧ್ಯಕ್ಷರು ಮತ್ತಿತರ ಸದಸ್ಯರು ಮುಂತಾದ ಸ್ಥಾಪಿತ ಹಿತಾಸಕ್ತಿಗಳ ಕಾರ್ಯವನ್ನು ಪೂರೈಸಿದಂತಾಗುತ್ತದೆ. ಸರಕಾರ ಅಥವಾ ಗ್ರಾಮಪಂಚಾಯತ್ ಸಾಧ್ಯವಾದಲ್ಲಿ ಬಂಡೆ ಹಾಸುವುದನ್ನು ತಪ್ಪಿಸಿ ಅದಕ್ಕೆ ಪೂರಕವಾಗಿ ಬೇರೆ ಶಾಶ್ವತವಾಗಿ ಲಾಭಕೊಡುವ ಇತರ ಕಾಮಗಾರಿ ಮಾಡಿದಲ್ಲಿ ಇದರ ವೆಚ್ಚದ ಹಣವನ್ನು ಅಭಿವೃಧಿ ಕಾರ್ಯಗಳಿಗೆ ಇನ್ನಷ್ಟು ಬಳಸಬಹುದಾಗಿದೆ. ಹಿರೇಹೆಗ್ಡಾಳ್ ಗ್ರಾಮಪಂಚಾಯತ್ ಅಭಿವೃದ್ಧಿ ದೃಷ್ಟಿಯಿಂದ ಸಾಧ್ಯವಾದಲ್ಲಿ ಇದನ್ನು ಜಾರಿಗೊಳಿಸಿದರೆ ಇನ್ನಷ್ಟು ಉತ್ತಮ.

ಸರಕಾರವು ಗ್ರಾಮಪಂಚಾಯತ್ ಗಳಿಗೆ ಪ್ರತೀ ವರ್ಷ ರೂ. ಒಂದು ಲಕ್ಷ ತಲಾನುದಾನವನ್ನು ನೀಡುತ್ತಿದೆ. (ನಂತರ ಇದು ರೂ. ೧.೨೫ ಲಕ್ಷ ಆಗಿ ಈಗ ರೂ. ಎರಡು ಲಕ್ಷ ಅನುದಾನಾ ನೀಡುತ್ತದೆ). ಪಂಚಾಯತ್‌ಗಳು ಕರಗಳನ್ನು ಸಂಗ್ರಹಿಸುತ್ತವೆ. ಇವುಗಳು ಪಂಚಾಯತ್‌ನ ಪ್ರಮುಖ ಆದಾಯ ಮೂಲವಾಗಿವೆ. ಪಂಚಾಯತ್ ಈ ಮೊತ್ತವನ್ನು ತನ್ನ ದೈನಂದಿನ ಚಟುವಟಿಕೆಗಳಿಗೆ ಹಾಗೂ ಸಿಬ್ಬಂದಿ ಮತ್ತಿತರ ವೆಚ್ಚಗಳಿಗೆ ಖರ್ಚು ಮಾಡುತ್ತದೆ. ಕಲ್ಯಾಣ ಚಟುವಟಿಕೆಗಳ ಉದ್ದೇಶದ ನಿಧಿಯಲಿ ಶೇ. ೨೦ ರಷ್ತನ್ನು ಪರಿಶಿಷ್ಟ ಜಾತಿ ಮತ್ತು ವರ್ಗದ ಅಭಿವೃದ್ಧಿಗಾಗಿ ವಿನಿಯೋಗಿಸಬೇಕೆಂಬ ನಿಯಮವಿದೆ.

**ಕರಗಳು :-** ಪ್ರತೀ ಗ್ರಾಮ ಪಂಚಾಯತ್ ಗ್ರಾಮಸ್ಥರಿಂದ ತೆರಿಗೆಯನ್ನು ಸಂಗ್ರಹಿಸುತ್ತದೆ. ಹಾಗೆಯೇ ಪಂಚಾಯತ್ ಕಟ್ಟಡಗಳು, ಅಂಗಡಿ, ಮಾರ್ಕೆಟ್, ಜಾತ್ರೆ, ಸಂತೆ, ಇತ್ಯಾದಿಗಳಿಂದ ಕರ ವಸೂಲಿ ಮಾಡುತ್ತದೆ. ೧೦ ಹೆಕ್ಟೇರ್ ಒಳಗಿನ ಕೆರೆಗಳನ್ನು ಗ್ರಾಮ ಪಂಚಾಯತ್ ಮೀನುಗಾರಿಕೆಗೆ ಪರಭಾರೆಗೆ ನೀಡುತ್ತದೆ. ೧೯೯೪ - ೯೫ ರಲ್ಲಿ ಹಿರೇಹೆಗ್ಡಾಳ್ ಗ್ರಾಮಪಂಚಾಯತ್‌ನಲ್ಲಿ ಒಟ್ಟು ರೂ. ೧೧,೭೫೪ ಕರ ಸಂಗ್ರಹ ಮಾಡಿದರೆ ರೂ. ೧೩,೭೨೮ ಬಾಕಿ ಸಂಗ್ರಹ ಆಗಬೇಕಾದ ಮೊತ್ತವಾಗಿದೆ. ಇದರಲ್ಲಿ ಹುಣಸೆ ಮರದ ಏಲಂ ಹಣ ರೂ. ೩,೮೨೫ ಸೇರಿರುತ್ತದೆ. ೧೯೯೫ - ೯೬ ರಲ್ಲಿ ರೂ.೩೪,೭೩೮ ಕರ ಸಂಗ್ರಹವಾದರೆ (ಇದು ಕಳೆದ ವರ್ಷದ ಬಾಕಿ ಮೊತ್ತ ಸೇರಿ ಸಂಗ್ರಹವಾದದ್ದು ) ರೂ.೧೩,೩೮೮ ಬಾಕಿ ಸಂಗ್ರಹ ಆಗಬೇಕಾಗಿದೆ. ಹುಣಸೆ ಮರ ಏಲಂ ಹಣ ರೂ.೧೨,೧೨೫ ಆಗಿದೆ. ೧೯೯೬ - ೯೭ ರಲ್ಲಿ ರೂ. ೨೭,೩೪೮ ಕರ ಸಂಗ್ರಹವಾದರೆ ಬಾಕಿ ಸಂಗ್ರಹ ವಾಗಬೇಕಾದ ಮೊತ್ತ ರೂ. ೧೧,೪೩೬ ಆಗಿದೆ. ಹುಣಸೆ ಮರ ಏಲಂ ಹಣ ರೂ.೨,೩೫೦ ಆಗಿದೆ. ೧೯೯೭- ೯೮ ರಲ್ಲಿ ರೂ.೪೧,೩೧೮ ಕರ ವಸೂಲಿಯಾದರೆ ಕರ ವಸೂಲಿ ಆಗಬೇಕಾದ

ಬಾಕಿ ಮೊತ್ತ ರೂ. ೧೦,೧೦೩ ಆಗಿದೆ. ಹುಣಸೆ ಮರ ಏಲಂ ಹಣ ರೂ.೧೯,೧೭೫ ಆಗಿದೆ. ೧೯೯೮ - ೯೯ ರಲ್ಲಿ ಕರ ವಸೂಲಿ ರೂ. ೨೯,೩೯೨ ಆಗಿದ್ದರೆ ಬಾಕಿ ಕರ ವಸೂಲಿ ಮೊತ್ತ ರೂ. ೨೧,೨೩೬ ಆಗಿದೆ. ಇದು ೫ ವರ್ಷಗಳಲ್ಲಿ ಹೋಲಿಸಿದಾಗ ಸಂಗ್ರಹ ಆಗಬೇಕಾದ ಅತೀ ದೊಡ್ಡ ಮೊತ್ತವಾಗಿದೆ. ಹಿರೇಹೆಗ್ಡಾಳ್ ಗ್ರಾಮ ಪಂಚಾಯತಿಯ ತಲಾನುದಾನ ಕರಸಂಗ್ರಹ, ಒಟ್ಟು ಜಮಾ ಮತ್ತು ಖರ್ಚು ವಿವರಗಳನ್ನು ಕೋಷ್ಟಕ ೮ ರಲ್ಲಿ ತೋರಿಸಲಾಗಿದೆ.

ಈ ಗ್ರಾಮ ಪಂಚಾಯತ್‌ನಲ್ಲಿ ಆದಾಯಕ್ಕಿಂತ ಖರ್ಚು ಹೆಚ್ಚಾಗಿದೆ. ಕರ ಸಂಗ್ರಹವು ನಿರೀಕ್ಷಿತ ಮಟ್ಟದಲಿ ಆಗುತ್ತಿಲ್ಲ. ಪ್ರತಿ ವರ್ಷ ಕರ ಸಂಗ್ರಹ ಹಿಂದೆ ಉಳಿಯುತ್ತ ಬಂದಿದೆ. ಇದಕ್ಕಾಗಿ ಒಂದು ವ್ಯವಸ್ಥಿತವಾದ ಕರ ಸಂಗ್ರಹ ಸಪ್ತಾಹ ಅಥವಾ ಮಾಸವನ್ನು ಆಚರಿಸುವುದರ ಮೂಲಕ ಪಂಚಾಯತ್ ಕರ ಸಂಗ್ರಹವನ್ನು ಸರಿಯಾಗಿ ಮಾಡಬಹುದು. ಇದರಲ್ಲಿ ಪಂಚಾಯತ್ ಸದಸ್ಯರು ಹಾಗೂ ಸಿಬ್ಬಂದಿಗಳ ಮುಖ್ಯ ಪಾತ್ರವಿದೆ. ಅವರು ಗ್ರಾಮಸ್ಥರ ಒಲವನ್ನು ಅವಲಂಬಿಸಬೇಕು. ಇದಕ್ಕೆ ಪೂರಕವಾಗಿ ಜನಹಿತವಾಗುವಂಥ ಕಾರ್ಯಗಳನ್ನು ಮಾಡಬೇಕು. ಯಾಕೆಂದರೆ ತಾವು ತುಂಬುವ ತೆರಿಗೆಯ ಸದುಪಯೋಗವಾಗಿದೆ. ಜನರಿಗೆ ಲಾಭವಿದೆ ಎಂದು ಜನರಿಗೆ ಮನವರಿಕೆ ಆದರೆ ತೆರಿಗೆ ನೀಡಲು ಹಿಂದೇಟು ಹಾಕುವುದಿಲ್ಲ. ಇವತ್ತು ಯಾರೊಬ್ಬರು ಕರನೀಡಲಾಗದಂತ ಕಷ್ಟ ಪರಿಸ್ಥಿಯಲ್ಲಿ ಇಲ್ಲ. ದುಡಿಮೆಗೆ ಪ್ರತಿಫಲ ಇರುವಾಗ ಸ್ವಲ್ಪ ಭಾಗವನ್ನಾದರೂ ಕರ ಸಂಗ್ರಹಣೆಗೆ ಮೀಸಲಿಡಬಹುದು ಅಥವಾ ಕ್ಲುಪ್ತ ಸಮಯಕ್ಕೆ ಒಮ್ಮೆಗೆ ಕರ ನೀಡಬಹುದು ಇದರಿಂದ ಪಂಚಾಯತ್‌ನ ವರಮಾನ ಹೆಚ್ಚುವುದರಿಂದ ಅಭಿವೃದ್ಧಿ ಕಾರ್ಯಗಳನ್ನು ತ್ವರಿತಗತಿಯಲ್ಲಿ ಜಾರಿಗೊಳಿಸಬಹುದು.

## ೩. ಸಾಂಸ್ಕೃತಿಕ ಬದುಕು

ಈ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಎಂಟು ಗುಡಿಗಳಿವೆ. ಅವುಗಳಲ್ಲಿ ಈಶ್ವರ ದೇವರ ಗುಡಿ (ವೀರಶೈವರು), ಕೋಡಿ ಬಸವನ ಗುಡಿ, ಊರಮ್ಮನ ಗುಡಿ, ಹನುಮಪ್ಪ ಗುಡಿ (ವಾಲ್ಮೀಕಿ), ಹುನಗಮ್ಮ ಗುಡಿ (ಬಡಿಗೇರರು), ಮತಗಮ್ಮ ಮತ್ತು ಸಮಾದೆಮ್ಮನ ಗುಡಿ (ಹರಿಜನರು) ಮತ್ತು ಫಕೀರಸ್ವಾಮಿಯ ಗುಡಿಗಳಿವೆ. ಊರಮ್ಮ, ಹುನಗಮ್ಮ, ಮತಗಮ್ಮ ಮತ್ತು ಸಮಾದೆಮ್ಮ ಇವು ಹೆಣ್ಣು ದೇವರ ಗುಡಿಗಳಾಗಿವೆ. ಸಮಾದೆಮ್ಮ ಜಾತ್ರೆಯನ್ನು ಅತ್ಯಂತ ವೈಭವದಿಂದ ಆಚರಿಸಲಾಗುತ್ತದೆ. ಸಮಾದೆಮ್ಮನ ಪೂಜೆಯನ್ನು ಹರಿಜನರೇ ಮಾಡುತ್ತಾರೆ. ಪ್ರತಿವರ್ಷ ಡಿಸೆಂಬರ್ ಅಥವಾ ಜನವರಿ ತಿಂಗಳಲ್ಲಿ ಈ ಜಾತ್ರೆಯು ನಡೆಯುತ್ತದೆ. ಈ ಉತ್ಸವವು ಮಂಗಳವಾರ ಪ್ರಾರಂಭಗೊಂಡು ಶುಕ್ರವಾರದಂದು ಕೊನೆಗೊಳ್ಳುತ್ತವೆ. ಈ ಜಾತ್ರೆಯ ಪ್ರಯುಕ್ತ ಊರಿನಲ್ಲಿ ನಾಲ್ಕು ದಿನಗಳ ಕಾಲ ಧಾರ್ಮಿಕ ಕಾರ್ಯಕ್ರಮಗಳು ನಡೆಯುತ್ತವೆ.

ಮೊದಲ ದಿನ ಪೂಜಾರಿಯವರು ಸ್ನಾನ, ಇತ್ಯಾದಿ ಮುಗಿಸಿಕೊಂಡು ಅಲ್ಲಿಯ ದೇವತೆಗೆ ಪೂಜೆಯನ್ನು ಸಲ್ಲಿಸಿ ವಾದ್ಯಗಳ ಸಮೇತ ಸಮಾದೆಮ್ಮನನ್ನು ಗುಡಿಯವರೆಗೆ ಮೆರವಣಿಗೆಯಲ್ಲಿ ತಂದು ದೇವಿಯನ್ನು ಗರ್ಭಗುಡಿಯಲ್ಲಿ ಕೂರಿಸುತ್ತಾರೆ. ಪೂರ್ಣಕುಂಭವೇ ದೇವತೆಯ ಪ್ರತೀಕವಾಗಿರುತ್ತದೆ. ಇಲ್ಲಿಗೆ ಮೊದಲ ದಿನದ ಕಾರ್ಯಕ್ರಮ ಮುಗಿಯುತ್ತದೆ. ಎರಡನೆಯ ದಿನ ದೇವಿಯ ರಥೋತ್ಸವ ಕಾರ್ಯಕ್ರಮ ನಡೆಯುತ್ತದೆ. ಈ ಉತ್ಸವಕ್ಕೆ ಸ್ಥಳೀಯರು, ಮುಖ್ಯವಾಗಿ ಕೆಳವರ್ಗದವರು, ತಮ್ಮ ಬಂಧು ಬಳಗದವರನ್ನೆಲ್ಲ ಆಮಂತ್ರಿಸುತ್ತಾರೆ. ಈ ಜಾತ್ರೆಗೆ ಸೇರಿದಷ್ಟು ಜನ ಬೇರೆ ಯಾವ ಜಾತ್ರೆಗೂ ಸೇರುವುದಿಲ್ಲ ಎಂದು ಸ್ಥಳೀಯರು ತಿಳಿಸುತ್ತಾರೆ. ಈ ಜಾತ್ರೋತ್ಸವದಲ್ಲಿ ಸಮಾಜದ ಎಲ್ಲಾ ವರ್ಗದವರು ಪಾಲ್ಗೊಳ್ಳುತ್ತಾರೆ. ಸುತ್ತಮುತ್ತಲಿನ ಹಳ್ಳಿಗರು ಸಹ ಈ ಜಾತ್ರೆಯ ಸೊಬಗನ್ನು ಸವಿಯಲು ಹಿರೇಹೆಗ್ಡಾಳ್‌ಗೆ ಬರುತ್ತಾರೆ. ಜಾತ್ರೆಯ ಉಸ್ತುವಾರಿ ಜವಾಬ್ದಾರಿಗಳೆಲ್ಲವನ್ನು ಹರಿಜನರೇ ನಡೆಸುತ್ತಾರೆ.

ಮೂರನೆಯ ದಿನ ದೇವಿಗೆ ಹೂವುಕಾಯಿ, ಹರಕೆ ಸಲ್ಲಿಸುವ ಆಚರಣೆಗಳು ನಡೆಯುತ್ತವೆ. ಪ್ರಥಮವಾಗಿ ಹಳ್ಳಿಯ ಮೇಲ್ವರ್ಗದವರು ಮುಖ್ಯವಾಗಿ ಲಿಂಗಾಯಿತರು ದೇವಿಗೆ ಹೂವು ಕಾಯಿಗಳನ್ನು ಅರ್ಪಿಸುವುದರ ಮೂಲಕ ತಮ್ಮ ಪೂಜೆ ಮತ್ತು ಸೇವೆಯನ್ನು ಸಲ್ಲಿಸುತ್ತಾರೆ. ಇವರು ದೇವಿಗೆ ಹರಕೆಯೇನಾದರೂ ಹೇಳಿಕೊಂಡಿದ್ದಲ್ಲಿ ದೇವಿಗೆ ಬೇಟೆ ಸಲ್ಲಿಸುವುದಿಲ್ಲ. ಬದಲಾಗಿ ತಮ್ಮ

ದನಕರುಗಳನ್ನು ದೇವಿಯ ಗುಡಿಯ ಸುತ್ತಲೂ ಪ್ರದಕ್ಷಿಣೆ ಮಾಡುವುದರ ಮೂಲಕ ತಮ್ಮ ಹರಕೆಯನ್ನು ಸಲ್ಲಿಸುತ್ತಾರೆ. ಕೆಲವರು ದೇವಿಗೆ ಸೀರೆ, ಕುಪ್ಪಸ, ಹಣವನ್ನು ನೀಡುವುದರ ಮೂಲಕ ತಮ್ಮ ಸೇವೆಯನ್ನು ಸಲ್ಲಿಸುತ್ತಾರೆ.

ಎರಡನೆಯದಾಗಿ ಪರಿಶಿಷ್ಟ ಪಂಗಡದವರು ದೇವಿಗೆ ಪೂಜೆ ಸಲ್ಲಿಸುತ್ತಾರೆ. ಇವರು ಗುಡಿಗೆ ಬರುವಾಗ ಡೊಳ್ಳು ತಮಟೆಗಳ ಸದ್ದು ಮುಗಿಲು ಮುಟ್ಟುವಂತಿರುತ್ತದೆ. ಯಾವುದೇ ರೀತಿಯ ಹರಕೆಯನ್ನು ಹೊರದೆ ಇರುವವರು ದೇವಿಗೆ ಕೇವಲ ಹೂವು ಕಾಯಿಗಳನ್ನು ಮಾತ್ರ ಅರ್ಪಿಸುತ್ತಾರೆ. ಹರಕೆ ಹೊತ್ತವರು ವಿಭಿನ್ನ ರೀತಿಯಲ್ಲಿ ತಮ್ಮ ಹರಕೆಯನ್ನು ತೀರಿಸುತ್ತಾರೆ. ಹರಕೆ ಹೊತ್ತವರು ಮನೆಯಿಂದ ದೇವಿಯ ಗುಡಿಯವರೆಗೆ ಬೆತ್ತಲೆ ಬರಬೇಕೆಂದು ವಾಡಿಕೆ. ಆದರೆ ಈಗ ಈ ಆಚರಣೆ ನಡೆಯುತ್ತಿಲ್ಲ. ಈಗ ಬಟ್ಟೆಯ ಬದಲಾಗಿ ಲಕ್ಕಿ ಗಿಡದ ಎಲೆಗಳಿಂದ ತಮ್ಮ ಶರೀರವನ್ನು ಮುಚ್ಚಿಕೊಳ್ಳುತ್ತಾರೆ. ಮನೆಯಿಂದ ಗುಡಿಯವರೆಗೆ ಲಕ್ಕಿ ಎಲೆಗಳನ್ನು ತೊಟ್ಟು ಬರಿಗಾಲಲ್ಲಿ ನಡೆದು ಬಂದರೆ ಹರಕೆಯನ್ನು ತೀರಿಸಿದಂತೆಯೆ. ಗುಡಿಗೆ ಬಂದ ನಂತರ ಹೊಸಬಟ್ಟೆಗಳನ್ನು ಧರಿಸಿ ದೇವಿಗೆ ಪೂಜೆಯನ್ನು ಸಲ್ಲಿಸಿ ತಮ್ಮ ತಮ್ಮ ಮನೆಗಳಿಗೆ ಹಿಂದಿರುಗುತ್ತಾರೆ. ಕೆಲವು ಸಂದರ್ಭಗಳಲ್ಲಿ ಪರಿಶಿಷ್ಟರೆಲ್ಲ ಕೂಡಿ ದೇವಿಗೆ ಹರಕೆ ಮತ್ತು ಪೂಜೆ ಸಲ್ಲಿಸಿದ ಉದಾಹರಣೆಗಳಿವೆ.

ಕೊನೆಯದಾಗಿ ಹರಿಜನರು ದೇವಿಗೆ ಪೂಜೆಯನ್ನು ಸಲ್ಲಿಸುತ್ತಾರೆ. ಇವರ ಆಚರಣೆಗಳು ಪರಿಶಿಷ್ಟ ಪಂಗಡದವರ ಆಚರಣೆಯನ್ನು ಹೋಲುತ್ತದೆ. ಮೂರನೆಯ ದಿನ ದೇವಿಗೆ ಹರಕೆ ಹೊತ್ತವರು, ಕುರಿ, ಕೋಳಿ, ಕೋಣಗಳನ್ನು ದೇವಿಗೆ ಬೇಟೆಯಾಗಿ ಅರ್ಪಿಸುತ್ತಾರೆ. ಪರಿಶಿಷ್ಟ ಪಂಗಡ ಮತ್ತು ಬಾರೀಕರು ಸಹ ದೇವಿಗೆ ಬೇಟೆಯನ್ನು ನೀಡುತ್ತಾರೆ.

ನಾಲ್ಕನೆಯ ದಿನ ಅಗ್ನಿಕುಂಡ ಹಾಯುವ ಕಾರ್ಯಕ್ರಮವಿರುತ್ತದೆ. ಗುಡಿಯ ಪೂಜಾರಿ ಅಗ್ನಿಕುಂಡವನ್ನು ದಾಟುತ್ತಾರೆ. ಅಂದು ದೇವಿಗೆ ಪೂಜಾ ವಿಧಿವಿಧಾನಗಳು ಮುಗಿದ ಬಳಿಕ ಮಧ್ಯಾಹ್ನ ೧೨ ಗಂಟೆಯ ವೇಳೆಗೆ ಹೊರಟು ದೇವಿಯನ್ನು ನಾಲ್ಕು ಹಳ್ಳಿಗಳಿಗೆ (ಸಾಸಲವಾಡ, ಬೊಪ್ಪಲಾಪುರ, ಹನಸಿ, ಮತ್ತು ಸಾಣೇಹಳ್ಳಿ) ಮೆರವಣಿಗೆಯಲ್ಲಿ ಕೊಂಡೊಯ್ದು, ರಾತ್ರಿ ೧೧ ಗಂಟೆಯ ವೇಳೆಗೆ ಬಂದು ಗುಡಿಯನ್ನು ತಲುಪುತ್ತಾರೆ. ಮೇಲಿನ ಹಳ್ಳಿಗಳಿಗೆ ದೇವಿಯ ಮೆರವಣಿಗೆ ಬಂದಾಗ ಹಳ್ಳಿಗರು ಪೂಜೆಯನ್ನು ಸಲ್ಲಿಸುತ್ತಾರೆ. ಹಳ್ಳಿಗಳಿಂದ ಮೆರವಣಿಗೆ ಮುಗಿದು ದೇವಿಯು ಗರ್ಭಗುಡಿ ಸೇರುವುದರ ಮೂಲಕ ಒಟ್ಟು ನಾಲ್ಕು ದಿನಗಳ ಕಾರ್ಯಕ್ರಮಗಳು ಮುಕ್ತಾಯಗೊಳ್ಳುತ್ತವೆ.

ಹಿರೇಹೆಗ್ಡಾಳ್‌ನಲ್ಲಿನ ಸಮಾದೆಮ್ಮ ಜಾತ್ರೆಯ ಆಚರಣೆ, ಅದರಲ್ಲಿ ಪಾಲ್ಗೊಳ್ಳುವ ಸಮಾಜದ ವಿವಿಧ ವರ್ಗದ ಜನತೆ ಇವುಗಳನ್ನು ನೋಡುವಾಗ ನಮಗೆ ಕೆಲ ಅಂಶಗಳು ಗೋಚರಿಸುತ್ತವೆ. ಸಮಾದೆಮ್ಮ ಮುಖ್ಯವಾಗಿ ಕೆಳವರ್ಗದ ದೇವತೆ. ಆ ದೇವತೆಯ ಪೂಜೆ-ಸೇವೆ ಮೊದಲಾದ ಹಕ್ಕುಗಳೆಲ್ಲವೂ ಸಹ ಈ ಜನಾಂಗಕ್ಕೆ ಸೇರಿವೆ. ಹಲವಾರು ಹಳ್ಳಿಗಳಲ್ಲಿ ಗುಡಿಯಲ್ಲಿ ಪೂಜೆ ಸಲ್ಲಿಸುವ ಹಕ್ಕು ಪರಿಶಿಷ್ಟರಿಗೆ ಇರುವುದಿಲ್ಲ. ಈ ದೃಷ್ಟಿಯಲಿ ಈ ಹಳ್ಳಿಯ ಜನತೆ ದೇವತೆಯ ಪೂಜೆಯ ಹಕ್ಕನ್ನು ತಮ್ಮದಾಗಿಸಿಕೊಂಡಿರುವುದರಿಂದ ಈ ವರ್ಗ ಇಲ್ಲಿ ಅಷ್ಟೇನೂ ನಿರ್ಲಕ್ಷ್ಯಕ್ಕೆ ಒಳಗಾಗಿಲ್ಲವೇನೊ ಅನಿಸುತ್ತದೆ. ಆದರೆ ಜಾತ್ರೆಯ ದಿನ ಪೂಜೆ ಸಲ್ಲಿಸುವುದರಲ್ಲಿ ಜಾತಿ ತಾರತಮ್ಯತೆಗಳಿರುವುದನ್ನು ಕಾಣಬಹುದಾಗಿದೆ. ಸಮಾದೆಮ್ಮ ಪೂಜೆ, ಗುಡಿಯ ಉಸ್ತುವಾರಿ ಎಲ್ಲವೂ ಸಮಾಜದ ಕೆಳವರ್ಗದವರ ಕೈಯಲ್ಲಿದ್ದರೂ ಜಾತ್ರೆಯ ದಿನ ಮೊದಲು ಪೂಜೆ ಸಲ್ಲಿಸುವರು ಸಮಾಜದ ಮೇಲ್ವರ್ಗದ ಜನರಾದ ಲಿಂಗಾಯಿತರು. ಈ ಸಂದರ್ಭದಲ್ಲಿ ಪೂಜೆ ಮಾಡುವವರು ಸಹ ಅವರೇ ಆಗಿರುತ್ತಾರೆ. ಇವರಾದ ನಂತರವೆ ಇತರರು ತಮ್ಮ ಸೇವೆಯನ್ನು ಸಲ್ಲಿಸಬೇಕು. ಈ ಅಂಶವನ್ನು ಕಂಡಾಗ ಸಮಾಜದ ಮೇಲ್ವರ್ಗಕ್ಕೆ ಸೇರಿದ ಜನ ಪರೋಕ್ಷವಾಗಿಯೂ, ಸೂಕ್ಷ್ಮವಾಗಿಯಾದರೂ ಕೆಳವರ್ಗದವರಿಂದ ಬೇರೆಯಾಗಿರಲು ಇಷ್ಟಪಡುತ್ತಾರೆ ಎಂಬ ಅಂಶ ತಿಳಿಯುತ್ತದೆ. ಕೆಳವರ್ಗದವರಿಗೆ ಮೊದಲ ಪೂಜೆ ಸಲ್ಲಿಸಬಹುದಿತ್ತಲ್ಲ ಎಂದು ಸ್ಥಳೀಯರನ್ನು ಪ್ರಶ್ನಿಸಿದಾಗ ಹಿಂದಿನಿಂದಲೂ ನಡೆದು ಬಂದ ಸಂಪ್ರದಾಯವನ್ನೇ ಅನುಸರಿಸುವುದು ಒಳಿತು ಎಂಬುದು ಅವರ ಉತ್ತರವಾಗಿದೆ. ಒಂದು ಮೇಳೆ ಮೇಲ್ವರ್ಗದವರು ಕೇಳವರ್ಗದ ಜನರ ಅಧೀನದಲ್ಲಿರುವ ಸಮಾದೆಮ್ಮ ಜಾತ್ರೆಯ ದಿನ ಮೊದಲು ಸೇವೆ ಸಲ್ಲಿಸುವ ಅವಕಾಶ ಇಲ್ಲವೇ ಅನುಮತಿ ನೀಡಿದರೂ, ಕೇಳವರ್ಗದರು ಇಲ್ಲಿಯವರೆಗೂ ನಂಬಿಕೊಂಡು ಬಂದಿರುವ ರೂಢಿ-ಸಂಪ್ರಾದಾಯಗಳು ಅದಕ್ಕೆ ತಡೆಯನ್ನುಂಟು ಮಾಡುತ್ತವೆ.

ಸಮಾದೆಮ್ಮನ ಪೂಜೆ ಜಾತ್ರೆಗಳಂತಹ ಆಚರಣೆಗಳು ಹಳ್ಳಿಗಳಲ್ಲಿ ಜಾತಿ ತಾರತಮ್ಯಗಳು ಹೇಗೆ ಬೇರುಬಿಟ್ಟಿವೆ ಎಂಬುದನ್ನು ತಿಳಿಸುವ ಜೀವಂತ ಉದಾಹರಣೆಗಳು. ಸರಕಾರದ ನೀತಿಗಳಿಂದಾಗಿ ಹೊರನೋಟಕ್ಕೆ ಹಳ್ಳಿಗಳಲ್ಲಿ ಜಾತಿ ಜಾತಿಗಳಲ್ಲಿ ಸಮಾನತೆಯನ್ನು ಕಾಣಬಹುದಾರೂ ಧಾರ್ಮಿಕ ಸಂಗತಿ ಆಚರಣೆಗಳಿಗೆ ಸಂಬಂಧಿಸಿದಂತೆ ಜಾತಿಯ ತಾರತಮ್ಯಗಳ ಕರಾಳ ರೂಪ ನಮಗೇ ಗೋಚರವಾಗುತ್ತದೆ.

**ಗುಳೇಲಕ್ಕಮ್ಮ :-** ದನಕರುಗಳ ವಿಚಾರವಾಗಿ ಅವುಗಳಿಗೆ ರೋಗರುಜಿನಗಳು ಬಾರದಂತೆ ತಡೆಯುವ ಭಾವನೆ ಜನರಲ್ಲಿ ಇರುವುದರಿಂದ ಈ ಹಬ್ಬದ ಆಚರಣೆ ನಡೆಯುತ್ತದೆ. ಪ್ರತೀ ವರ್ಷ ಒಂದು ದಿನ ಈ ಹಬ್ಬ ನಡೆಯುತ್ತದೆ. ಇದು ಸಾಮಾನ್ಯವಾಗಿ ಪ್ರತೀ ಜನವರಿ ಅಮವಾಸ್ಯೆಯ ಒಳಗೆ ಒಂದು ಮಂಗಳವಾರದ ದಿನ ನಡೆಯುತ್ತದೆ. ಜಾತ್ರೆ ಇದೆ ಎಂದು ೫ ದಿನಗಳ ಮುಂಚಿತವಾಗಿ ಗುರಿಕಾರರು ಅಂದರೆ ಚಲವಾದಿಗಳು ಸಾರು ಹಾಕುತ್ತಾರೆ. ಗುಳೇ ಎಂದರೆ ಕಿತ್ತುಕೊಂಡು ಹೋಗುವುದು ಎಂದರ್ಥ. ಸಾಮಾನ್ಯವಾಗಿ ಗೋಧಿ ಹಿಟ್ಟಿನಲ್ಲಿ ದೇವಿಯ ಅಂದರೆ ಗುಳೇ ಲಕ್ಕಮ್ಮನ ಮೂರ್ತಿಯನ್ನು ಬಾರಿಕರು ಮನೆಯಲ್ಲಿ ಮಾಡುತ್ತಾರೆ. ನಂತರ ಅದನ್ನು ತಂದು ಪಂಚಾಯತ್ ಕಟ್ಟೆಯಲ್ಲಿ ಮುಂಜಾನೆ ಸುಮಾರು ೯ ಗಂಟೆಗೆ ಇಡುತ್ತಾರೆ. ಊರಿನ ಸಮಸ್ತ ಭಕ್ತಾದಿಗಳು ಹಣ್ಣು ಕಾಯಿ ಪೂಜೆ ಸಲ್ಲಿಸುತ್ತಾರೆ. ಬಾರಿಕರು ಗುಳೇ ಲಕ್ಕಮ್ಮನ ಮರದ ಹತ್ತಿರ ದೇವರನ್ನು ಇಡುತ್ತಾರೆ. ನಂತರ ದೇವಿಗೆ ಕುರಿಬಲಿ ಕೊಡುತ್ತಾರೆ. ಇದಾದ ಬಳಿಕ ಎಲ್ಲರೂ ತಮ್ಮ ತಮ್ಮ ಮನೆಗಳಿಂದ ಸಂಜೆಯವರೆಗೆ ಬೇಕಾಗುವ ಆಹಾರ ಪದಾರ್ಥಗಳನ್ನು ಹೊಯ್ದು ಊರಿನಲ್ಲಿ ಒಂದು ನರಪಿಳ್ಳೆಯೂ ಉಳಿಯದಂತೆ ಊರಾಚೆಗಿನ ಹೊಲಗಳಿಗೆ ಹೋಗುತ್ತಾರೆ. ಬೆಕ್ಕು, ಕೋಳಿ, ದನ, ನಾಯಿ, ಇತ್ಯಾದಿ ಯಾವುದೇ ಪ್ರಾಣಿಗಳು ಸಹ ಅಂದು ಊರಲ್ಲಿರದೆ ಮನೆ ಒಡೆಯರ ಸಮೇತ ಸಂಜೆಯವರೆಗೆ ಸಮಯವನ್ನು ಹೊಲದಲ್ಲಿ ಕಳೆಯಬೇಕು. ಸಂಜೆ ಪುನಃ ಊರಿಗೆ ಪ್ರವೇಶಿಸಬೇಕು. ಹೀಗೆ ಬೆಳಗಿನಿಂದ ಸಂಜೆಯವರೆಗೆ ಜನರು ತಮ್ಮ ತಮ್ಮ ಹೊಲಗಳಲ್ಲೆ ಕಾಲ ಕಳೆಯುತ್ತಾರೆ ಯಾರೂ ಈ ಹೊತ್ತಿನಲ್ಲಿ ಊರೊಳಗೆ ಪ್ರವೇಶಿಸುವಂತಿಲ್ಲ.

**ಕೋಡಿ ಬಸವನ ಜಾತ್ರೆ :-** ಕೋಡಿ ಬಸವನ ಜಾತ್ರೆಗೆ ಕಳಸ ಬೆಳಗಿದ ನಂತರ ತೇರು ಎಳೆಯಲಾಗುತ್ತದೆ. ಕೋಡಿ ಬಸವೇಶ್ವರ ಜಾತ್ರೆಯ ಹಿಂದಿನ ದಿನ ಸಾಮೂಹಿಕ ವಿವಾಹ ಕಾರ್ಯಕ್ರಮವನ್ನು ಇತ್ತೀಚಿನಿಂದ ನಡೆಸುತ್ತಿದ್ದಾರೆ. ಇದರಲ್ಲಿ ಉಜ್ಜಿನಿ ಸ್ವಾಮಿಗಳು ಹಾಗೂ ರಂಭಾಪುರಿ ಸ್ವಾಮಿಗಳು ಭಾಗವಹಿಸುತ್ತಾರೆ. ೧೯೯೮ - ೯೯ ರಲ್ಲಿ ನಡೆದ ಸಾಮೂಹಿಕ ವಿವಾಹ ಕಾರ್ಯಕ್ರಮದಲ್ಲಿ ೨೫ ಜೋಡಿ ವಧೂ-ವರರಿದ್ದರೆ, ೯೯ - ೨೦೦೦ ರಲ್ಲಿ ೪೧ ಜೋಡಿಗಳಿದ್ದರು. ಈ ವರ್ಷ ೨೦೦೦ - ೨೦೦೧ರಲ್ಲಿ ೬೧ ಜೋಡಿ ವಧೂ-ವರರಿದ್ದರು. ವಧೂ-ವರರಿಗೆ ಚಿನ್ನದ ತಾಳಿ, ಬಟ್ಟೆ, ಕಡಗ, ಕಾಲುಂಗುರ ಇತ್ಯಾದಿಗಳನ್ನು ಊರವರ ವತಿಯಿಂದ ನೀಡಲಾಗುವುದು. ಹಾಗೂ ಅನ್ನಸಂತರ್ಪಣೆ ಮಾಡಲಾಗುವುದು. ಇದಕ್ಕಾಗಿ ಪ್ರತಿ ಜೋಡಿಯು ಕಳೆದ ಬಾರಿ ರೂ. ೫೦೧ ನೀಡಿದ್ದರೆ ಈ ಬಾರಿ ರೂ. ೬೦೧ ನೀಡಿದ್ದಾರೆ.

ಈ ಜಾತ್ರೆಗೆ ಸ್ವಾಮಿಗಳು ಬಂದಾಗ ಅಡ್ಡಪಲ್ಲಕ್ಕಿ ಕಾರ್ಯಕ್ರಮ ನಡೆಯುತ್ತದೆ. ಉಜ್ಜಿನಿ ಮಠಕ್ಕೆ ಸೇರಿದ ಓರ್ವ ಸ್ವಾಮಿಗಳ ಒಂದು ಗದ್ದುಗೆ ಸಹ ಇಲ್ಲಿದೆ.

**ಮೊಹರಂ ಹಬ್ಬ :-** ಇದು ಮುಸ್ಲಿಮರ ಹಬ್ಬವಾದರು ಹಿಂದೂಗಳು ಭಾಗವಹಿಸುತ್ತಾರೆ. ಹನ್ನೆರಡು ಅಮವಾಸ್ಯೆ, ಹನ್ನೆರಡು ಹುಣ್ಣಿಮೆ ನಂತರ ಈ ಹಬ್ಬದ ಆಚರಣೆ ಪ್ರಾರಂಭವಾಗುತ್ತದೆ. ಈ ಹಬ್ಬದ ಐತಿಹ್ಯವೆಂದರೆ ಹುಸೇನ್ ಒಬ್ಬ ಮಹಾವೀರ. ಯುದ್ಧದಲ್ಲಿ ಮರಣಹೊಂದಿದನು ಮತ್ತು ಅವನ ಸ್ಮರಣೆಗಾಗಿ ಈ ಹಬ್ಬವನ್ನು ದುಃಖ ಸೂಚಕವಾಗಿ ಆಚರಸಬೇಕೆಂಬುದು ನಿಯಮ. ಆದರೆ ಇತ್ತೀಚೆಗೆ ಹೆಚ್ಚಾಗಿ ಜನ ಈ ಹಬ್ಬದಲ್ಲಿ ಕುಣಿಯುವುದು ಕಂಡುಬರುತ್ತದೆ. ಮೊಹರಂ ತಿಂಗಳ ಮೊದಲ ದಿನ ಅಂದರೆ ಪಾಡ್ಯದಂದು ಕುಣಿ ತೋಡುತ್ತಾರೆ. ಅಂದರೆ ಆಲಿ ಕುಣಿಗಾಗಿ ಪೂಜೆ ರೀತಿಯ ಆಚರಣೆ ಅಥವಾ ಗುದ್ದಲಿ ಹಾಕುವುದು ನಡೆಯುತ್ತದೆ. ಗುದ್ದಲಿ ಹಾಕಿದ ೩ ಅಥವಾ ೫ ದಿನಗಳ ಬಳಿಕ ದೇವರುಗಳನ್ನು ಮಸೀದಿಯಲ್ಲಿ ಕೂಡಿಸಲಾಗುವುದು. ಇದರಲ್ಲಿ ಒಟ್ಟು ೫ ದೇವರುಗಳಿವೆ. ದೂರದ ಹನಸಿಯಿಂದಲೂ ಮುಸ್ಲಿಂ ಬಾಂಧವರು ಈ ಹಬ್ಬಕ್ಕಾಗಿ ಹೆಗ್ಡಾಳ್‌ಗೆ ಬರುತ್ತಾರೆ. ೯ ನೇ ರಾತ್ರಿ ಮುಚ್ಚಿ ಬಿಡುತ್ತಾರೆ. ೧೦ ನೇ ದಿನ ಶವವನ್ನು ಬಾವಿಗೆ ಹಾಕುತ್ತಾರೆ.

**ಗ್ರಾಮಸ್ಥರ ಅರಿವು :-** ಗ್ರಾಮಪಂಚಾಯತ್‌ನ ಅಧ್ಯಯನಕ್ಕೆ ಪೂರಕವಾಗಿ ಮಾದರಿ ಪ್ರಶ್ನಾವಳಿಗಳನ್ನು ರೂಪಿಸಿ ಗ್ರಾಮನಿವಾಸಿಗಳು ಮತ್ತ ಪಂಚಾಯತ್ ಪ್ರತಿನಿಧಿಗಳನ್ನು ಸಂದರ್ಶಿಸಿ ಅಭಿಪ್ರಾಯ ಸಂಗ್ರಹಿಸಲಾಯಿತು. ಗ್ರಾಮಪಂಚಾಯತ್‌ನ ಒಟ್ಟು ಹತ್ತು ಮಂದಿ ಸದಸ್ಯರಲ್ಲಿ ೮ ಮಂದಿಯನ್ನು ಸಂದರ್ಶಿಸಿ ಮಾಹಿತಿ ಪಡೆಯಲಾಯಿತು. ಇದರಲ್ಲಿ ಪಂಚಾಯತ್‌ನ ಅಧ್ಯಕ್ಷರು ಮತ್ತು ಉಪಾಧ್ಯಕ್ಷರು ಸೇರಿದ್ದಾರೆ. ಮುಕ್ತ ಪ್ರಶ್ನಾವಳಿಯ ಮೂಲಕ ಅವರ ಅಭಿಪ್ರಾಯಗಳನ್ನು ಪಡೆಯಲಾಯಿತು. ಜೊತೆಗೆ ಕಾರ್ಯದರ್ಶಿ, ಕರಸಂಗ್ರಹಕಾರ ಹಾಗೂ ನೀರುಗಂಟಿ ಮತ್ತಿತರ ಸಿಬ್ಬಂದಿಗಳನ್ನು ಸಂದರ್ಶಿಸಿ ಮಾಹಿತಿ ಪಡೆಯಲಾಯಿತು.

ಪಂಚಾಯತ್ ಅಧ್ಯಕ್ಷರು ಹಾಗೂ ಉಪಾಧ್ಯಕ್ಷರನ್ನೊಳಗೊಂಡು ಸದಸ್ಯರನ್ನು ಸಂದರ್ಶಿಸಿ ಮಾಹಿತಿ ಕಲೆಹಾಕಲಾಯಿತು. ಇದರಲ್ಲಿ ಇಬ್ಬರು ಸದಸ್ಯರು ಅವಿರೋಧವಾಗಿ ಆಯ್ಕೆಯಾದವರು ಮತ್ತು ಇಬ್ಬರು ಪರಿಶಿಷ್ಟ ಜಾತಿಯ ಸದಸ್ಯರಿದ್ದಾರೆ. ಇವರಲ್ಲಿ ಒಬ್ಬಳು ಮಹಿಳೆ ಇದ್ದಾರೆ. ಇವರಿಬ್ಬರೂ ಅನಕ್ಷರಸ್ಥರು. ಎಲ್ಲ ಸದಸ್ಯರಿಗೂ ಗ್ರಾಮಪಂಚಾಯತ್ ಮತ್ತು ಅದರ ವ್ಯಾಪ್ತಿಯ ಗ್ರಾಮ ಯಾ ಹಳ್ಳಿಗಳ ಪರಿಚಯವಿದೆ. ಪ್ರತಿಯೊಬ್ಬರೂ ತಾವು ಗ್ರಾಮಸಭೆಯಲ್ಲಿ ಭಾಗವಹಿಸುತ್ತೇವೆ ಎಂದಿದ್ದಾರೆ. ಗ್ರಾಮಸಭೆಯನ್ನು ನಿಯಾಮಾನುಸಾರವಾಗಿ ಕರೆಯಲಾಗುತ್ತದೆ ಮತ್ತು ಗ್ರಾಮದ ಜನರು ಸಭೆ ಸೇರುತ್ತಾರೆ ಎಂಬುದಾಗಿ ಸದಸ್ಯರು ತಿಳಿಸುತ್ತಾರೆ. ಗ್ರಾಮಸಭೆಯನ್ನು ಪಂಚಾಯತ್ ಕಚೇರಿಯಲ್ಲಿ ಬಾಗಿಲು ಹಾಕಿ ಸಭೆ ಕರೆಯುತ್ತಾರೆ ಎಂಬ ಸುದ್ದಿಗಳಿವೆ ಎಂದು ಕುತೂಹಲಕ್ಕಾಗಿ ಇಬ್ಬರು ಸದಸ್ಯರಲ್ಲಿ ಕೇಳಿದಾಗ ಅವರು ನಿರುತ್ತರಿಗಳಾಗುತ್ತಾರೆ. ಗ್ರಾಮಸಭೆಯಲ್ಲಿ ಫಲಾನುಭವಿಗಳ ಆಯ್ಕೆ ನಡೆಯುತ್ತದೆ ಎಂದು ಎಲ್ಲ ಸದಸ್ಯರಿಗೂ ತಿಳಿದಿರುತ್ತದೆ. ಆಯವ್ಯಯ ಪಟ್ಟಿ ಕುರಿತು ತಿಳಿಸಿದರೆ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ಮೂವರು ಸದಸ್ಯರು ಇದರ ಅರಿವು ಇದೆ ಎಂದಿದ್ದಾರೆ. ಉಳಿದವರು ಉತ್ತರಿಸಿಲ್ಲ. ವಿಶೇಷವಾಗಿ ಸಮಿತಿಗಳ ಬಗ್ಗೆ ಯಾರೂ ಉತ್ತರಿಸಿಲ್ಲ. ಕೇಳಿದಾಗ ಸುಮ್ಮನೆ ಸಮಿತಿ ಇದೆ ಎಂದು ಪಂಚಾಯತ್ ಅಧಿಕಾರಿಗಳು ತಿಳಿಸಿದ್ದಾರೆ. ಇಲ್ಲಿ ನಿಜವಾಗಿಯೂ ಸಮಿತಿ ಅಸ್ತಿತ್ವದಲ್ಲಿಲ್ಲ ಮತ್ತು ಇದರ ಕಾರ್ಯಕಲಾಪಗಳು, ರಚನೆ, ಇವು ಯಾವುವು ಎಂಬುದರ ಕುರಿತು ಮಾಹಿತಿ ಒಬ್ಬನೇ ಒಬ್ಬ ಸದಸ್ಯನಿಗೂ ತಿಳಿದಿಲ್ಲ. ಇದರ ಬಗ್ಗೆ ಯಾವುದೇ ಸದಸ್ಯನಿಗಾಗಲಿ ಪ್ರಾಥಮಿಕ ಜ್ಞಾನವಿದ್ದಂತಿಲ್ಲ. ಈ ಸಮಿತಿಗಳ ಮೂಲಕ ಗ್ರಾಮಪಂಚಾಯತ್ ತನ್ನ ಅಧಿಕಾರ ಪ್ರಕಾರ್ಯಗಳನ್ನು ನಿರ್ವಹಿಸಬೇಕೆಂಬ ಅರಿವು ಇವರಿಗಿಲ್ಲ ಎಂಬುದು ಸ್ಪಷ್ಟವಾಗಿದೆ. ವಾರ್ಷಿಕ ಯೋಜನೆ ಬಗ್ಗೆ ವಿವರಿಸಿ ತಿಳಿಸಿದಾಗ ಕೆಲವು ಆ ರೀತಿಯ ಕಾರ್ಯಕ್ರ ಇದೆ ಎಂದೂ, ಇನ್ನು ಕೆಲವರು ಇಲ್ಲವೆಂದೂ ತಿಳಿಸಿರುತ್ತಾರೆ. ಇದರ ಅರಿವು ಯಾಕಿಲ್ಲ ಎಂದು ಕೇಳಿದರೆ ಯಾರೂ ಸಮರ್ಪಕವಾಗಿ ಉತ್ತರಿಸಿಲ್ಲ. ಪಂಚಾಯತ್ ಸದಸ್ಯರಾಗಿ ಇದನ್ನು ಅರಿತುಕೊಳ್ಳುವುದು ನಿಮ್ಮ ಕರ್ತವ್ಯವಲ್ಲವೇ ಎಂದು ಕೇಳಿದರೆ ಅದಕ್ಕೂ ಉತ್ತರವಿಲ್ಲ. ಹಾಗೆಯೇ ಕೃಷಿ ಅಭಿವೃದ್ಧಿ ಯೋಜನೆಗಳು, ಕೃಷಿಯೇತರ ಅಭಿವೃದ್ಧಿ ಯೋಜನೆಗಳು ಮತ್ತು ಪರಿಸರ ಕಾಳಜಿಯ ಬಗ್ಗೆ ಯಾರಿಗೂ ಒಲವಿಲ್ಲವೆಂಬುದು ಸ್ಪಷ್ಟವಾಗುತ್ತದೆ. ಹೆಚ್ಚಿನ ಸದಸ್ಯರು ಕೃಷಿಕರಾದರೂ ಕೃಷಿ ಅಭಿವೃದ್ಧಿ ಯೋಜನೆಗಳನ್ನು ಅನುಷ್ಠಾನಗೊಳಿಸಿದಲ್ಲಿ ಕೃಷಿ ಇನ್ನಷ್ಟು ಸುಧಾರಣೆಗೊಳ್ಳುವುದು ಎಂಬ ದೃಷ್ಟಿಕೋನವನ್ನು ಅಲ್ಲಗಳೆದಿರುವಂತೆ ಭಾಸವಾಗುತ್ತದೆ. ಕೃಷಿ ಅಭಿವೃದ್ಧಿ ಯೋಜನೆಗಳನ್ನು ಯಾಕೆ ಮಾಡುವುದಿಲ್ಲವೆಂದರೆ ಇದು ಒಣಭೂಮಿ ಎಂಬುದಾಗಿ ಕೆಲವರ ಉತ್ತರ. ಗ್ರಾಮಪಂಚಾಯತ್ ಪೂರೈಸಿದಿ ಅಭಿವೃದ್ಧಿ ಕಾಮಗಾರಿಗಳಲ್ಲಿ ಬಂಡೆಹಾಸಿರುವುದನ್ನೆ ಅವರು ಮೊದಲು ತಿಳಿಸುತ್ತಾರೆ. ಹಾಗೆಯೇ ಜನತಾ ಮನೆ, ಅಂಬೇಡ್ಕರ್ ಭವನ, ಭಜನಾ ಮಂದಿರ, ಅಂಗನವಾಡಿ, ಚರಂಡಿ ವ್ಯವಸ್ಥೆ ಮತ್ತು ಭಾಗ್ಯಜ್ಯೋತಿ ಮುಂತಾದ ಯೋಜನೆಗಳನ್ನು ಜನರಿಗೆ ಒದಗಿಸಿದ್ದೇವೆ ಎಂದು ಹೇಳುತ್ತಾರೆ. ಹೆಚ್ಚಿನ ಕೆಲಸಕಾರ್ಯಗಳನ್ನು ಗುತ್ತಿಗೆದಾರರು ಮಾಡಿದ್ದಾರೆ ಎಂದು ತಿಳಿಸುತ್ತಾರೆ. ಆದರೆ ಆ ಕೆಲಸಗಳು ತೃಪ್ತಿಕರವಾಗಬೇಕಿದ್ದರೆ ಈ ಸದಸ್ಯರು ಅಲ್ಲೇ ನಿಂತು ಮಾಡಿಸಬೇಕೆಂಬ ದೃಢಸಂಕಲ್ಪ ಇವರ್ಯಾರಿಗೂ ಇದ್ದಂತಿಲ್ಲ.

ಇನ್ನೊಂದು ವಿಷಯವೆಂದರೆ ಸಾಮಾನ್ಯವಾಗಿ ಗ್ರಾಮಪಂಚಾಯತ್‌ಗೆ ವಾರ್ಷಿಕ ಅನುದಾನ ಮತ್ತು ಜವಾಹರ್ ರೋಜ್‌ಗಾರ್ ಯೋಜನೆ (ಜೆ. ಆರ್. ವೈ.) ಅನುದಾನ ಬರುವಾಗ ಹೆಚ್ಚಿನ ಗ್ರಾಮಪಂಚಾಯತ್‌ಗಳಲ್ಲಿ ಸದಸ್ಯರುಗಳು ತಮ್ಮ ಪಾಲಿನ ಹಣ (ಅನುದಾನದ ಪಾಲು) ದ ಮೊತ್ತವೆಷ್ಟು ಎಂದು ಗ್ರಾಮಪಂಚಾಯತಿಯಲ್ಲಿ ನಿರ್ಧರಿಸಿ ಅದರ ಆಧಾರದ ಮೇಲೆ ಹಳ್ಳಿಯ ಕೆಲಸ ಕಾರ್ಯಗಳನ್ನು ಕೈಗೆತ್ತಿಕೊಳ್ಳುತ್ತಾರೆ. ಹೆಚ್ಚಿನ ಸದಸ್ಯರು ತಮಗೆ ಸಂಪರ್ಕವಿರುವ ಗುತ್ತಿಗೆದಾರರ ಮೂಲಕ ಕೆಲಸ ಮಾಡಿಸುತ್ತಾರೆ. ಇದು ಹೆಚ್ಚಾಗಿ ಈಗ ನಡೆಯುತ್ತಿದೆ. ಕೆಲವು ಪ್ರಬಲ ಸದಸ್ಯರು ತಮ್ಮ ಪಾಲಿನ ಹಣವನ್ನು ಯಥಾವತ್ತಾಗಿ ಹೆಚ್ಚಿಗೆ ಸಿಗುವಂತೆ

ಅಧಿಕಾರಯುತವಾಗಿ ಪಡೆಯುತ್ತಾರೆ. ಉಳಿದವರು ತಮಗೆ ಸಿಕ್ಕಿದ ಹಣದಲ್ಲಿ ಇರುವಂತಹ ಕಾರ್ಯಕ್ರಮಗಳನ್ನು ನಡೆಸುತ್ತಾರೆ. ಇದು ಹೆಚ್ಚಿನ ಮಟ್ಟದಲ್ಲಿ ಗ್ರಾಮಪಂಚಾಯತ್‌ನಲ್ಲಿ ನಡೆಯುವ ಪರಿಪಾಠವಾಗಿದೆ. ಆದರೆ ಹಿರೇಹೆಗ್ಡಾಳ್ ಇದಕ್ಕೆ ಸ್ವಲ್ಪ ಮಟ್ಟಿಗೆ ಪೂರಕವಾಗಿದ್ದರೂ ಎಲ್ಲ ಸದಸ್ಯರಿಗೂ ಈ ರೀತಿ ಕೇಳಿ ಪಡೆಯುವಷ್ಟು ಸ್ವಾತಂತ್ರ್ಯ ಅಥವಾ ಅದಕ್ಕೆ ಬೇಕಾದಂತಹ ಚಾಕಚಕ್ಯತೆ ಇಲ್ಲವೆಂಬಂತೆ ಕಂಡುಬರುತ್ತದೆ.

ಹೆಚ್ಚಿನ ಗ್ರಾಮಸ್ಥರಿಗೆ ಗ್ರಾಮಸಭೆಯ ಬಗೆಗೆ ಮತ್ತು ಗ್ರಾಮಸಭೆಯಲ್ಲಿ ಫಲಾನುಭವಿ ಆಯ್ಕೆ ನಡೆಯುತ್ತದೆ ಎಂಬುದು ಗೊತ್ತಿದೆ. ಯಾಕೆಂದರೆ ಒಂದಲ್ಲ ಒಂದು ವಿಧದಲ್ಲಾದರೂ ಆ ಹಳ್ಳಿಯು ಸರಕಾರದ ಯೋಜನೆಗಳ ಲಾಭವನ್ನು ಪಡೆದಿರುತ್ತದೆ. ಉದಾಹರಣೆಗೆ ನಮ್ಮ ಮಾದರಿ ಗ್ರಾಮದ ಹಳ್ಳಿಗಳಾದ ಸಾಸಲವಾಡ ಮತ್ತು ಸಾಣೇಹಳ್ಳಿಯಲ್ಲಿ ಈ ವರೆಗೆ ಗ್ರಾಮಸಭೆಗಳು ನಡೆದೇ ಇಲ್ಲ. ಬರೀ ಹೆರೇಹೆಗ್ಡಾಳ್ ಮತ್ತು ಒಮ್ಮೆ ಬೊಪ್ಪಲಾಪುರದಲ್ಲಿ ನಡೆದಿತ್ತು. ಆದರೂ ಹಳ್ಳಿಗರು ಗ್ರಾಮಸಭೆಗೆ ಹೋಗದಿದ್ದರೂ ಅಥವಾ ಗ್ರಾಮಸಭೆ ನಡೆಯುವ ಕುರಿತು ಮಾಹಿತಿ ಇರದೆ/ಸಿಗದೆ ಇದ್ದರೂ ಗ್ರಾಮಸಭೆ ಎಂಬ ಒಂದು ಸಂಸ್ಥೆ ಇದೆಯೆಂದೂ ಅದು ಫಲಾನುಭವಿ ಕೇಂದ್ರ ಎಂಬುದಾಗಿಯೂ ಗೊತ್ತಿದೆ. ಹೆಚ್ಚಿನ ಗ್ರಾಮಸ್ಥರಿಗೆ ಅಧ್ಯಕ್ಷರು ಮತ್ತು ಕಾರ್ಯದರ್ಶಿಯವರು ಗೊತ್ತು. ಆದರೆ ಉಳಿದ ಪಂಚಾಯತ್ ಸದಸ್ಯರು ಯಾರ್ಯಾರು, ಅವರಲ್ಲಿ ಮಹಿಳೆಯರೆಷ್ಟು ಎಂಬುದು ನಿಖರವಾಗಿ ಗೊತ್ತಿಲ್ಲ. ಪಂಚಾಯತ್‌ನ ಇತರ ಸಿಬ್ಬಂದಿಗಳ ಬಗ್ಗೆಯೂ ಅಷ್ಟೇನು ತಿಳಿದಿಲ್ಲ. ಅಂದರೆ ಒಟ್ಟು ಪಂಚಾಯತ್ ಸದಸ್ಯರೆಷ್ಟು ಮತ್ತು ಅದರಲ್ಲಿ ಮಹಿಳಾ ಸದಸ್ಯರು ಎಷ್ಟು ಎಂದು ಕೇಳಿದರೆ ಒಬ್ಬೊಬ್ಬರು ಒಂದೊಂದು ರೀತಿಯಲ್ಲಿ ಪ್ರತಿಕ್ರಿಯಿಸುತ್ತಾರೆ.

ಇನ್ನು ಪಂಚಾಯ್ ಸಮಿತಿಗಳ ಬಗ್ಗೆ ಸದಸ್ಯರಿಗೆ ಗೊತ್ತಿಲ್ಲದಿರುವಾಗ ಗ್ರಾಮಸ್ಥರಿಗೆ ಹೇಗೆ ಗೊತ್ತಾಗುತ್ತದೆ? ಏಕೆಂದರೆ ಪಂಚಾಯತ್ ಸಮಿತಿಯೆಂಬುದು ಈ ಊರಲ್ಲಿ ಅಸ್ತಿತ್ವದಲ್ಲಿ ಇಲ್ಲವೇ ಇಲ್ಲ. ವಾರ್ಷಿಕ ಯೋಜನೆ ಮತ್ತು ಆಯವ್ಯಯ ಪಟ್ಟಿಯ ಕುರಿತು ಶೇ. ೯೦ ರಷ್ಟು ನಿವಾಸಿಗಳಿಗೆ ಗೊತ್ತೇ ಇಲ್ಲ. ಹಾಗೆಯೇ ಪಂಚಾಯತ್ ಪೂರೈಸಿದ ಕಾಮಗಾರಿಗಳ ಬಗ್ಗೆ ಕೇಳಿದರೆ ಮೊತ್ತಮೊದಲಾಗಿ ಅವರು ಬಂಡೆಹಾಸುವುದನ್ನೆ ತಿಳಿಸುತ್ತಾರೆ. ಇನ್ನೆಲ್ಲವೂ ಅವರಿಗೆ ಆನುಷಂಗಿಕವಾಗಿದೆ. ಉದಾಹರಣೆಗೆ ಅಂಗನವಾಡಿ ಆಗಬೇಕೆಂಬುದರ ಕುರಿತು ಯಾರೂ ಆಸಕ್ತಿಯಿಂದ ಹೇಳುವುದಿಲ್ಲ. ಸಂಶೋಧನಾ ತಂಡವು ನಿಮ್ಮಲ್ಲಿ ಅಂಗನವಾಡಿ ಸಮಸ್ಯೆ ಇದೆಯಲ್ಲವೆ ಎಂದಾಗ ಹೌದು ನಮಗೂ ಅಂಗನವಾಡಿ ಅವಶ್ಯಕ ಎಂದು ತಿಳಿಸುತ್ತಾರೆ. ಪಂಚಾಯತ್ ಕಾಮಗಾರಿಗಳನ್ನು ಇಂಜಿನಿಯರ್ ಅಥವಾ ಗುತ್ತಿಗೆದಾರರು ಮಾಡಿರುತ್ತಾರೆ ಎನ್ನುವರು. ತಮ್ಮ ವ್ಯಾಪ್ತಿಯಲ್ಲಿ ನಡೆಯುವ ಕಾಮಗಾರಿಗಳನ್ನು ಗುತ್ತಿಗೆದಾರರು ಮಾಡಿಸುವಾಗಲೂ ಸದಸ್ಯರು ಅದರ ಉಸ್ತುವಾರಿ ಸಹ ಮಾಡುವುದಿಲ್ಲವೆನ್ನುತ್ತಾರೆ ನಿವಾಸಿಗಳು. ಇದರಿಂದ ನಮಗೆ ತಿಳಿಯುವ ಮುಖ್ಯ ಅಂಶವೆಂದರೆ ಹೆಚ್ಚಿನ ಕಾಮಗಾರಿಗಳನ್ನು ತಮ್ಮ ಸಮೀಪದ ಗುತ್ತಿಗೆದಾರರು ಅಥವಾ ಇಂಜಿನಿಯರ್ ಮಾಡಿಸುವುದರಿಂದ, ಅದರ ಮೇಲ್ವಿಚಾರಣೆಯನ್ನು ನೋಡುವಷ್ಟು ಆಸಕ್ತಿ ಸಹ ಇಲ್ಲದಿರುವುದರಿಂದ ಈ ಸದಸ್ಯರುಗಳ ಪಾತ್ರದ ಬಗ್ಗೆ ನಾವು ಅಥವಾ ಹಳ್ಳಿಗರಾದರೂ ವಿವೇಚನೆ ಮಾಡಬೇಕಾಗುತ್ತದೆ. ಸಾಮಾನ್ಯವಾಗಿ ದುರ್ಬಲ ವರ್ಗದ ಸದಸ್ಯರು ಅಥವಾ ಮಹಿಳಾ ಸದಸ್ಯರು ವ್ಯವಸ್ಥೆಯೊಳಗೆ ಇದನ್ನು ಎದುರುಸುವಂತಹ ಚಾಕಚಕ್ಯತೆ ಇಲ್ಲದಿದ್ದಲ್ಲಿ ಅಥವಾ ಹಿಂಜರಿಯುವಿಕೆ ಇದ್ದರೆ ದುರ್ಭಲ ವರ್ಗದವರು ತಾವು ಇವರಿಂದ ದೂರ ಇದ್ದೇವೆ ಎನ್ನುವಷ್ಟರ ಮಟ್ಟಿಗೆ ಇರುತ್ತಾರೆ. ಹಾಗೆಯೇ ಪ್ರಬಲ ಸದಸ್ಯರು ಸಹ ತಮ್ಮ ಬೇಳೆ ಅಥವಾ ಆಸಕ್ತಿ ಉಳಿಸಿಕೊಳ್ಳುವುದರಿಂದ ಮತ್ತು ಇದು ಇತರ ಸದಸ್ಯರ ಮುಖಾಂತರವಾಗುವುದರಿಂದ ಅಥವಾ ಅವರ ಹೆಸರಿನಲ್ಲಿ ಯಾ ಅನುಮೋದನೆಯೊಂದಿಗೆ ನಡೆಯುವುದರಿಂದ ಒಟ್ಟಾರೆಯಾಗಿ ಕಾಮಗಾರಿಯನ್ನು ಪರಿಶೀಲಿಸುವುದು ತಮ್ಮ ಕರ್ತವ್ಯವೆಂದೂ ಸಹ ಭಾವಿಸುವುದಿಲ್ಲ. ಇದು ಇಡೀ ಗ್ರಾಮದ ಪಂಚಾಯತಿನ ಅನಾರೋಗ್ಯಕರ ಬೆಳವಣಿಗೆ.

ಹಳ್ಳಿಗರು ಆ ಗ್ರಾಮದಲ್ಲಿ ಆಗಬೇಕಾದ ಯೋಜನೆಗಳ ಬಗ್ಗೆ ಬಹಳಷ್ಟು ವಿವರಿಸುತ್ತಾರಾದರೂ ಶೇ. ೯೫ ರಷ್ಟು ಮಂದಿ ತಮ್ಮ ಹಳ್ಳಿಯಲ್ಲಿ ಶೌಚಾಲಯ ಆಗಬೇಕೆಂದು ತಿಳಿಸುವುದಿಲ್ಲ. ಯಾಕೆಂದರೆ ಶೌಚಾಲಯ ಅವರಿಗೆ ಆದ್ಯತೆಯ ವಿಷಯ ಆಗುವುದಿಲ್ಲ. ಸಂದರ್ಶಿಸಿದ ಹೆಚ್ಚಿನ ಹಳ್ಳಿಗರು ಪಶುವೈದ್ಯಕೀಯ ಆಸ್ಪತ್ರೆ ಅಥವಾ ಇನ್ನಿತರ ಆದ್ಯತೆಗಳನ್ನೇ ವಿವರಿಸುತ್ತಾರೆ. ಹೆಚ್ಚಿನವರು ಇದಕ್ಕೂ ಸರಿಯಾಗಿ ಉತ್ತರಿಸುವುದಿಲ್ಲ. ಇನ್ನೂ ಒತ್ತಾಯಿಸದರೆ ಇದೆಲ್ಲ ನಮಗ್ಯಾಕೆ ಸಾರ್, ನಾವು ಬೇಕೆಂದರೂ ಅವರು ಮಾಡುತ್ತಾರೆಯೆ,

ಒಂದು ವೇಳೆ ಮಾಡುವುದಿದ್ದರೂ ಅವರ ಜೊತೆ ಹೊಂದಾಣಿಕೆ ಇರುವವರಿಗೆ ಮಾತ್ರ ಮಾಡುತ್ತಾರೆ ಎಂದು ಹೇಳುತ್ತಾರೆ. ಇಡೀ ಗ್ರಾಮ ಪಂಚಾಯತ್ ಕ್ಷೇತ್ರದಲ್ಲಿ ಕೇವಲ ೧೭ ಶೌಚಾಲಯಗಳಿವೆ. ನಾಲ್ಕು ಗ್ರಾಮ ಯಾ ಹಳ್ಳಿಗಳಿರುವ ಈ ಗ್ರಾಮ ಪಂಚಾಯತಿಯಲ್ಲಿ ಒಟ್ಟು ೧೭ ಶೌಚಾಲಯಗಳಿವೆಯೆಂದರೆ ಇವರಿಗೆ ಶೌಚಾಲಯದ ಮಹತ್ವ ಮತ್ತು ಆರೋಗ್ಯದ ಕಳಕಳಿ ಎಷ್ಟಿದೆ ಎಂಬುದು ತಿಳಿಯುತ್ತದೆ. ಮುಕ್ತ ಬಯಲು ಪ್ರದೇಶಗಳಲ್ಲಿ ಹಗಲು ಹೊತ್ತಿನಲ್ಲಿ - ಅದರಲ್ಲೂ ಮಹಿಳೆಯರಿಗೆ - ಬಹಿರ್ದೆಸೆಗೆ ಹೋಗಲು ಕಷ್ಟವಾಗುತ್ತದೆ ಎಂಬ ಕಾಳಜಿಯೂ ಇಲ್ಲ. ಹಿರೇಹೆಗ್ಡಾಳ್‌ದ ಪರಿಸ್ಥಿತಿ ಹೀಗದ್ದರೆ, ಕೂಡ್ಲಿಗಿ ತಾಲ್ಲೂಕು ಪಂಚಾಯತ್ ಕಾರ್ಯಾಲಯದಲ್ಲೂ ಒಂದು ವ್ಯವಸ್ಥಿತವಾದ ಶೌಚಾಲಯವಿಲ್ಲ. ಅಂದ ಮೇಲೆ ಹಿರೇಹೆಗ್ಡಾಳ್ ಗ್ರಾಮಪಂಚಾಯತ್‌ನಲ್ಲಿ ಶೌಚಾಲಯಗಳಿಲ್ಲದಿರುವುದು ಏನು ಮಹಾ!

## ೪. ಅಧ್ಯಯನದ ತಥ್ಯಗಳು

ಗ್ರಾಮಪಂಚಾಯತ್ ವ್ಯಾಪ್ತಿಯ ಗ್ರಾಮದ ಜನಜೀವನ ಮತ್ತು ಪಂಚಾಯತ್ ಕಾರ್ಯಕ್ಷಮತೆಯನ್ನು ಅಭ್ಯಸಿಸಿದಾಗ ಈ ಕೆಳಗಿನ ತಥ್ಯಗಳನ್ನು ನಾವು ಗುರುತಿಸಬಹುದು.

ಗ್ರಾಮ ಜೀವನವು ಸಂಘರ್ಷಣಾತ್ಮವಾಗಿರದೆ, ಇರುವ ವ್ಯವಸ್ಥೆ ಹಾಗೂ ವ್ಯವಸ್ಥೆಯ ಉತ್ಪಾದನಾ ಸಂಬಂಧಗಳೊಳಗೆ ನೇರ ಅಲ್ಲದಿದ್ದರೂ ಪರಸ್ಪರ ಹೊಂದಾಣಿಕೆಯ ಲಕ್ಷಣ ವಿರುವುದನ್ನು ಕಾಣಬಹುದು. ಹಳ್ಳಿಯ ಜನಜೀವನವು ಇದಕ್ಕೆ ಚೆನ್ನಾಗಿ ಹೊಂದಿಕೊಂಡಿದೆ. ಪಂಚಾಯತ್ ವ್ಯವಸ್ಥೆಯ ಹಿನ್ನೆಲೆಯಲ್ಲಿ ಮೀಸಲಾತಿಯು ಇನ್ನಷ್ಟು ಸ್ತರೀಕೃತವಾಗಿ ವಿಸ್ತೃತಗೊಂಡರೂ ಮೀಸಲಾತಿಯು ಅದರ ಆಶಯಗಳಿಗೆ ಪೂರಕವಾಗಿ ವಿಸ್ತರಿಸಿಲ್ಲ. ವಿಸ್ತರಿಸಿದರೂ ಹಳ್ಳಿಯಲ್ಲಿ ಪ್ರಚಲಿತವಿರುವ ಉತ್ಪಾದನಾ ಸಂಬಂಧಗಳ ನೆಲೆಯಲ್ಲಿ ಹಾಗೂ ಒದಗಿದ ಅಧಿಕಾರ ಸಮೀಕರಣದಲ್ಲಿ ಗಣನೀಯ ಬದಲಾವಣೆಯನ್ನು ಮಾಡುವಷ್ಟರ ಮಟ್ಟಿಗೆ ಇದು ಶಕ್ತವಾಗಿಲ್ಲ. ಆದ್ದರಿಂದ ಹೊಂದಾಣಿಕೆ ಅಥವಾ ಸಮಜಾಯಿಸುವಿಕೆ ಪ್ರವೃತ್ತಿ ಪರಂಪರಾಗತವಾಗಿ ಸಾಂಸ್ಥಿಕವಾಗಿರುವ ಜೊತೆಗೆ ಇನ್ನೂ ಅದು ಬದಲಾವಣಾ ಮೌಲ್ಯಕ್ಕನುಗುಣವಾಗಿ ಮತ್ತು ಸ್ಥಿತ್ಯಂತರ ಪ್ರಕ್ರಿಯೆಗೆ ಒಳಪಡುವಂತೆ ಕಂಡುಬಂದರೂ ನಿಜವಾಗಿ ಹಾಗಿಲ್ಲ. ಬೇರೆ ಯಾವುದೇ ಈ ವ್ಯವಸ್ಥೆ ಇರುವ ಅಥವಾ ಇದ್ದ ಸಮಜಾಯಿಸುವಿಕೆ ಪ್ರವೃತ್ತಿ ಪರಂಪರಾಗತವಾಗಿ ಸಾಂಸ್ಥಿಕವಾಗಿರುವ ಜೊತೆಗೆ ಇನ್ನೂ ಅದು ಬದಲಾವಣಾ ಮೌಲ್ಯಕ್ಕನುಗುಣವಾಗಿ ಮತ್ತು ಸ್ಥಿತ್ಯಂತರ ಪ್ರಕ್ರಿಯೆಗೆ ಒಳಪಡುವಂತೆ ಕಂಡುಬಂದರೂ ನಿಜವಾಗಿ ಹಾಗಿಲ್ಲ. ಬೇರೆ ಯಾವುದೇ ಈ ವ್ಯವಸ್ಥೆ ಇರುವ ಅಥವಾ ಇದ್ದ ಇಂತಹ ಹಳ್ಳಿಗಳಲ್ಲಿ ತಕ್ಷಣ ಅಧಿಕಾರ ಸಮೀಕರಣದ ಹಿನ್ನೆಲೆಯಲ್ಲಿ ಇದಕ್ಕೆ ಒದಗಿ ಬರುವ ಮೀಸಲಾತಿ ಚೌಕಟ್ಟು ಮತ್ತು ಸ್ತರಗಳ ಸ್ಥಿತ್ಯಂತರದಿಂದ ಹಳ್ಳಿಯ ಪರಿಸ್ಥಿತಿ ಪ್ರಕ್ಷುಬ್ಧವಾಗುವ ರೀತಿಯಲ್ಲಿ ಇರಲೂಬಹುದು. ಅಂದರೆ ಅದು ಒಂದು ರೀತಿ ಆರದ ಬೆಂಕಿಯಂತಿರುತ್ತದೆ. ಹಳ್ಳಿಯ ಸಾಮಾಜಿಕ ಜನಜೀವನವು ಏರುಪೇರಾಗುತ್ತದೆ. ಆದರೆ ಹಿರೇಹೆಗ್ಡಾಳ್‌ನ ಪರಿಸ್ಥಿತಿ ಹಾಗಾಗಿಲ್ಲ.

ಹಳ್ಳಿಯಲ್ಲಿ ಅಥವಾ ಈ ಪಂಚಾಯತ್‌ನಲ್ಲಿ ಲಿಂಗಾಯಿತರನ್ನು ಬಿಟ್ಟರೆ ಪರಿಶಿಷ್ಟ ಜಾತಿಯವರೇ ಹೆಚ್ಚಿನ ಸಂಖ್ಯೆಯಲ್ಲಿದ್ದು, ಅವರ ವಾಸಸ್ಥಾನಗಳು ಸಹ ಎರಡನೇ ಸ್ಥಾನಪಡೆದಿದೆ. ಹಾಗೆಯೇ ಬೊಪ್ಪಲಾಪುರ ಗ್ರಾಮದ ಸಾಣೇಹಳ್ಳಿಯಲ್ಲಿ ಇರುವ ಎಲ್ಲ ಮನೆಗಳು ಪರಿಶಿಷ್ಟ ಜಾತಿಯವರದೆ. ಈ ಜನಾಂಗದ ಹೆಚ್ಚಿನ ಜನರ ಹೆಚ್ಚಾಗಿ ಅತೀ ಸಣ್ಣ ಮತ್ತು ಸಣ್ಣ ಭೂಹಿಡುವಳಿಯನ್ನು ಹೊಂದಿರುತ್ತಾರೆ. ಇವರು ಕೃಷಿಯ ಕೆಲಸ ಇಲ್ಲದ ಸಂದರ್ಭದಲ್ಲಿ ಕಾಫಿ ಸೀಮೆಗೆ ವಲಸೆ ಹೋಗುವುದರಿಂದ ಪರ್ಯಾಯ ಉದ್ಯೋಗದ ಪ್ರಕ್ರಿಯೆಗೆ ಒಳಗಾಗಿರುವುದು ಸಹ ಕಂಡು ಬರುತ್ತದೆ. ಇದರಿಂದ ಅವರಿಗೆ ಅನುಭವ, ಜ್ಞಾನ ಹಾಗೂ ಹಣದ ಭದ್ರತೆ ತಕ್ಕಮಟ್ಟಿಗೆ ಒದಗಿಸದಂತಾಗುತ್ತದೆ. ಹೀಗೆ ವ್ಯಕ್ತಿಗತವಾಗಿ ಸ್ವಾವಲಂಬಿ ಬದುಕು ಒಂದೆಡೆಯಾದರೆ, ಸಮುದಾಯದ ಸಂದರ್ಭದಲ್ಲಿ ಆಧುನಿಕತೆಯ ಅನಿವಾರ್ಯತೆಗೆ ಸ್ಪಂದಿಸುವ ಸಹಜೀವನ ಈ ಹಳ್ಳಿಗರಿಗೆ ಇದೆ ಎನ್ನಬೇಕು. ಅಂತೆಯೇ, ಮೀಸಲಾತಿ ಪ್ರಕ್ರಿಯೆಯು ಬಹುಮಟ್ಟಿಗೆ ಯಾವುದೇ ಸಂಘರ್ಷಕ್ಕೆ ಎಡೆಮಾಡಿಕೊಡದೆ, ಸಾಮರಸ್ಯ ಭಾವವನ್ನು ತಾಳುವಲ್ಲಿ ಯಶಸ್ವಿಯಾಗಿದೆ. ಯಜಮಾನದ ಪಾತ್ರವು ಇದ್ದರೂ ಸಹ ಹೊಂದಾಣಿಕೆಯ ಮನೋಭಾವ ಗ್ರಾಮಸ್ಥರಲ್ಲಿ ವ್ಯಕ್ತವಾಗುವಂತಹದು.

ಈ ಹಿನ್ನೆಲೆಯಲ್ಲಿ ಹಿಂದುಳಿದ ವರ್ಗಗಳು ಸಹ ಮೀಸಲಾತಿಯಿಂದ ಅಧಿಕಾರ ಸಮೀಕರಣ ಪ್ರಕ್ರಿಯೆಯಲ್ಲಿ ಪಾಲುಪಡೆದರೂ ಗ್ರಾಮಜೀವನವು ಹೊಂದಾಣಿಕೆಯಿಂದೊಡಗೂಡಿದೆ. ಇನ್ನಿತರ ಕೆಲವು ಅನಮ್ಯ ಗ್ರಾಮಗಳನ್ನು ವೀಕ್ಷಿಸಿದರೆ ಅಧಿಕಾರ ಸಮೀಕರಣವು ಸಂಘರ್ಷದಿಂದ ಕೂಡಿದ್ದು ಗ್ರಾಮದ ನಾಯಕತ್ವಕ್ಕೆ ಸಂಬಂಧಿಸಿ ಹೊಯ್ಕೈ ನಡೆಯುವುದನ್ನು ಕಾಣಬಹುದು ಮತ್ತು ಇಂದಿನ ಅಧಿಕಾರ ಸಮೀಕರಣ ರಾಜಕೀಯದಲ್ಲಿ ಇದು ದಿನ ಮಾತಾಗಿರುತ್ತದೆ. ಒಳ ರಾಜಕೀಯ ಏನೇ ಇರಲಿ ಹಿರೇಹೆಗ್ಡಾಳ್ ಗ್ರಾಮಜೀವನವು ಶಾಂತಿಯುತವಾಗಿ ಹೊಂದಾಣಿಕೆಯಿಂದೊಡಗೂಡಿದೆ.

ಹಳ್ಳಿಯಲ್ಲಿನ ಸಾಂಪ್ರದಾಯಿಕ ಯಜಮಾನರ ಪಾತ್ರವು ಈಗಿನ ಆಧುನಿಕ ಪ್ರಜಾತಾಂತ್ರಿಕ ವ್ಯವಸ್ಥೆಯಲ್ಲೂ ಮುಂದುವರಿದಿರುವುದು ಈ ಗ್ರಾಮದ ಇನ್ನೊಂದು ವೈಶಿಷ್ಟವಾಗಿದೆ. ಸಾಮಾನ್ಯವಾಗಿ ಇಲ್ಲಿನ ನಾಲ್ಕು ಹಳ್ಳಿಗಳಲ್ಲೂ ಪ್ರತಿ ಜಾತಿ ವರ್ಗಗಳಲ್ಲಿ ಅವರವರ ಜಾತಿ ಹಿರಿಯರು ಅಥವಾ ಯಜಮಾನರಿರುತ್ತಾರೆ. ಇವರ ಮಾತನ್ನು ಅಲಕ್ಷಿಸಿ ಈಗಿನ ಚುನಾವಣಾ ಪ್ರಕ್ರಿಯೆಯಲ್ಲಿ ಸ್ಪರ್ಧಿಸಿದರೂ ಈತನು ಸೋಲುವುದೆಂದರೆ ಯಜಮಾನರ ಯಜಮಾನಿಕೆಯ ಪ್ರಭಾವವನ್ನು ತೋರಿಸುತ್ತದೆ. ಮತ್ತು ಇದೇ ಜನಾದೇಶವಾಗಿ ರೂಪುಗೊಳ್ಳುವುದು ಇಲ್ಲಿನ ವಿಶೇಷತೆ. ಇದಕ್ಕೆ ಪೂರಕವಾಗಿ ಗ್ರಾಮ ಪಂಚಾಯತಿಯು ಪ್ರಬಲ ಪ್ರಭಾವಿಗಳಿಂದ ಹಾಗೂ ಮೀಸಲಾತಿಯನ್ವಯ ಬದಲಿ ಪ್ರತಿನಿಧಿಗಳಿಂದ ಕೂಡಿರುವುದು ಕಂಡುಬರುತ್ತದೆ.

ಸಾಮಾಜಿಕವಾಗಿ ಹಾಗೂ ಸಾಂಸ್ಕೃತಿಕವಾಗಿಯೂ ಗ್ರಾಮಪಂಚಾಯತ್ ಹೊಂದಾಣಿಕೆ ಪ್ರವೃತ್ತಿಯಿಂದ ಕೂಡಿದ್ದು ಜಾತ್ರೆ ಉತ್ಸವಗಳು ಯಾವುದೇ ಆಡೆತಡೆ ಇಲ್ಲದೆ, ಸಮುದಾಯಗಳೊಡನೆ ದ್ವೇಷಗಳಿಲ್ಲದೆ ನಡೆಯುವುದು ಸಹ ಅಷ್ಟೇ ಪ್ರಾಮುಖ್ಯವಾಗಿದೆ. ಊರಿನ ಮುಖ್ಯ ದೇವತೆಯಾದ ಪರಿಶಿಷ್ಟರ ಸಮಾದೆಮ್ಮನ ಜಾತ್ರೆ ಗ್ರಾಮದ ಸಮಸ್ತ ಸಮುದಾಯದಂತೆ ಆಚರಣೆಗೊಳಪಡುತ್ತದೆ. ಇವಳ ಆರ್ಚಕರು ಕೂಡ ಪರಿಶಿಷ್ಟ ಜಾತಿಯವರೆ, ಮೇಲ್ವರ್ಗದವರೂ ಇಲ್ಲಿ ಪ್ರಥಮವಾಗಿ ಪೂಜೆ ಸಲ್ಲಿಸಿ ತೃಪ್ತಿಪಡುತ್ತರಾದರೂ ಇನ್ನುಳಿದಂತೆ ಆಚರಣೆಗಳು ಯಥಾಪ್ರಕಾರ ನಡೆಯುತ್ತವೆ.

ಪಂಚಾಯತ್ ಸದಸ್ಯರಲ್ಲಿ ಮಹಿಳೆಯರ ಪಾತ್ರವು ತೀರಾ ಗೌಣವಾಗಿದೆ. ಅಧ್ಯಕ್ಷರು ಪ್ರಬಲ ವರ್ಗಕ್ಕೆ ಸೇರಿದ ಅಕ್ಷರಸ್ಥ ಮಹಿಳೆಯಾದರೂ ಪರಿಣಾಮಕಾರಿಯಾಗಿ ಪಾತ್ರ ನಿರ್ವಹಿಸಲು ಅವರಿಗೆ ಆಗುತ್ತಿಲ. ಅಂತಹ ನೈಪುಣ್ಯತೆ ಮತ್ತು ಪಂಚಾಯತ್ ಕಾರ್ಯಗಳು ಹಾಗೂ ಅಧಿಕಾರಿಗಳ ಬಗ್ಗೆ ಅರಿವು ಇಲ್ಲದಿರುವುದು ಕೂಡಾ ಇದಕ್ಕೆ ಪೂರಕವಾಗಿದೆ. ಹಿಂದುಳಿದ ಮತ್ತು ಪರಿಶಿಷ್ಟ ಜಾತಿ ವರ್ಗದವರ ಪಾತ್ರವೂ ಇದಕ್ಕಿಂತ ಭಿನ್ನವೇನಲ್ಲ. ಈ ಗ್ರಾಮಪಂಚಾಯತಿಯಲ್ಲಿ ಪಂಚಾಯತ್ ರಾಜ್ ಕಾಯ್ದೆ ಉಲ್ಲಂಘನೆಯ ಬಗ್ಗೆ ಪ್ರಾಸ್ತಾಪಿಸಿದರೆ ಇದಕ್ಕೆ ಹಲವಾರು ಉದಾಹರಣೆಗಳನ್ನು ಕೊಡಬಹುದು. ಅತೀ ಮುಖ್ಯವಾಗಿ ಪಂಚಾಯತ್‌ನಲ್ಲಿ ಸಮಿತಿಗಳ ಅಸ್ತಿತ್ವವಿಲ್ಲದಿರುವುದು ಕಾಯಿದೆಯ ಮಹಾ ಉಲ್ಲಂಘನೆಯಾಗಿದೆ. ಸಾಮಾನ್ಯವಾಗಿ ಪ್ರತೀ ಪಂಚಾಯತ್‌ನ ಗೋಡೆ ಅಥವಾ ಕರಿಹಲಗೆಯಲ್ಲಿ ಸಮಿತಿ ಕುರಿತು ವಿವರಗಳಿರುತ್ತವೆ. ಆದರೆ ಇಲ್ಲಿಲ್ಲ. ಅಧ್ಯಕ್ಷ, ಸದಸ್ಯರು ಮತ್ತು ಗ್ರಾಮಸ್ಥರಿಗೂ ಈ ಕುರಿತು ಜ್ಞಾನವೇ ಇಲ್ಲ. ಕಾರ್ಯದರ್ಶಿಯು ಈ ಕುರಿತು ಮೌನವಾಗಿದ್ದರೆ. ಹಾಗೆಯೇ ಪಂಚಾಯತ್‌ನ ಕಾರ್ಯಕ್ಷಮತೆಯನ್ನು ನೋಡಿದರೆ ಉಲ್ಲಂಘನೆ ಇನ್ನಷ್ಟು ಕಂಡುಬರುತ್ತದೆ. ಗ್ರಾಮಸಭೆಗಳನ್ನು ಸರಿಯಾಗಿ ಕರೆಯದಿರುವುದು, ಎರಡು ಸಭೆಗಳ ಮಧ್ಯೆ ನಿಗದಿತ ಅಂತರವನ್ನು ಸರಿಯಾಗಿ ಪಾಲಿಸದಿರುವುದು, ಕೆಲವೊಮ್ಮೆ ಗ್ರಾಮಸಭೆಯನ್ನು ಪಂಚಾಯತ್ ಕಾರ್ಯಾಲಯದ ಬಾಗಿಲು ಹಾಕಿ ನಡೆಸುವುದು, ಸಭೆ ನಡೆಯುವುದಕ್ಕೆ ಪೂರಕವಾಗಿ ವ್ಯಾಪಕವಾದ ಪ್ರಚಾರ ಮಾಡದಿರುವುದು, ಪಂಚಾಯತ್ ಕಾಮಗಾರಿಯನ್ನು ಕಾಂಟ್ರಾಕ್ಟರ್ ಮೂಲಕ ಮಾಡಿಸುವುದು ಮತ್ತು ಗ್ರಾಮಸಭೆಗೆ ಇರಬೇಕಾದ ಅಧಿಕಾರ ಮತ್ತು ಕಾರ್ಯಗಳನ್ನು ಸರಿಯಾಗಿ ಕಾರ್ಯರೂಪಕ್ಕೆ ತರದಿರುವುದು ಇವೆಲ್ಲಾ ಕಾಯ್ದೆಯ ಸ್ಪಷ್ಟ ಉಲ್ಲಂಘನೆಯಾಗಿದೆ.

ಆದ್ದರಿಂದ ಬಹು ಮುಖ್ಯವಾಗಿ ಪಂಚಾಯತ್ ಸದಸ್ಯರೆಲ್ಲರಿಗೂ ಕರ್ನಾಟಕ ಪಂಚಾಯತ್ ರಾಜ್ ಕಾಯ್ದೆಯ ವಿವರಗಳನ್ನು ತಿಳಿದುಕೊಳ್ಳುವುದು ಅವಶ್ಯಕವಾಗಿದೆ. ಮತ್ತು ಸದಸ್ಯರಾಗಿ ಕಾರ್ಯನಿರ್ವಹಿಸುವ ಮೊದಲು ಕಾಯ್ದೆಯ ಪ್ರಾಥಮಿಕ ಪರಿಜ್ಞಾನವನ್ನು ಅಂತರ್ಗತ ಮಾಡಿಕೊಳ್ಳುವುದು ಇವರ ಪ್ರಮುಖ ಆದ್ಯತೆಯಾಗಬೇಕು. ಹಾಗೆಯೇ ಗ್ರಾಮಸ್ಥರಿಗೆ ಗ್ರಾಮಸಭೆ ಇದರ ಅಧಿಕಾರ ಮತ್ತು ಕಾರ್ಯಗಳನ್ನು ತಿಳಿಹೇಳುವುದು ಅತೀ ಅಗತ್ಯವಾಗಿದೆ. ಕೃಷಿ ಈ ಗ್ರಾಮದ ಪ್ರಮುಖ ಆರ್ಥಿಕ ಚಟುವಟಿಕೆಯಾಗಿದೆ. ಕೃಷಿಯಿಂದ

ಕೈಗಾರಿಕೆಗೆ ಇಲ್ಲವೇ ಸೇವಾರಂಗಕ್ಕೆ ಹೊಂದಿಕೊಳ್ಳುವಂತೆ ಇಲ್ಲಿನ ವ್ಯವಸ್ಥೆ ಪೂರಕವಾಗಿಲ್ಲ. ಆರ್ಥಿಕತೆಯು ಯಾವುದೇ ಸ್ಥಿತ್ಯಂತರಕ್ಕೆ ಒಳಗಾಗದೇ ತಟಸ್ಥವಾಗಿದ್ದು ಹೊಸ ಬದಲಾವಣಾ ಹಂತದ ಸ್ವರೂಪಕ್ಕೆ ಇನ್ನೂ ತೆರೆದು ಕೊಂಡಿಲ್ಲ; ಮತ್ತು ಆ ದಿಕ್ಕಿನತ್ತ ಪಯಣಿಸುವುದನ್ನು ಗ್ರಾಮವು ಊಹಿಸಲು ಪ್ರಸ್ತುತ ಪರಿಸ್ಥಿಯಲ್ಲಿ ಸಾಧ್ಯವಾಗದು.

ಗ್ರಾಮದಲ್ಲಿ ಸಾಗುವಾಳಿದಾರರ ಪ್ರಮಾಣ ಹೆಚ್ಚಾದರೆ ಕೃಷಿ ಕಾರ್ಮಿಕರ ಪ್ರಮಾಣ ಕಡಿಮೆ. ಇವು ಸೇರಿ ಗ್ರಾಮದ ಒಟ್ಟು ದುಡಿಯುವ ವರ್ಗದಲ್ಲಿ ಶೇ.೮೩ ರಷ್ಟು ಮಂದಿ ಕೃಷಿಯನ್ನು ಅವಲಂಬಿಸಿಕೊಂಡಿದ್ದಾರೆ. ಕುರಿ, ಎಮ್ಮೆ, ಎತ್ತು ಸಾಕಾಣಿಕೆ ಮತ್ತು ಕೋಳಿ ಸಾಕಾಣಿಕೆ ಮುಂತಾದ ಕೃಷಿಯಾಧಾರಿತ ಆರ್ಹಿಕ ಚಟುವಟಿಕೆಗಳನ್ನು ಸಾಕಷ್ಟು ಪ್ರಮಾಣದಲ್ಲಿ ಇಲ್ಲಿ ಅಭಿವೃದ್ಧಿಪಡಿಸಲು ಅವಕಾಶವಿದೆ. ಗ್ರಾಮದಲ್ಲಿ ಕೃಷಿಯು ಮುಖ್ಯ ಆರ್ಥಿಕ ಚಟುವಟಿಕೆಯಾದುದರಿಂದ ಆಧುನಿಕ ಕೃಷಿ ಹಾಗೂ ತಾಂತ್ರಿಕತೆಯ ಕುರಿತು ಯೋಜಿಸಬೇಕಾಗಿದೆ. ಗ್ರಾಮಸ್ಥರಾಗಲಿ, ಸದ್ಯರಾಗಲಿ ಕೃಷಿ ಅಭಿವೃದ್ಧಿ ಯೋಜನೆಗಳ ಕುರಿತು ಯೋಚನೆ ಮಾಡುವುದಿಲ್ಲ. ಇಲ್ಲಿ ಬೇರೆ ಆರ್ಥಿಕ ಚಟುವಟಿಕೆ ಅಥವಾ ಪರ್ಯಾಯ ರಚನಾತ್ಮಕವಾದ ಉದ್ಯೋಗದ ಬದಲಾವಣೆಗೆ ಆದ್ಯತೆ ಕಂಡುಬರುವುದಿಲ್ಲ. ಯಾಕೆಂದರೆ ಪ್ರಾಥಮಿಕ ರಂಗದಲ್ಲಿ ಹೆಚ್ಚಿನ ಒತ್ತಡವಿರುವುದರಿಂದ ಕೃಷಿಯ ಆಧುನಿಕರಣ ಆಗಬೇಕಾಗಿದೆ.

ಸಾಮಾನ್ಯವಾಗಿ ಇತರ ಮುಂದುವರಿದ ಗ್ರಾಮಗಳಲ್ಲಿ ಸಣ್ಣ ಭೂ ಹಿಡುವಳಿಗಳು, ಉದ್ಯೋಗವಾಕಾಶದ ಕೊರತೆ, ಕೃಷಿ ವ್ಯವಸ್ಥೆಯಲ್ಲಿನ ಏರುಪೇರು ಮತ್ತು ಹೆಚ್ಚಿನ ಭೂಮಿ ಇಲ್ಲದಿರುವುದರಿಂದ ಹೊರಗಡೆಗೆ ಪರ್ಯಾಯ ಉದ್ಯೋಗವನ್ನರಸುತ್ತಾ ವಲಸೆ ಹೋಗುತ್ತಾರೆ. ಅವರ ವಲಸೆಯ ಚಲನೆ ನಗರಾಭಿಮುಖವಾಗಿದ್ದು ಅದು ಲಾಭದಾಯಕವಾದ ವೃತ್ತಿಯ ಚಲನೆಯಾಗಿದೆ. ಅದಕ್ಕಿರಬೇಕಾದ ಕೌಶಲ್ಯಗಳನ್ನು ಅವರು ಪಡೆದಿರುತ್ತಾರೆ. ಆದರೆ ಈ ಅಂಶಗಳು ಹಿರೇಹೆಗ್ಡಾಳ್ ಪೂರಕವಾಗಿಲ್ಲ. ಮುಂದುವರಿದ ಗ್ರಾಮದ ಸಮಸ್ಯೆಗೂ ಈ ಗ್ರಾಮಕ್ಕೂ ತುಂಬಾ ವ್ಯತ್ಯಾಸವಿದೆ. ಇಲ್ಲಿನ ಗ್ರಾಮಸ್ಥರು ಮೇಲಿನ ಸಂದರ್ಭಗಳಲ್ಲಿ ಕಾಫಿಸೀಮೆಗೆ ಮಾತ್ರ ಕೆಲಕ್ಕೆ ಹೋಗುತ್ತಾರೆ. ಅದು ತಾತ್ಕಾಲಿಕ ವಲಸೆ. ನೀರಾವರಿ ಚೆನ್ನಾಗಿದ್ದ ಪಕ್ಷದಲ್ಲಿ ಊರಲ್ಲಿ ಕೃಷಿ ಮಾಡಿದರೆ ಇನ್ನುಳಿದಂತೆ ಕೆಲವರು ಮಾತ್ರ ಭೂರಹಿತರು ಖಾಯಂ ಆಗಿ ಕಾಫಿ ಸೀಮೆಯಲ್ಲಿ ದುಡಿಯುವ ಸಂಭವ ಇರಬಹುದು. ಇವರಿಗೆ ಅವಶ್ಯವಿರುವ ತಾಂತ್ರಿಕ ಕೌಶಲ್ಯಗಳು ದೊರೆತಲ್ಲಿ ನಗರಾಭಿಮುಖ ವಲಸೆಯ ವೃತ್ತಿ ಚಲನೆಯನ್ನು ಒದಗಿಸಬಹುದು. ಇವು ಹಳ್ಳಿಗೂ ಮತ್ತು ಅವರಿಗೂ ಉತ್ತಮ ಆದಾಯವನ್ನು ತರಬಲ್ಲದು.

ಗ್ರಾಮದಲ್ಲಿ ಕೆಲವರು ಉತ್ತಮ ಉದ್ಯೋಗಗಳಲ್ಲಿ ಇದ್ದಾರೆ. ಇವರಲ್ಲಿ ಹೆಚ್ಚಿನವರು ಪ್ರಬಲವರ್ಗಕ್ಕೆ ಸೇರಿದ್ದಾರೆ. ಹಿಂದುಳಿದ ಹಾಗೂ ಪರಿಶಿಷ್ಟರು ಮೀಸಲಾತಿಯಿಂದ ಅವಕಾಶಗಳನ್ನು ಉಪಯೋಗಿಸಿಕೊಂಡು ಒಂದು ಹಂತಕ್ಕೆ ಬರಬಹುದು. ಈ ರೀತಿ ವರ್ಗಗಳ ವ್ಯವಸ್ಥೆಯೊಳಗೆ ಮೀಸಲಾತಿ ಪ್ರಕ್ರಿಯೆಯಿಂದ ಮುಂದೆ ಬರುವುದಕ್ಕೆ ಜಾತಿಯ ಅಡ್ಡಗೋಡೆಗಳು ಏನೂ ತಡೆಯನ್ನುಂಟುಮಾಡಲಾರವು.

ಸಾಕ್ಷರತೆ ಇನ್ನೂ ಮುಂದುವರಿದು ಪರಿಶಿಷ್ಟ ಜಾತಿ, ವರ್ಗ ಹಾಗೂ ಹಿಂದುಳಿದ ವರ್ಗಗಳನ್ನು ಹೆಚ್ಚು ಹೆಚ್ಚಾಗಿ ಅಕ್ಷರ್ಥರನ್ನಾಗಿ ಮಾಡಬೇಕಾಗಿದೆ. ಹಿರೇಹೆಗ್ಡಾಳ್‌ನ ಸಾಕ್ಷರತೆಯ ಮಟ್ಟ ತೃಪ್ತಿದಾಯಕವಾದುದೇನಲ್ಲ. ಅರಣ್ಯ ಭೂಮಿಗಳ ಒತ್ತುವರಿ ನಿಲ್ಲಬೇಕು. ಸಾಮಾನ್ಯವಾಗಿ ಸಣ್ಣ ಭೂ ಹಿಡುವಳಿ ಇರುವುದರಿಂದ ಕೃಷಿ ಭೂಮಿಯ ಮೇಲೆ ಒತ್ತಡ ಬೀಳುತ್ತದೆ. ಇದಕ್ಕೆ ಅರಣ್ಯ ಭೂಮಿಗಳು ಸುಲಭವಾಗಿ ತುತ್ತಾಗುತ್ತಿವೆ. ಇದನ್ನು ತಪ್ಪಿಸಿ ಅರಣ್ಯ ಬೆಳೆಸಲು ಯೋಜನೆಯನ್ನು ಕೈಗೊಳ್ಳಬೇಕು. ಜೆ. ಆರ್. ವೈ. ಕಾಮಗಾರಿಯಡಿ ಶೇ. ೨೫ರಷ್ಟು ಹಣವನ್ನು ಸಾಮಾಜಿಕ ಅರಣ್ಯ ಯೋಜನೆಗೆ ಮೀಸಲಿಟ್ಟು ಖರ್ಚು ಮಾಡಬೇಕೆಂದಿದ್ದರೂ ಈ ಗ್ರಾಮಪಂಚಾಯತಿಯಲ್ಲಿ ಈ ಮೊತ್ತವನ್ನು ಅರಣ್ಯ ಯೋಜನೆಗೆ ವಿನಿಯೋಗಿಸದೆ ಇನ್ನಿತರ ಕಾಮಗಾರಿಗಳಿಗೆ ವಿನಿಯೋಗಿಸಲಾಗಿದೆ ಎಂದು ಈಗಗಾಲೇ ಹೇಳಿದೆ. ಜೆ. ಆರ್. ವೈ. ಯಡಿ ಅನುದಾನದ ಹೆಚ್ಚಿನ ಮೊತ್ತವನ್ನು ಬಂಡೆಹಾಸುವುದಕ್ಕಾಗಿ ವಿನಿಯೋಗಿಸಲಾಗಿದೆ. ಈ ಹಣವನ್ನು ಬದಲಿ ಅಭಿವೃದ್ಧಿ ಯೋಜನೆಗೆ ವಿನಿಯೋಗಿಸಿದರೆ ಆದ್ಯತಾನುಸಾರದ ಅಭಿವೃದ್ಧಿ ಕಾರ್ಯಗಳು ಇನ್ನಷ್ಟು ತ್ವರಿತಗತಿಯಲ್ಲಿ ನಡೆಯುವುದು ಎಂದು ಆಶಿಸಲಾಗಿದೆ. ಸಾಧ್ಯವಾದಲ್ಲಿ ಬಂಡೆಹಾಸುವುದರ ಬದಲಿಗೆ ಅಥವಾ ಯಥಾಸ್ಥಿಯಲ್ಲಿ ಒಂದು ಶಾಶ್ವತ ರೀತಿಯಲ್ಲಿರುವ ಯಾವುದಾರು ಕಡಿಮೆ ವೆಚ್ಚದ ಕಾಮಗಾರಿ ಬಗ್ಗೆಯೂ ಯೋಚಿಸಬಹುದಾಗಿದೆ.

ತೆರಿಗೆ ಸಂಗ್ರಹಕ್ಕೆ ಸಂಬಂಧಿಸಿದಂತೆ ಹಿರೇಹೆಗ್ಡಾಳ್ ಗ್ರಾಮಪಂಚಾಯತ್ ತುಂಬಾ ಮುಂದಾಲೋಚನೆಯಿಂದ ಇರಬೇಕಾಗುತ್ತದೆ. ಪ್ರತೀ ವರ್ಷವೂ ಬಹಳಷ್ಟು ತೆರಿಗೆ ಸಂಗ್ರಹ ಬಾಕಿ ಇರುವುದು ಕಂಡುಬರುತ್ತದೆ. ಪ್ರತೀ ವರ್ಷವೂ ಹತ್ತು ಸಾವಿರ ರೂಪಾಯಿಗೂ ಮಿಕ್ಕಿ ತೆರಿಗೆ ಸಂಗ್ರಹ ಬಾಕಿ ಉಳಿದಿರುತ್ತದೆ. ೯೮-೯೯ ನೇ ಸಾಲಿನಲ್ಲಿ ಅದು ಗರಿಷ್ಟ ಅಂದರೆ ೧೧,೨೩೬ ರೂಪಾಯಿಗಳಷ್ಟು ಬಾಕಿ ಇತ್ತು. ಬಾಕಿ ಉಳಿದ ತೆರಿಗೆ ಸಂಗ್ರಹ ಪ್ರಕ್ರಿಯೆಯಲ್ಲಿ ಮುಖ್ಯವಾಗಿ ಗ್ರಾಮಸ್ಥರು, ಪ್ರತಿನಿಧಿಗಳು ಮತ್ತು ಅಧಿಕಾರಿಗಳು ಮುತುವರ್ಜಿ ವಹಿಸಬೇಕು. ಗ್ರಾಮಪಂಚಾಯತ್ ಸದಸ್ಯ ಅಥವಾ ಸದಸ್ಯೆಯರು ತೆರಿಗೆ ಬಾಕಿಯಿದ್ದಲ್ಲಿ, ಕರ್ನಾಟಕ ಪಂಚಾಯತ್ ರಾಜ್ ಅಧಿನಿಉಅಮದ ೧೯೯೩ ರ ೧೨ (ಜಿ) ಪ್ರಕಾರ ಅಂತಹ ಸದಸ್ಯರ ಸದಸ್ಯತ್ವವನ್ನು ಅನರ್ಹಗೊಳಿಸಬೇಕಾಗುತ್ತದೆ. ಗ್ರಾಮಪಂಚಾಯತ್ ಸದಸ್ಯರು ಕಾಯ್ದಿದೆಯ ಇನ್ಯಾವುದೆ ನಿಯಾಮವಳಿಗಳು ಗೊತ್ತಿಲ್ಲದಿದ್ದರೂ ಈ ನಿಯಾಮವಳಿಯನ್ನು ಅವರು ಚೆನ್ನಾಗಿ ತಿಳಿದುಕೊಂಡಿರುವ ಹಾಗಿದೆ. ಯಾಕೆಂದರೆ ಇಂತಹ ಸಂದರ್ಭದಲ್ಲಿ ಪಂಚಾಯತ್‌ನ ಸರ್ವ ಸದಸ್ಯರು ಒಟ್ಟಾಗುತ್ತಾರೆ. ಇದರರ್ಥ ಪ್ರಾಮಾಣಿಕವಾಗಿ ತೆರಿಗೆ ಕಟ್ಟುವುದೇ ಅಥವಾ ತಮ್ಮ ಸದಸ್ಯತ್ವವನ್ನು ಮಾತ್ರ ಭದ್ರಪಡಿಸುವುದೇ ಎಂಬ ಸಂಶಯವು ಕಾಡುತ್ತದೆ. ಪ್ರಾಮಾಣಿಕವಾಗಿ ತೆರಿಗೆ ಕಟ್ಟುವುದೇ ಆದರೆ, ಆ ಸದಸ್ಯರು ತನ್ನ ಗ್ರಾಮ ವ್ಯಾಪ್ತಿಯ ಗ್ರಾಮಸ್ಥರಲ್ಲಿ ಸರಿಯಾಗಿ ತೆರಿಗೆ ನೀಡುವಂತೆ ಮನವೊಲಿಸಲು ಯಾಕೆ ಸಾಧ್ಯವಾಗುವುದಿಲ್ಲ? ಹಿರೇಹೆಗ್ಡಾಳ್‌ನಲ್ಲಿ ಸಾಮಾನ್ಯವಾಗಿ ವರ್ಷಕ್ಕೆ ತೆರಿಗೆ ಅಂದರೆ ಹುಲ್ಲು ಗುಡಿಸಲು ಮನೆಗೆ ೩೦ ರೂಪಾಯಿ, ಇತರ ಮಳಿಗೆ ಮನೆಗಳಿಗೆ ೪೦ ರೂಪಾಯಿ ಆಗಿರುತದೆ. ಇವತ್ತಿನ ಪರಿಸ್ಥಿಯಲ್ಲಿ ವರ್ಷಕ್ಕೆ ೩೦ ಅಥವಾ ೪೦ ರೂಪಾಯಿ ನೀಡಲಾಗದ ಗ್ರಾಮ ನಿವಾಸಿ ಇರುತ್ತಾನೆಂದರೆ ನಂಬುವುದೇ ಕಷ್ಟ. ಆದ್ದರಿಂದ ಗ್ರಾಮಸ್ಥರಿಗೆ ಸರಿಯಾಗಿ ತೆರಿಗೆ ನೀಡುವಂತೆ ಮನವೊಲಿಸುವುದು ಪ್ರತಿನಿಧಿಗಳ ಆದ್ಯಕರ್ತವ್ಯ. ಅಧಿಕಾರಿಗಳು ಸಹ ಅಷ್ಟೇ ಕ್ರಿಯಾಶೀಲರಾಗಿರಬೇಕು. ಇದರಲ್ಲಿ ಕರ ಸಂಗ್ರಹಕಾರನ ಪ್ರಮುಖ ಪ್ರಾತ್ರವಿದೆ. ಹಿರೇಹೆಗ್ಡಾಳ್ ಗ್ರಾಮಪಂಚಾಯತ್ ಈ ದಿಶೆಯಲ್ಲಿ ಕಾರ್ಯಪ್ರವೃತ್ತವಾಗಬೇಕಿದೆ.

ಹಿರೇಹೆಗ್ಡಾಳ್ ಗ್ರಾಮಪಂಚಾಯತ್ ವ್ಯವಸ್ಥೆಯಿಂದ ಹಲವಾರು ಕಾರ್ಯಕ್ರಮಗಳು ಅಥವಾ ಅಭಿವೃದ್ಧಿ ಯೋಜನೆಗಳು ನಡೆದರೂ ಇದರಿಂದ ಹೇಳಿಕೊಳ್ಳುವಂತಹ ಪ್ರಗತಿ ಏನು ಕಂಡುಬಂದಿಲ್ಲ.

ಇನ್ನೊಂದು ಆತಂಕಕಾರಿ ವಿಷಯವೆಂದರೆ ಶೌಚಾಲಯದ್ದು. ಹಿರೇಹೆಗ್ಡಾಳ್ ಗ್ರಾಮಪಂಚಾಯತ್ ವ್ಯಾಪ್ತಿಯ ೪ ಹಳ್ಳಿಗಳಲ್ಲಿ ೮೦೪ ಮನೆಗಳಿದ್ದರೆ ೯೭-೯೮ ನೇ ಸಾಲಿಗೆ ಅನ್ವಯವಾಗುವಂತೆ ಶೌಚಾಲಯವನ್ನು ಹೊಂದಿರುವ ಕುಟುಂಬಗಳ ಸಂಖ್ಯೆ ಕೇವಲ ೧೬ ಇನ್ನುಳಿದಂತೆ ಬಹಿರ್ದೆಸೆಗೆ ವಿಶಾಲ ಬಯಲು ಉಪಯೋಗಿಸಲಾಗುತ್ತದೆ. ಆದರೆ ಇಲ್ಲಿ ಮನೆಗಳು ಹತ್ತಿರ ಹತ್ತಿರ ಇರುವುದರಿಂದ ಬಯಲು ತುಂಬಾ ದೂರದಲ್ಲಿದೆ. ಇದರಿಂದ ಮುಖ್ಯವಾಗಿ ಹೆಣ್ಣು ಮಕ್ಕಳಿಗೆ ಕಷ್ಟವಾಗುವ ಸಾಧ್ಯತೆಯಿರುವುದರಿಂದ ಶೌಚಾಲಯ ಕಟ್ಟಡಗಳನ್ನಾದರೂ ಕಟ್ಟುವಂತೆ ಗ್ರಾಮಸ್ಥರು ಹಾಗು ಗ್ರಾಮಪಂಚಾಯತ್ ಕಾರ್ಯೋನ್ಮುಖವಾಗಬೇಕಾಗಿದೆ. ಆದರೆ ಇದಾವುದು ಪಂಚಾಯತ್ ಯಾ ಗ್ರಾಮಸ್ಥರ ಆದ್ಯತೆ ಆಗದಿರುವುದು ಅಷ್ಟೇ ಸ್ಪಷ್ಟವಾಗಿದೆ.

ಹಿರೇಹೆಗ್ಡಾಳ್ ಗ್ರಾಮಪಂಚಾಯತಿಯಲ್ಲಿ ಶಾಲಾ ಮಕ್ಕಳ ದಾಖಲಾತಿ ಮತ್ತು ಹಾಜರಾತಿಯು ತೃಪ್ತಿಕರವಾಗಿಲ್ಲ (ಕೋಷ್ಟಕ ೯.) ಆದರಲ್ಲೂ ಪರಿಶಿಷ್ಟ ಜಾತಿ ಮತ್ತು ವರ್ಗದ ವಿದ್ಯಾರ್ಥಿಗಳ ಹೈಸ್ಕೂಲು ಶಿಕ್ಷಣ ಏನೇನೂ ಸಾಲದು. ೮ ನೇ ತರಗತಿಯಿಂದ ೧೦ ನೇ ತರಗತಿವರೆಗಿನ ವಿದ್ಯಾರ್ಥಿಗಳಲ್ಲಿ ಈ ಸಮುದಾಯದಿಂದ ಕೇವಲ ೫ ಗಂಡು ಮತ್ತು ೩ ಹೆಣ್ಣು ಮಕ್ಕಳು ಮಾತ್ರ ಇದ್ದಾರೆ. ಇದರಿಂದ ತಿಳಿದುಬಂದ ಅಂಶವೇನೆಂದರೆ ಸರಕಾರದಿಂದ ಸವಲತ್ತುಗಳು ದೊರೆಯುತ್ತಿದ್ದರೂ ಪರಿಶಿಷ್ಟ ಜಾತಿ ಮತ್ತು ವರ್ಗದ ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಶಿಕ್ಷಣ ಪಡೆಯದೆ ಈ ಅವಕಾಶವನ್ನು ಕಳೆದುಕೊಳ್ಳುತ್ತಿದ್ದಾರೆ. ಆದ್ದರಿಂದ ಈ ಸಮುದಾಯದ ಹಿರಿಯರು ಹಾಗೂ ಪೋಷಕರು ವಿದ್ಯಾರ್ಥಿಗಳನ್ನು ಶಾಲೆಗೆ ಕಳುಹಿಸಲು ಪ್ರಯತ್ನ ಮಾಡಬೇಕು. ನಾಲ್ಕನೇ ತರಗತಿವರೆಗಿನ ಹೆಚ್ಚಿನ ವಿದ್ಯಾರ್ಥಿಗಳು ತಿಂಗಳ ಪ್ರಥಮ ವಾರದಲ್ಲಿ ಮಾತ್ರ ಶಾಲೆಗೆ ಸರಿಯಾಗಿ ಹಾಜರಾಗುತ್ತಾರೆ. ಇದರಿಂದ ಆ ವಿದ್ಯಾರ್ಥಿಗಳಿಗೆ ಅವರ ಹಾಜರಾತಿಗನುಗುಣವಾಗಿ ಸೊಸೈಟಿಯಲ್ಲಿ ಉಚಿತ ಅಕ್ಕಿ ದೊರೆಯುತ್ತದೆ. ಅದು ದೊರೆತ ಬಳಿಕ ಹೆಚ್ಚಿನ ವಿದ್ಯಾರ್ಥಿಗಳು ಶಾಲೆಗೆ ಬರುವುದಿಲ್ಲ ಎಂದು ಅಧ್ಯಾಪಕರು ಹೇಳುತ್ತಾರೆ. ಬಹುಶಃ ಇದರಲ್ಲಿ ವಿದ್ಯಾರ್ಥಿಗಳ ಹೆತ್ತವರ ಬೇಜವಾಬ್ದಾರಿ ಇರಬಹುದು. ಪಾಲಕರು ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸಬೇಕು.

ಅರೋಗ್ಯ ಕುರಿತಂತೆ ಈ ಗ್ರಾಮಪಂಚಾಯತಿಯು ಇನ್ನೂ ಕ್ರಿಯಾಶೀಲವಾಗಬೇಕಾಗಿದೆ. ಹಳ್ಳಿಯಲ್ಲಿ ಒಬ್ಬ ಪ್ರಾಥಮಿಕ ಅರೋಗ್ಯ ಕೆಂದ್ರದ ವೈದ್ಯರಿದ್ದಾರೆ. ಆದರೆ ಹಳ್ಳಿಗರಿಗೆ ನಿರೀಕ್ಷಿತ ವೈದ್ಯಕೀಯ ಸೌಲಭ್ಯಗಳು ಕ್ಲಪ್ತವಾಗಿ ದೊರೆಯುವುದಿಲ್ಲ. ಕೆಲವೊಮ್ಮೆ ದೊಡ್ಡ ಖಾಯಿಲೆಗಳು ಬಂದಾಗ ಸರಿಯಾದ ಔಷಧೋಪಚಾರವಿಲ್ಲದಿದ್ದರಿಂದ ದೂರದ ಊರಿಗೆ ಹೋಗಬೇಕಾಗುವ ಪರಿಸ್ಥಿತಿ ಇಲ್ಲಿದೆ. ಹೆಣ್ಣು ಮಕ್ಕಳ ಮದುವೆ ವಯಸ್ಸು ಸಾಮಾನ್ಯವಾಗಿ ೧೮ ವರ್ಷವೆಂದಿದ್ದರೂ ೧೫ ವರ್ಷ ಮೇಲ್ಪಟ್ಟು ಮದುವೆ ಮಾಡಿಸುವುದು ಅಲ್ಲಲ್ಲಿ ರೂಢಿಯಲ್ಲಿದೆ. ಇದು ಪಕ್ಕದ ಸಾಣೇಹಳ್ಳಿಯಲ್ಲಿ ಬಹಳ ರೂಢಿಯಲ್ಲಿದೆ. ಇದನ್ನು ತಡೆಯಬೇಕು. ಗ್ರಾಮಪಂಚಾಯತ್ ವ್ಯಾಪ್ತಿಯ ಜನಜೀವನವನ್ನು ನೋಡಿದಾಗ ಹಿರೇಹೆಗ್ಡಾಳ್ ಮತ್ತು ಸಾಸಲವಾಡದಲ್ಲಿ ಪರಿಶಿಷ್ಟರ ಬದುಕು ದುಸ್ತರವಾಗಿದೆ. ಹಾಗೆ ಕೆಲವು ತೀರಾ ಹಿಂದುಳಿದ ವರ್ಗಗಳ ಕುಟುಂಬಗಳು ಸಹ. ಇದಕ್ಕೆ ಕಾರಣಗಳನ್ನು ಹುಡುಕುತ್ತ ಹೋದರೆ ಬರೀ ಬಡತನ ಎಂದರೆ ತಪ್ಪಾದೀತು. ಪರಿಶಿಷ್ಟರು ಸಾಮಾನ್ಯವಾಗಿ ಉಪಜಾತಿಗಳೊಳಗೆ ಬಡಿದಾಡುವುದು ಅಥವಾ ಅಂತರವನ್ನು ನಿರ್ಮಿಸಿರುವುದು ಇತ್ತೀಚಿನ ಹಳ್ಳಿ ಹಾಗೂ ಪಟ್ಟಣದ ಸಾಮಾಜಿಕ ರಾಜಕೀಯ ಜೀವನದ ಪರಿ ಎಂದೆನಿಸಿದರೂ, ಅಲ್ಲಿ ಆಜಾತಿಯ ಕೆಲವೊಂದು ಗಣ್ಯರುಗಳು ಅದನ್ನು ತಮ್ಮ ಲಾಭಗೋಸ್ಕರ ದುರುಪಯೋಗ ಪಡಿಸಿಕೊಳ್ಳುತ್ತವೆ. ವಿಚಾರಧಾರೆಯ ಹಿಂದೆ ರಾಜಕೀಯ ಲೆಕ್ಕಚಾರವೆ ಅತಿಯಾಗಿದೆ. ಆದರೆ ಹಿರೇಹೆಗ್ಡಾಳ್‌ನಲ್ಲಿ ಈ ರೀತಿಯ ದೊಡ್ಡ ಲೆಕ್ಕಚಾರಗಳು ಇಲ್ಲದಿದ್ದರೂ ಉಪಜಾತಿಗಳ ಮಧ್ಯೆ ಅಂತರವನ್ನು ಕಾಣಬಹುದು. ಹಿರೇಹೆಗ್ಡಾಳ್‌ನಲ್ಲಿ ಸುಮಾರು ೧೫ ಆದಿದ್ರಾವಿಡ ಕುಟುಂಬಗಳಿದ್ದರೆ ೧೦೦ ರಷ್ಟು ಆದಿ ಕರ್ನಾಟಕ ಕುಟುಂಬಗಳಿವೆ. ಇವರೊಳಗೆ ಯಾವಾಗಲೂ ಭಿನ್ನಭಿಪ್ರಾಯ ಇದ್ದೇ ಇದೆ. ಆದಿ ದ್ರಾವಿಡ ಜಾತಿಯ ಒಬ್ಬ ಪಂಚಾಯತ್ ಜವಾನ ಗ್ರಾಮಸಭೆಯ ಬಗ್ಗೆ ಟಾಂ ಟಾಂ ಹೊಡೆಸಿದರೂ ಆದಿ ಕರ್ನಾಟಕ ಕುಟುಂಬಗಳು ಟಾಂ ಟಾಂ ಹೊಡೆಸಿಲ್ಲ ಎನ್ನುತ್ತಾರೆ. ಇದರ ಕುರಿತು ಜವಾನನಲ್ಲಿ ವಿಚಾರಿಸಿದರೆ ತಾನು ಬೀದಿಯಲ್ಲಿ ಟಾಂ ಟಾಂ ಹೊಡೆಸಿದರೆ ಸಾಲದು ಅವರ ಮನೆ ಮುಡೆಯೂ ಹೊಡೆಸಬೇಕೆನ್ನುತ್ತಾರೆ ಎನ್ನುವನು. ಈ ವಿವಾದ ಇನ್ನ್ಯಾವ ರೀತಿಯಲ್ಲೋ ಮುಂದುವರಿಯುತ್ತದೆ. ಸಾಣೇಹಳ್ಳಿಯಲ್ಲಿರುವ ಎಲ್ಲಾ ೫೮ ಕುಟುಂಬಗಳು ಬರೀ ಬೋವಿಗಳದ್ದೆ. ಆದರೆ ಇಲ್ಲಿ ಯಾರೊಬ್ಬರೂ ೧೦ ನೇ ತರಗತಿಗಿಂತ ಹೆಚ್ಚಿನ ಶಿಕ್ಷಣ ಪಡೆದಿಲ್ಲ. ಹಳ್ಳಿಯು ತೀರಾ ನಿರ್ಲಕ್ಷ್ಯ ವಾದ ಸ್ಥಿತಿಯಲಿಲ್ಲ. ಆದರೆ ನಿವಾಸಿಗಳು ಅವಕಾಶಗಳ ಸದುಪಯೋಗಪಡಿಸಿಕೊಂಡಿಲ್ಲ ಎನ್ನಬಹುದು.

ಸಾಮಾನ್ಯವಾಗಿ ಈ ಪ್ರದೇಶಗಳ ಹಳ್ಳಿ ಜೀವನ ಹಾಗೂ ಪರಿಶಿಷ್ಟರ ಬದುಕು ನೋಡಿದಾಗಬಡತನ, ದುಡಿಮೆ ಇಲ್ಲದಿರುವ ಪರಿಸ್ಥಿತಿ, ತೀರಾ ಕಡಿಮೆ ಸಂಬಳ ಹಾಗೂ ಅತಿಯಾದ ಸಾಂಪ್ರದಾಯಿಕ ಹಾಗೂ ಸಾಂಸ್ಕೃತಿಕ ಆಚರಣೆಗಳು ಇವರ ಬದುಕನ್ನು ಇನ್ನಷ್ಟು ನಿಕೃಷ್ಟಗೊಳಿಸಿವೆಯೇನೊ ಅನ್ನಿಸುತ್ತದೆ. ಆದರೆ ಹಿರೇಹೆಗ್ಡಾಳ್‌ನ ಪರಿಸ್ಥಿತಿ ಹೇಳುವಷ್ಟು ಗಂಭೀರದ್ದಲ. ಸಾಮಾನ್ಯವಾಗಿ ಹೆಚ್ಚಿನ ಹಳ್ಳಿಗಳಲ್ಲಿ ಬಡತನ ಸ್ಥಿತಿಯಿದ್ದರೂ ಅದನ್ನು ಮೀರಿಸಬಹುದಾದ ಅಥವಾ ಅದರಿಂದ ಮುಕ್ತವಾಗುವ ದಿಕ್ಕಿನತ್ತ ಮಾರ್ಗೋಪಾಯಗಳಿವೆ. ಇಲ್ಲಿನ ಹಳ್ಳಿಯಲ್ಲಿ ದುಡಿಮೆ ಇಲ್ಲವೆಂದರೆ ಪಕ್ಕದೂರಿಗೆ ಅಥವಾ ಕಾಫಿಸೀಮೆಗೆ ವಲಸೆ ಹೋಗುತ್ತರೆ. ಜೊತೆಗೆ ಕುಡಿತಕ್ಕು ದುಡ್ಡು ವ್ಯಯಿಸುತ್ತಾರೆ. ಇಲ್ಲಿನ ಸಾಂಸ್ಕೃತಿಕ ಆಚರಣೆಗಳು ಬಿಗಿಯಾದ ಸಂಕೋಲೆಗಳಿಂದ ಆವರಿಸಿಲ್ಲ, ಹೇಳುವಷ್ಟರ ಮಟ್ಟಿಗಿನ ಸ್ವಾತಂತ್ರ್ಯವಿದೆ. ಅನಮ್ಯವಾದ ಸಾಮಾಜಿಕ ಬಂಧನಗಳಿಲ್ಲ, ಹೋಟೆಲುಗಳಿಗೂ ಪ್ರವೇಶವಿದೆ. ಆದರೂ ಇವರ ಬದುಕು ದುಸ್ತರವಾಗಿದೆ. ಇದನ್ನು ತಪ್ಪಿಸಲು ಈ ಸಮುದಾಯವು ಪೂರಕವಾಗಿ ಮೀಸಲಾತಿಯ ಅವಕಾಶವನ್ನು ದಕ್ಕಿಸಿಕೊಳ್ಳಬೇಕು. ಅಕ್ಷರಸ್ಥರಾಗಿ ಬದುಕಿನ ಮಾರ್ಗೋಪಾಯಗಳನ್ನು ಕೇಳಿ ಪಡೆದು ರೂಪಿಸಿಕೊಳ್ಳಬೇಕು. ಸಾಂಸ್ಕೃತಿಕ ಆಚರಣೆಯು ಇವರಿಗೆ ವಿಶಿಷ್ಟವಾದ ಅನನ್ಯತೆಯನ್ನು ನೀಡುವುದಿದ್ದರೆ ಅದರ ಮುಂದುವರಿಕೆ ಏನೂ ತಪ್ಪಲ್ಲ. ಆದರೆ ಇದರ ಹೆಸರಿನಲಿ ಶೋಷಣೆ ಸಲ್ಲದು. ಯಾರ ಬಂಧನವೂ ಇಲ್ಲವೇ ತಾವೇ ಪ್ರತ್ಯೇಕವಾಗಿ ಒಂದು ಹಳ್ಳೀಯಲ್ಲಿದ್ದು ಅವಕಾಶಗಳನ್ನು ಕೇಳಿ ಪಡೆಯುವಷ್ಟು ಸಾಮರ್ಥ್ಯ ಸಾಣೇಹಳ್ಳಿಯ ನಿವಾಸಿಗಳಿಗೆ ಇನ್ನೂ ಒದಗಿಬಂದಿಲ್ಲ ಎಂದರೆ ಇದಕ್ಕೇ ಬರೀ ಸರಕಾರ ಕಾರಣವೇ ಅಥವಾ ಅಲ್ಲಿನ ನಿವಾಸಿಗಳೇ ಅಥವಾ ಪಕ್ಕದ ಹಳ್ಳಿಯ ಉತ್ಪಾದನಾ ಸಂಬಂಧಗಳ ವ್ಯವಸ್ಥೆಯೇ? ಇವುಗಳಲ್ಲಿ ಯಾವುದು ಮುಖ್ಯ ಎಂದು ಸಾಣೇಹಳ್ಳಿಯ ಜನರು ವಿವೇಚಿಸಬೇಕಾದ ಆಗತ್ಯವಿದೆ.

# ೫. ಉಪಸಂಹಾರ

ಗ್ರಾಮಪಂಚಾಯತ್‌ನ ಗತಿಶೀಲತೆಯ ವಿವರಣಾತ್ಮಕ ಅಧ್ಯಯನದೊಂದಿಗೆ ಕೆಲವಾರು ತಥ್ಯಗಳನ್ನು ಈಗಾಗಲೇ ಗುರುತಿಸಲಾಗಿದೆ. ಇವುಗಳ ಅಧಾರದ ಮೇಲೆ ಈ ಪಂಚಾಯತ್ ವ್ಯವಸ್ಥೆಯ ಪುನಶ್ಚೇತನ ಅಥವಾ ಪಂಚಾಯತ್ ಚೌಕಟ್ಟಿನೊಳಗೆ ಕಾರ್ಯವೆಸಗಲು ಅನುವಾಗುವಂತಹ ವಾತಾವರಣ ನಿರ್ಮಾಣಕ್ಕೆ ಬೇಕಾಗುವ ಆದ್ಯತೆಗಳನ್ನು ಗುರುತಿಸಲಾಗಿದೆ.

ಅಧ್ಯಯನದ ಉದ್ದೇಶಗಳನ್ನು ದೃಷ್ಟಿಯಲಿಟ್ಟುಕೊಂಡು ಇದರ ವಿಶ್ಲೇಶಣೆ ಮಾಡಿ ಈ ತಥ್ಯಗಳನ್ನು ರೂಪಿಸಲಾಗಿದೆ. ಗ್ರಾಮಪಂಚಾಯತ್‌ನ ಕಾರ್ಯವೈಖರಿ, ಸದಸ್ಯರುಗಳ ಪಾತ್ರ ವಿಶ್ಲೇಷಣೆ, ಚುನಾವಣಾ ಪ್ರಕ್ರಿಯೆ ಹಾಗೂ ಊರಿನ ಯಜಮಾನರ ಪಾತ್ರ ಮತ್ತು ಮಹಿಳಾ ಸದಸ್ಯತ್ವ ಇವುಗಳು ಸಾಕಷ್ಟು ಸುಧಾರಿಸಬೇಕಾದ ಆಗತ್ಯವಿದೆ. ಗ್ರಾಮಸಭೆಯು ಸಮರ್ಪಕವಾಗಿ ಮತ್ತು ಅತ್ಯಂತ ಪರಿಣಾಮಕಾರಿಯಾಗಿ ನಡೆಯಬೇಕಾದ ಜರೂರತ್ತು ಇದೆ. ಯಾಕೆಂದರೆ ಇವು ಸರಿಯಾಗಿ ನಡೆಯದಿದ್ದರೆ ಗ್ರಾಮಪಂಚಾಯತ್ ವ್ಯವಸ್ಥೆಯ ಸ್ವಾಸ್ಥ್ಯದ ಬಗ್ಗೆ ಯಾರಿಗೂ ಏನು ಹೇಳಲಾಗದು, ಗ್ರಾಮಸಭೆಯು ರೋಗಗ್ರಸ್ಥ ಸ್ಥಿತಿಯಲ್ಲಿದ್ದರೆ ಗ್ರಾಮಪಂಚಾಯತ್‌ನ ಕಾರ್ಯವೈಖರಿ ಆರೋಗ್ಯದಾಯಕವಾಗಿರಲು ಸಾಧ್ಯವಿಲ್ಲ.

ಗ್ರಾಮಸಭೆಯನ್ನು ಕರೆಯುವಾಗ ಆದಷ್ಟು ಪೂರ್ವಭಾವಿಯಾಗಿ ಜನರಿಗೆ ನೋಟಿಸು ಕಳುಹಿಸುವುದರ ಮೂಲಕ ಸಭೆ ನಡೆಯುವಿಕೆಯ ಖಚಿತತೆ ಮತ್ತು ಹೆಚ್ಚಿನ ಪ್ರಮಾಣದ ಹಾಜರಾತಿಯ ನಿರೀಕ್ಷೆಯನ್ನು ಇಟ್ಟುಕೊಂದಿರಬೇಕು. ಮಹಿಳಾ ಹಾಜರಾತಿಯ ಬಗ್ಗೆಯೂ ತೀವ್ರ ಆಸಕ್ತಿವಹಿಸಬೇಕು. ಅವರ ಉತ್ತಮ ಪಾತ್ರ ಮತ್ತದಕ್ಕೆ ಪೂರಕವಾದ ವಾತಾವರಣವನ್ನು ರೂಪಿಸಬೇಕು. ಗ್ರಾಮದ ಮುಖ್ಯ ಆದ್ಯತೆಗಳನ್ನು ಗುರುತಿಸುವುದರ ಮೂಲಕ ಅಭಿವೃದ್ಧಿ ಕಾರ್ಯಗಳನ್ನು ಅನುಷ್ಠಾನಗೊಳಿಸಬೇಕು. ಗ್ರಾಮಮಟ್ಟದಲ್ಲಿ ಯೋಜನಾ ಪ್ರಕ್ರಿಯೆಯನ್ನು ಜಾರಿಗೊಳಿಸಬೇಕು. ಇದು ಈಗಾಗಲೇ ಕೇರಳದಲ್ಲಿ ಸಾಕಷ್ಟು ಯಶಸ್ಸು ಕಾಣುತ್ತಲಿದೆ. ಜಿಲ್ಲಾ ಪಂಚಾಯತ್ ಮತ್ತು ತಾಲ್ಲೂಕು ಪಂಚಾಯತ್‌ಗಳು ಉತ್ತಮ ಸಹಕಾರ ನೀಡಿ ಗ್ರಾಮದ ಯೋಜನೆ ರೂಪುಗೊಳಿಸುವಲ್ಲಿ ಮುತುವರ್ಜಿ ವಹಿಸಬೇಕು.

ಕೆಂದ್ರ ಸರಕಾರವು ತಮ್ಮ ಕ್ಷೇತ್ರದ ಅಭಿವೃದ್ಧಿ ಕಾರ್ಯಗಳಿಗಾಗಿ ಎಂ. ಪಿ. ಲೋಕಲ್ ಫಂಡ್ ನೀಡುತ್ತದೆ. ಇದು ಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ಗ್ರಾಮಗಳ ಅಭಿವೃದ್ಧಿ ಕಾರ್ಯಗಳಿಗೂ ವಿಸ್ತರಿಸಲ್ಪಡುತ್ತವೆ. ಈ ಫಂಡ್‌ನಿಂದ ಒಂದು ಗ್ರಾಮದಲ್ಲಿ ಯೋಜನೆ ಅಥವಾ ಕಾಮಗಾರಿ ನಡೆಯುವಾಗ ಅದರ ಕುರಿತ ಎಳ್ಳಷ್ಟು ಮಾಹಿತಿಯು ಕೂಡ ಆ ಗ್ರಾಮದ ಸದಸ್ಯ ಅಥವಾ ಪಂಚಾಯತ್ ಅಧ್ಯಕ್ಷರಿಗೆ ಇರದಂಥ ಪರಿಸ್ಥಿತಿ ಇದೆ. ಇದರಿಂದ ಗ್ರಾಮದ ಅಭಿವೃದ್ಧಿ ಕಾರ್ಯಕ್ರಮಗಳು ಅಥವಾ ಅಪೂರ್ಣವಾಗುವ ಸಂಭವಗಳೇ ಹೆಚ್ಚು. ಉದಾಹರಣೆಗೆ ಗ್ರಾಮದ ಹಳ್ಳಿಯಲ್ಲಿ ರಸ್ತೆ ಅಥವಾ ಇನ್ನಾವುದೆ ಕಾಮಗಾರಿಯು ಪಂಚಾಯತ್‌ನ ಸೀಮಿತ ಹಣದ ಕೊರತೆಯಿಂದ ಅಪೂರ್ಣವಾಗಿದ್ದರೆ ಅದು ಹಾಗೆ ನೆನೆಗುದಿಗೆ ಬೀಳುವುದು. ಇದು ಪೂರ್ಣವಾಗಬೇಕಾದರೆ ಮುಂದಿನ ವರ್ಷದ ಪಂಚಾಯತ್ ಬಜೆಟ್‌ನಲ್ಲಿ ಅನುಮಾನ ದೊರೆತಲ್ಲಿ ಆಗಬಹುದು ಇಲ್ಲವೇ ಹಣ ದೊರೆಯದೆ ಹಾಗೆ ಅಪೂರ್ಣವಾಗಿ ಉಳಿಯುತ್ತದೆ. ಇಂಥ ಸಂದರ್ಭದಲ್ಲಿ ಎಂ. ಫಿ. ಫಂಡ್‌ನಿಂದ ಆ ಗ್ರಾಮಕ್ಕೆ ಹಣ ವಿನಿಯೋಗಿಸಲ್ಪಡುವುದಿದ್ದರೆ ಅದರ ಮಾಹಿತಿಯು ಪಂಚಾಯತ್ ಅಧ್ಯಕ್ಷ ಯಾ ಸದರಿ ಸದಸ್ಯರಿಗೆ ತಿಳಿದಿದ್ದಲ್ಲಿ ಇಂತಹ ಅಪೂರ್ಣ ಕಾಮಗಾರಿಗಳನ್ನು ಪೂರ್ತಿಗೊಳಿಸಬಹುದು ಎಂದು ಜಿಲ್ಲಾ ಪಂಚಾಯತ್ ಸದಸ್ಯರೊಬ್ಬರು ಹೇಳಿರುವುದು ಅಭಿವೃದ್ಧಿ ದೃಷ್ಟಿಯಿಂದ ಸಮಯೋಚಿತವಾಗಿದೆ. ಇಂಥ ಸಂದರ್ಭದಲ್ಲಿ ಸಂಸದರು ಈ ಕುರಿತು ಗ್ರಾಮ ಪಂಚಾಯತ್‌ಗೆ ಮಾಹಿತಿಯನ್ನು ನೀಡಬೇಕಾಗುತ್ತದೆ. ಈ ತರದ ಸೌಜನ್ಯದಿಂದ ಅಭಿವೃದ್ಧಿ ಕಾರ್ಯಗಳು ಉತ್ತಮಗೊಳ್ಳುವುವು. ಮತ್ತು ಜನಪ್ರತಿನಿಧಿಗಳೊಳಗೆ ಅಂದರೆ ಸಂಸದರಿಂದ ಹಿಡಿದು ತಳಮಟ್ಟದ ಗ್ರಾಮ ಪಂಚಾಯತ್ ಸದಸ್ಯರವರೆಗೂ ಉತ್ತಮ ಸೌಹರ್ದ ಸಂಬಂಧವಿರುವುದು.

ಇತ್ತೀಚಿನ ದಿನಗಳಲ್ಲಿ ಜನಪ್ರತಿನಿಧಿಗಳು (ವಿಕೇಂದ್ರಿತ ಘಟಕ) ಮತ್ತು ಅಧಿಕಾರವರ್ಗದ ಮಧ್ಯೆ ತಾತ್ವಿಕ ಸೌಹಾರ್ದ ಸಂಬಂಧವಿರುವುದು ಮಾತ್ರವಲ್ಲ ಜನಪ್ರತಿನಿಧಿಗಳೊಳಗೂ ಸ್ಥಾನಮಾನದ ಕುರಿತಂತೆ ತಾರತಮ್ಯವಿದೆ. ಸಂಸದರು ಮತ್ತು ತಳಮಟ್ಟದ ಗ್ರಾಮ ಪಂಚಾಯತ್ ಸದಸ್ಯರ ಮಧ್ಯೆ ಬಹಳಷ್ಟು ಅಂತಸ್ತಿನ ಅಥವಾ ಸ್ಥಾನಮಾನದ ತಾರತಮ್ಯವಿದೆ. ಇದು ನಿವಾರಣೆಯಾಗದಿದ್ದಲ್ಲಿ ವಿಕೇಂದ್ರಿಕರಣದ ಆಶಯಗಳು ಸಂಪೂರ್ಣವಾಗಿ ಕಾರ್ಯಗತ ವಾಗಲಾರವು. ಯಾಕೆಂದರೆ ಪಂಚಾಯತ್‌ನ ಆದಾಯವು ಸೀಮಿತವಾಗಿರುವುದು ಮತ್ತು ಅಭಿವೃದ್ಧಿ ಕಾರ್ಯಗಳಿಗೆ ಅದು ಹೆಚ್ಚಾಗಿ ಕೇಂದ್ರ ರಾಜ್ಯಗಳೆರಡನ್ನು ಅವಲಂಬಿಸಿರುವುದರಿಂದ ರಾಜ್ಯ ಮತ್ತು ಕೇಂದ್ರದ ಜನಪ್ರತಿನಿಧಿಗಳ ಪಾತ್ರವು ಪಂಚಾಯತ್‌ನ ಮುನ್ನಡೆಗೆ ಸಹಕಾರಿಯಾಗುವ ಸಂಭವಿದೆ. ಎಲ್ಲಿಯವರೆಗೆ ಪಂಚಾಯತ್ ತನ್ನ ವ್ಯಾಪ್ತಿಯ ಅಭಿವೃದ್ಧಿ ಮತ್ತಿತ್ತರ ಕಾರ್ಯಕ್ರಮಗಳಿಗೆ ಕೇಂದ್ರ/ರಾಜ್ಯದ ನೆರವನ್ನು ಸಂಪೂರ್ಣವಾಗಿ ಅಥವಾ ಭಾಗಶಃ ಅವಲಂಬಿಸಿರುತ್ತದೋ ಅಥವಾ ಪಂಚಾಯತ್ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಸ್ವಂತಂತ್ರವಾಗಿ ಸಂಪನ್ಮೂಲಗಳನ್ನು ಕ್ರೋಢಿಕರಿಸುವಂತಹ ಸ್ಥಿತಿಯಲ್ಲಿರುವುದಿಲ್ಲವೋ ಅಲ್ಲಿಯವರೆಗೆ ಈ ಜಂಜಾಟ ಇದ್ದೇ ಇರುತ್ತದೆ. ಇದು ಹೊರನೋಟಕ್ಕೆ ಸರಳವಾಗಿ ಕಂಡರೂ ಸಾಂಸ್ಥಿಕವಾಗಿ ಮತ್ತು ಆರ್ಥಿಕವಾಗಿ ಬಹಳ ಜಟಿಲವಾದ ಸಮಸ್ಯೆಯಾಗಿದೆ, ಕೇಂದ್ರ ರಾಜ್ಯಗಳ ಸಂಬಂಧದಂತೆಯೆ ಇದು ಸಹ ಉನ್ನತ ರಾಕಕೀಯ ಸಂಸ್ಥೆಗಳ ಅಂದರೆ ಸಂಸದರು, ವಿಧಾನಭೆ ಸದಸ್ಯರು ಮತ್ತು ಪಂಚಾಯತಿ ಸದಸ್ಯರುಗಳ ಸಂಬಂಧ ಕುರಿತಾಗಿರುತ್ತದೆ.

ಪ್ರಥಮವಾಗಿ ಮತ್ತು ಪ್ರಾಯೋಗಿಕವಾಗಿ ನಾವು ನೋಡಿರುವಂತೆ ಉನ್ನತ ರಾಜಕೀಯ ಅಥವಾ ಜನಪ್ರತಿನಿಧಿ ಸಂಸ್ಥೆಗಳು ಸ್ಥಳೀಯ ಸಂಸ್ಥೆಗಳಿಗೆ ಹೆಚ್ಚಿನ ಅಧಿಕಾರ ಅಥವಾ ಸ್ಥಳೀಯ ಸಂಸ್ಥೆಗಳಿಗಳ ಜೊತೆ ಅಧಿಕಾರವನ್ನು ಹಂಚಿಕೊಳ್ಳಲು ಸಿದ್ಧವಿಲ್ಲ. ಹಾಗೆಯೇ ಈ ಸಂಸ್ಥೆಗಳ ಮೇಲೆ ಅಧಿಕಾರಿಗಳ ನಿಯಂತ್ರಣವು ಅಧಿಕಗೊಂಡಿರುತ್ತದೆ. ಇದರಿಂದ ವಿಕೇಂದ್ರೀಕರಣದ ವೈಫಲ್ಯವನ್ನು ಸುಲಭವಾಗಿ ಸ್ಥಳೀಯ ಸಂಸ್ಥೆಗಳ ಜನಪ್ರತಿನಿಧಿಗಳ ಮೇಲೆ ಹೇರುತ್ತಿವೆ. ಈ ನಿಟ್ಟಿನಲ್ಲಿ ಸ್ಥಳೀಯ ಸಂಸ್ಥೆಗಳಿಗೆ ಹೆಚ್ಚಿನ ಅಧಿಕಾರ ನೀಡುವುದೆಂದರೆ ಮೇಲಿನ ಹಂತದ ಜನಪ್ರತಿನಿಧಿಗಳು ಇದು ತಮ್ಮ ಅಧಿಕಾರವನ್ನು ಕುಂಠಿತಗೊಳಿಸಿದಂತೆ ಎಂದು ಭಾವಿಸುತ್ತಾರೆ. ಇದಲ್ಲದೆ ಮೇಲಿನ ಹಂತದ ಜನಪ್ರತಿನಿಧಿಗಳು ಪಂಚಾಯತ್ ವ್ಯವಸ್ಥೆಯಲ್ಲಿ ಪದನಿಮಿತ್ತ ಸದಸ್ಯರು ಆಗಿರಬಾರದೆಂದು ಮತ್ತು ಜಿಲ್ಲಾ ಉಸ್ತುವಾರಿ ಮಂತ್ರಿಗಳು ಇರಬಾರದೆಂದು ತಜ್ಞರ ಸಮಿತಿಯ ಶಿಫಾರಸ್ಸು ಮಾಡಿರುವುದರಿಂದ ಇವರುಗಳ ಸಂಬಂಧ ಇನ್ನಷ್ಟು ಜಟಿಲವಾಗುವ ಸಂಭವಿದೆ. ಇದಕ್ಕಾಗಿ ತಮಿಳುನಾಡಿನಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳ ಸದಸ್ಯರು ಸಹ ಎಂ. ಪಿ, ಎಂ. ಎಲ್. ಎ, ಲೋಕಲ್ ಫಂಡ್‌ನಂತೆ ತಮಗೂ ಲೋಕಲ್ ಫಂಡ್ ಇರಬೇಕು ಎಂದು ವಾದ ಮಂಡಿಸಿದ್ದಾರೆ.

ಹಾಗೆಯೇ ಪಂಚಾಯತ್‌ಗಳಿಗೆ ಸೀಮಿತ ಅನುದಾನವಿರುತ್ತದೆ ಮತ್ತು ಹೆಚ್ಚಾಗಿ ಇದು ಕೇಂದ್ರ/ರಾಜ್ಯಗಳನ್ನೇ ಅವಲಂಬಿಸಿರುತ್ತದೆ. ಸ್ವಂತವಾಗಿ ಸಂಪನ್ಮೂಲಗಳನ್ನು ಕ್ರೋಢಿಕರಿಸಲು ಸ್ವತಂತ್ರವಾದ ಪಂಚಾಯತ್‌ಗಳಿಗೆ ಅವಕಾಶ ಮೂಲಗಳಿಲ್ಲ. ರಾಜ್ಯದ ಬಜೆಟ್‌ನಲ್ಲಿ ಸೀಮಿತ ಅನುದಾನವನ್ನು ನೀಡಲಾಗುತ್ತದೆ. ಆದರೆ ಕೇರಳ ಸರಕಾರವು ಬಜೆಟ್‌ನಲ್ಲಿ ಶೇಕಡಾ ೩೫ ರಿಂದ ೪೦ ರವರೆಗೆ ಪಂಚಾಯತ್‌ಗೆ ಅನುದಾನ ನೀಡಲು ಅವಕಾಶ ಒದಗಿಸಿದೆ. ಅದಲ್ಲದೆ ಅಲ್ಲಿನ ಪಂಚಾಯತ್‌ನ ಸಂಪನ್ಮೂಲ ಕ್ರೋಢಿಕರಣದ ಮೂಲವು ಹೆಚ್ಚಾಗಿರುತ್ತದೆ. ಇದರಿಂದ ಅಲ್ಲಿನ ಕೆಲ ಪಂಚಾಯತುಗಳ ವಾರ್ಷಿಕ ಸಂಪನ್ಮೂಲವು ೭೦ ಲಕ್ಷ ರೂ. ಗಳವರೆಗೆ ಇದೆ. ಇವೆಲ್ಲವನ್ನು ಪರಿಗಣಿಸಿದಾಗ ನಮ್ಮ ವ್ಯವಸ್ಥೆಯಲ್ಲಿ ಸೀಮಿತ ಅವಕಾಶಗಳಿವೆ ಎಂಬುದು ಸ್ಪಷ್ಟ.

ಕರ್ನಾಟಕ ಸರಕಾರವು ಈ ಅಂಶಗಳನ್ನು ಮನಗಂಡು ಹೆಚ್ಚಿನ ಸಂಪನ್ಮೂಲಗಳನ್ನು ಮತ್ತು ಅಧಿಕಾರಿಗಳನ್ನು ಪಂಚಾಯತ್ ಸಂಸ್ಥೆಗಳಿಗೆ ವರ್ಗಾಯಿಸಬೇಕು . ಹಾಗೆಯೇ ಜನಪ್ರತಿನಿಧಿಗಳೊಳಗೆ ಸ್ಥಾನಮಾನದ ಅಂತರವನ್ನು ನಿವಾರಿಸುವಲ್ಲಿ ಕಾರ್ಯೋನ್ಮುಖವಾದರೆ ಪಂಚಾಯತ್ ಮತ್ತು ಉನ್ನತ ಜನಪ್ರತಿನಿಧಿಗಳ ಮಧ್ಯೆ ಉತ್ತಮ ಸಂಬಂಧವೇರ್ಪಡುವಲ್ಲಿ ಸಂಶಯವಿಲ್ಲ.

# ಕೃತಜ್ಞತೆಗಳು

ಈ ಪುಸ್ತಕವನ್ನು ಪ್ರಕಟಿಸಲು ಪ್ರೋತ್ಸಾಹಿಸಿದ ಮಾನ್ಯ ಕುಲಪತಿಗಳಾದ ಡಾ. ಎಚ್. ಜೆ. ಲಕ್ಕಪ್ಪಗೌಡ ಅವರಿಗೆ ಕುಲಸಚಿವರಾದ ಡಾ. ಕೆ. ವಿ. ನಾರಾಯಣ ಅವರಿಗೆ, ನಾನು ಮೊದಲಿಗೆ ಕೃತಜ್ಞನಾಗಿರುವೆ. ಕ್ಷೇತ್ರಕಾರ್ಯ ಸಂದರ್ಭದಲ್ಲಿ ನನ್ನೊಂದಿಗೆ ಸಹಕರಿಸುವುದರೊಂದಿಗೆ ಮಾಹಿತಿಯನ್ನು ಪರಿಶೀಲಿಸಿದ ವಿಭಾಗದ ಮುಖ್ಯಸ್ಥರಾದ ಟಿ. ಆರ್. ಚಂದ್ರಶೇಖರ್ ಅವರಿಗೆ ಹಾಗೂ ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಜೊತೆಗೆ ಪಾಲೊಂಡಿದ್ದ ಸಂಶೋಧನಾ ವಿದ್ಯಾರ್ಥಿಗಳಾದ ಜೆ. ಕೃಷ್ಣ ಮತ್ತು ಯರ್ರಿಸ್ವಾಮಿ ಅವರ ನೆರವಿಗೆ ಆಬಾರಿಯಾಗಿದ್ದೇನೆ. ಅಂತೇಯೇ ಮುದ್ರಣಕ್ಕೆ ಅಚ್ಚುಕಟ್ಟುತನವನ್ನು ಪ್ರದರ್ಶಿಸುತ್ತಿರುವ ಪ್ರಸಾರಾಂಗವು ಈ ಕೃತಿಯನ್ನು ಪ್ರಕಟಿಸುತ್ತಿರುವುದು ನನಗೆ ವೈಯಕ್ತವಾಗಿಯೂ ಸಂತೋಷದ ವಿಚಾರವೆಂದೇ ಹೇಳಬೇಕು. ಅದರಲ್ಲೂ ಸಹಾಯಕ ನಿರ್ದೇಶಕರಾದ ಶ್ರೀ ಸುಜ್ಞಾನ ಮೂರ್ತಿ ಅವರ ಸಹಕಾರ, ಹಸ್ತಪ್ರತಿ ಕರಡು, ವಿನ್ಯಾಸದ ಎಲ್ಲ ಕೆಲಸವನ್ನು ಒಪ್ಪವಾಗಿ ತಿದ್ದಿ ನನ್ನ ಕೆಲಸವನ್ನು ಹಗುರ ಮಾಡಿದ ಮಿತ್ರ ಶ್ರೀ. ಕೆ. ಎಲ್. ರಾಜಶೇಖರ್ ಅವರಿಗೆ, ಅದೇ ರೀತಿ ಪುಸ್ತಕಕ್ಕೊಂದು ಅಂದವಾದ ರಕ್ಷಾ ಕವಚವನ್ನು ಹೊದಿಸಿರುವ ಶ್ರೀ. ಕೆ. ಕೆ. ಮಕಾಳಿ ಅವರಿಗೂ ನನ್ನ ಕೃತಜ್ಞತೆಗಳು ಸಲ್ಲುತ್ತವೆ.

**ಎ. ಶ್ರೀಧರ**

# ಕೋಷ್ಟಕಗಳು

**ಕೋಷ್ಟಕ ೧ : ಗ್ರಾಮ ಪಂಚಾಯತ್ ಹಿರೇಹೆಗ್ಡಾಳ್ ಜನ ಸಂಖ್ಯೆ, ಸಾಕ್ಷರತೆ ಮತ್ತು ಆರ್ಥಿಕ ಮಟ್ಟ ವಿವರ**

| ಕ್ರ. ಸಂ. | ಗ್ರಾಮ | ಜನ ಸಂಖ್ಯೆ | | ಒಟ್ಟು | ಸಾಕ್ಷರತೆ ಪ್ರಮಾಣ | ಬಡತನರೇಖೆ ಕೆಳಗಿರುವ ಜನಸಂಖ್ಯೆ ಶೇಕಡಾವಾರು |
|---|---|---|---|---|---|---|
| | | ಗಂಡು | ಹೆಣ್ಣು | | | |
| ೧ | ಹಿರೇಹೆಗ್ಡಾಳ್ | ೮೨೭ | ೮೧೬ | ೧,೬೪೩ | ೬೫% | ೫೦% |
| ೨ | ಸಾಸಲವಾಡ | ೬೩೧ | ೫೮೩ | ೧,೨೧೪ | ೬೫% | ೫೦% |
| ೩ | ಬೊಪ್ಪಲಾಪುರ | ೩೩೨ | ೩೩೦ | ೦,೬೬೨ | ೪೫% | ೫೫% |
| ೪ | ಸಾಣೇಹಳ್ಳಿ | ೧೧೨ | ೧೨೫ | ೦,೨೩೭ | ೪೦% | ೬೦% |
| | | | | **೩,೭೫೬** | | |

**ಕೋಷ್ಟಕ ೧ಎ: ಹಿರೇಹೆಗ್ಡಾಳ್ ಗ್ರಾಮ ಪಂಚಾಯತಿಯ ಮನೆ ತೆರಿಗೆ ವಿವರ**

| ಕ್ರ. ಸಂ. | ಗ್ರಾಮದ ಹೆಸರು | ಒಟ್ಟು ಮನೆಗಳು | ಒಟ್ಟು ತೆರಿಗೆ ಕಟ್ಟುತ್ತಿರುವ ಮನೆಗಳ ಸಂಖ್ಯೆ | ಸರಿಯಾಗಿ ತೆರಿಗೆ ಕಟ್ಟಿರುವ ಮನೆಗಳ ಸಂಖ್ಯೆ |
|---|---|---|---|---|
| ೦೧ | ಹಿರೇಹೆಗ್ಡಾಳ್ | ೪೧೪ | ೩೯೦ | ೧೫೦ |

| | | | | |
|---|---|---|---|---|
| ೦೨ | ಸಾಸಲವಾಡ | ೨೨೯ | ೨೨೯ | ೦೫೦ |
| ೦೩ | ಬೊಪ್ಪಲಾಪುರ | ೧೨೭ | ೧೨೭ | ೦೨೫ |
| ೦೪ | ಸಾಣೇಹಳ್ಳಿ | ೦೫೮ | ೦೫೮ | ೦೦೫ |
| | | **೮೨೮** | **೮೦೪** | **೨೩೦** |

**ಕೋಷ್ಟಕ ೨: ಹಿರೇಹೆಗ್ಡಾಳ್ ಗ್ರಾಮ ಪಂಚಾಯತಿಯ ಒಟ್ಟು ಜಾತಿವಾರು ಮನೆಗಳ ಸಂಖ್ಯೆ**

| ಕ್ರ. ಸಂ. | ಜಾತಿ | ಮನೆಗಳ ಸಂಖ್ಯೆ | ಮನೆಗಳ ಸಂಖ್ಯೆ ಶೇಕಡಾವಾರು |
|---|---|---|---|
| ೦೧ | ಲಿಂಗಾಯಿತ | ೧೪೯ | ೦೫೪.೬೦ |
| ೦೨ | ಪ. ಜಾತಿ | ೧೮೦ | ೦೨೨.೩೯ |
| ೦೩ | ಕುರುಬರು | ೦೫೨ | ೦೦೬.೪೭ |
| ೦೪ | ವಾಲ್ಮೀಕಿ | ೦೪೭ | ೦೦೫.೮೫ |
| ೦೫ | ಉಪ್ಪಾರ | ೦೩೬ | ೦೦೪.೪೮ |
| ೦೬ | ಬಾರಿಕರು | ೦೨೩ | ೦೦೨.೮೬ |
| ೦೭ | ಅಕ್ಕಸಾಲಿಗ | ೦೧೪ | ೦೦೧.೭೪ |
| ೦೮ | ಮುಸ್ಲಿಂ | ೦೦೫ | ೦೦೦.೬೨ |
| ೦೯ | ಅಗಸ | ೦೦೪ | ೦೦೦.೫೦ |
| ೧೦ | ಕುಂಬಾರ | ೦೦೩ | ೦೦೦.೩೭ |
| ೧೧ | ಬ್ರಾಹ್ಮಣ | ೦೦೧ | ೦೦೦.೧೨ |
| | | **೮೦೪** | **೧೦೦.೦೦** |

**ಕೋಷ್ಟಕ ೨ಎ: ಹಿರೇಹೆಗ್ಡಾಳ್ ಗ್ರಾಮ ಪಂಚಾಯತಿಯ ಪ್ರತಿ ಗ್ರಾಮಗಳ ಜಾತಿವಾರು ಮನೆಗಳ ಸಂಖ್ಯೆ**

**೧. ಹಿರೇಹೆಗ್ಡಾಳ್ ಗ್ರಾಮ**

| ಕ್ರ. ಸಂ. | ಜಾತಿ | ಮನೆಗಳ ಸಂಖ್ಯೆ | ಮನೆಗಳ ಸಂಖ್ಯೆ ಶೇಕಡಾವಾರು |
|---|---|---|---|
| ೦೧ | ಲಿಂಗಾಯಿತ | ೧೯೬ | ೦೫೦.೨೬ |
| ೦೨ | ಪ. ಜಾತಿ | ೧೦೪ | ೦೨೬.೬೭ |
| ೦೩ | ವಾಲ್ಮೀಕಿ | ೦೨೯ | ೦೦೭.೪೩ |
| ೦೪ | ಉಪ್ಪಾರ | ೦೨೪ | ೦೦೬.೧೫ |
| ೦೫ | ಬಾರಿಕರು | ೦೨೦ | ೦೦೫.೧೩ |
| ೦೬ | ಅಕ್ಕಸಾಲಿಗ | ೦೦೯ | ೦೦೨.೩೦ |
| ೦೭ | ಕುಂಬಾರ | ೦೦೩ | ೦೦೦.೭೭ |
| ೦೮ | ಮುಸ್ಲಿಂ | ೦೦೩ | ೦೦೦.೭೭ |
| ೦೯ | ಅಗಸ | ೦೦೧ | ೦೦೦.೨೬ |
| ೧೦ | ಬ್ರಾಹ್ಮಣ | ೦೦೧ | ೦೦೦.೨೬ |
| | | **೩೯೦** | **೧೦೦.೦೦** |

**ಕೋಷ್ಟಕ ೨ಬಿ – ೨. ಸಾಸಲವಾಡ ಗ್ರಾಮ**

| ಕ್ರ. ಸಂ. | ಜಾತಿ | ಮನೆಗಳ ಸಂಖ್ಯೆ | ಮನೆಗಳ ಸಂಖ್ಯೆ ಶೇಕಡಾವಾರು |
|---|---|---|---|
| ೦೧ | ಲಿಂಗಾಯಿತ | ೧೮೮ | ೦೮೨.೦೯ |
| ೦೨ | ಪ. ಜಾತಿ | ೦೧೮ | ೦೦೭.೮೬ |
| ೦೩ | ಉಪ್ಪಾರ | ೦೦೮ | ೦೦೩.೫೮ |

| | | | |
|---|---|---|---|
| ೦೪ | ಅಕ್ಕಸಾಲಿಗ | ೦೦೫ | ೦೦೨.೧೮ |
| ೦೫ | ವಾಲ್ಮೀಕಿ | ೦೦೪ | ೦೦೧.೭೫ |
| ೦೬ | ಅಗಸ | ೦೦೩ | ೦೦೧.೩೧ |
| ೦೭ | ಬಾರಿಕ | ೦೦೩ | ೦೦೧.೩೧ |
| | | **೨೨೯** | **೧೦೦.೦೦** |

**ಕೋಷ್ಟಕ ೨ಸಿ – ೩. ಬೊಬ್ಬಲಾಪುರ ಗ್ರಾಮ**

| **ಕ್ರ. ಸಂ.** | **ಜಾತಿ** | **ಮನೆಗಳ ಸಂಖ್ಯೆ** | **ಮನೆಗಳ ಸಂಖ್ಯೆ ಶೇಕಡಾವಾರು** |
|---|---|---|---|
| ೦೧ | ಲಿಂಗಾಯಿತ | ೦೫೫ | ೦೪೩.೩೧೨ |
| ೦೨ | ಕುರುಬ | ೦೫೨ | ೦೪೦.೯೪೩ |
| ೦೩ | ವಾಲ್ಮೀಕಿ | ೦೧೪ | ೦೧೧.೦೨೪ |
| ೦೪ | ಉಪ್ಪಾರ | ೦೦೪ | ೦೦೩.೧೫೫ |
| ೦೫ | ಮುಸ್ಲಿಂ | ೦೦೨ | ೦೦೧.೦೬೬ |
| | | **೧೨೭** | **೧೦೦.೦೦** |

**ಕೋಷ್ಟಕ ೨ಡಿ – ೪. ಸಾಣೇಹಳ್ಳಿ ಗ್ರಾಮ**

| **ಕ್ರ. ಸಂ.** | **ಜಾತಿ** | **ಮನೆಗಳ ಸಂಖ್ಯೆ** | **ಮನೆಗಳ ಸಂಖ್ಯೆ ಶೇಕಡಾವಾರು** |
|---|---|---|---|
| ೦೧ | ಬೋವಿ (ಪ. ಜಾತಿ) | ೫೮ | ೧೦೦.೦೦ |
| | | **೫೮** | **೧೦೦.೦೦** |

**ಕೋಷ್ಟಕ ೩: ಆರ್ಥಿಕ ಚಟುವಟಿಕೆಗಳ ವಿವರ**

ಅ. ಸಂಪನ್ಮೂಲ

೧. ಕೃಷಿ

| ಕ್ರ. ಸಂ. | ಮುಖ್ಯ ಬೆಳೆಗಳು | |
|---|---|---|
| | ಮುಂಗಾರು ಬೆಳೆ | ಹಿಂಗಾರು ಬೆಳೆ |
| ೦೧. | ಶೇಂಗಾ | ಮೆಕ್ಕೆ ಜೋಳ |
| ೦೨. | ಹತ್ತಿ | ಭತ್ತ |
| ೦೩. | ಭತ್ತ | ಶೇಂಗಾ |
| ೦೪. | ಮೆಕ್ಕೆಜೋಳ | |

೨. ನೀರಾವರಿ ಗ್ರಾಮವಾರು

| ಕ್ರ. ಸಂ. | ಗ್ರಾಮ | ಒಟ್ಟು ಸಾಗುವಳಿ ಭೂಮಿ (ಹೆಕ್ಟೇರುಗಳಲ್ಲಿ) | ನೀರಾವರಿಗೊಳಪಟ್ಟ ಒಟ್ಟು ಭೂಮಿ (ಹೆಕ್ಟೇರುಗಳಲ್ಲಿ ಕಾಲುವೆ, ಬಾವಿ, ಕೆರೆ ಒಟ್ಟು) |
|---|---|---|---|
| ೦೧. | ಹಿರೇಹೆಗ್ಡಾಳ್ | ೨,೫೬೨.೨೦ | ೪೧೩.೩೭ |
| ೦೨. | ಬೊಪ್ಪಲಾಪುರ | ೧,೭೬೭.೦೭ | ೧೮೦.೫೪ |

ಆ. ಚಟುವಟಿಕೆಗಳು

| ಕ್ರ. ಸಂ. | ಚಿಕ್ಕ ಆರ್ಥಿಕ ಚಟುವಟಿಕೆಗಳು | ಪ್ರಮುಖ ಚಟುವಟಿಕೆಗಳು |
|---|---|---|
| ೦೧. | ಕೃಷಿ ಆಧಾರಿತ | ಕುರಿ, ಎಮ್ಮೆ, ಎತ್ತು |
| ೦೨. | ಗಣಿ ಆಧಾರಿತ | - |
| ೦೩. | ಅರಣ್ಯ ಆಧಾರಿತ | - |
| ೦೪. | ಕರಕುಶಲ ಆಧಾರಿತ ಅನುವಂಶಿಕ | ಕಮ್ಮಾರಿಕೆ |
| ೦೫. | ಇತರೆ | - |

ಇ. ಮೂಲಸೌಲಭ್ಯಗಳು

ಪಂಚಾಯತ್ ವ್ಯಾಪ್ತಿಗೆ ಬರುವ ಹಳ್ಳಿಗಳು – ರಸ್ತೆ

| ಕ್ರ. ಸಂ. | ಗ್ರಾಮ | ಪಕ್ಕಾ ರಸ್ತೆ (ಕಿ.ಮೀ. ಗಳಲ್ಲಿ) | ಕಚ್ಚಾ ರಸ್ತೆ |
|---|---|---|---|
| ೦೧. | ಹಿರೇಹೆಗ್ಡಾಳ್ | ೮ ಕಿ. ಮೀ. | - |
| ೦೨. | ಸಾಸಲವಾಡ | ೬ ಕಿ. ಮೀ. | - |
| ೦೩. | ಬೊಪ್ಪಲಾಪುರ | ೪ ಕಿ. ಮೀ. | - |
| ೦೪. | ಸಾಣೇಹಳ್ಳಿ | ೪ ಕಿ. ಮೀ. | - |

*ಪಂಚಾಯತಿಯ ಮುಖ್ಯ ರಸ್ತೆಯಿಂದ ಇರು ದೂರ ೮. ಕಿ.ಮೀ.*

**ಕೋಷ್ಟಕ ೪: ಹಿರೇಹೆಗ್ಡಾಳ್ ಗ್ರಾಮ ಪಂಚಾಯತಿಯ ಭೂ ಹಿಡುವಳಿ ಗಾತ್ರದ ಹಂಚಿಕೆ**

**೧. ಹಿರೇಹೆಗ್ಡಾಳ್ ಗ್ರಾಮ**

| ಕ್ರ. ಸಂ. | ಹಿಡುವಳಿಗಾತ್ರ | ಪರಿಶಿಷ್ಟ ಜಾತಿ | | ಪರಿಶಿಷ್ಟ ವರ್ಗ | | ಇತರೆ | | ಒಟ್ಟು | |
|---|---|---|---|---|---|---|---|---|---|
| | | ಸಂಖ್ಯೆ | ವಿಸ್ತೀರ್ಣ | ಸಂಖ್ಯೆ | ವಿಸ್ತೀರ್ಣ | ಸಂಖ್ಯೆ | ವಿಸ್ತೀರ್ಣ | ಸಂಖ್ಯೆ | ವಿಸ್ತೀರ್ಣ |
| ೦೧. | ಅತೀಸಣ್ಣ *(೧ ಹೆಕ್ಟೇರ್ ಗಿಂತ ಕಡಿಮೆ)* | ೧೨ | ೦೧೪.೯೭ | ೧೪ | ೯೮.೯೯ | ೨೪೨ | ೦೨೬೯.೯೨ | ೨೬೮ | ೦೩೦೩.೮೮ |
| ೦೨. | ಸಣ್ಣ *(೧ - ೨ ಹೆಕ್ಟೇರ್ ಗಳು)* | ೧೬ | ೦೫೬.೨೪ | ೦೭ | ೨೮.೮೮ | ೧೨೯ | ೦೪೭೭.೯೯ | ೧೫೨ | ೦೫೬೩.೧೧ |
| ೦೩. | ಅರೆ ಮಧ್ಯಮ *(೨ - ೪ ಹೆಕ್ಟೇರ್)* | ೦೯ | ೦೫೯.೭೬ | ೦೬ | ೪೬.೬೧ | ೧೩೨ | ೯೧೬.೭೦ | ೧೪೭ | ೧೦೨೩.೦೭ |
| ೦೪. | ಮಧ್ಯಮ *(೪ - ೧೦ ಹೆಕ್ಟೇರ್ ಗಿಂತ ಕಡಿಮೆ)* | - | - | - | - | ೦೫೦ | ೦೮೩೮.೩೬ | ೦೫೦ | ೦೮೩೮.೩೬ |
| ೦೫. | ದೊಡ್ಡ *(೧೦ ಹೆಕ್ಟೇರ್ ಮತ್ತು ಹೆಚ್ಚಿನ)* | - | - | - | - | ೦೦೫ | ೦೧೪೦.೧೭ | ೦೦೫ | ೦೧೪೦.೧೭ |
| | **ಒಟ್ಟು** | **೩೬** | **೧೩೦.೯೭** | **೨೭** | **೯೪.೪೮** | **೫೫೮** | **೨೬೪೩.೧೪** | **೬೨೨** | **೨೮೬೮.೫೯** |

**ಕೋಷ್ಟಕ ೪ಎ: ಹಿರೇಹೆಗ್ಡಾಳ್ ಗ್ರಾಮ ಪಂಚಾಯತಿಯ ಭೂ ಹಿಡುವಳಿ ಗಾತ್ರದ ಹಂಚಿಕೆ**

**೨. ಬೊಪ್ಪಲಾಪುರ ಗ್ರಾಮ**

| ಕ್ರ. ಸಂ. | ಹಿಡುವಳಿಗಾತ್ರ | ಪರಿಶಿಷ್ಟ ಜಾತಿ | | ಪರಿಶಿಷ್ಟ ವರ್ಗ | | ಇತರೆ | | ಒಟ್ಟು | |
|---|---|---|---|---|---|---|---|---|---|
| | | ಸಂಖ್ಯೆ | ವಿಸ್ತೀರ್ಣ | ಸಂಖ್ಯೆ | ವಿಸ್ತೀರ್ಣ | ಸಂಖ್ಯೆ | ವಿಸ್ತೀರ್ಣ | ಸಂಖ್ಯೆ | ವಿಸ್ತೀರ್ಣ |
| ೦೧. | ಅತೀಸಣ್ಣ *(೧ ಹೆಕ್ಟೇರ್ ಗಿಂತ ಕಡಿಮೆ)* | ೦೨೭ | ೦೪೦.೫೫ | ೦೧೧ | ೦೧೨.೮೪ | ೦೬೩ | ೦೭೩.೮೪ | ೧೦೧ | ೦೧೨೭.೨೩ |
| ೦೨. | ಸಣ್ಣ *(೧ - ೨ ಹೆಕ್ಟೇರ್ ಗಳು)* | ೦೫೨ | ೧೮೭.೨೯ | ೦೧೨ | ೦೪೫.೨೦ | ೦೪೮ | ೦೧೭೫.೩೬ | ೧೧೨ | ೦೪೦೭.೮೫ |
| ೦೩. | ಅರೆ ಮಧ್ಯಮ *(೧ - ೪ ಹೆಕ್ಟೇರ್)* | ೦೩೮ | ೨೩೧.೬೨ | ೦೦೮ | ೫೩.೩೮ | ೦೪೪ | ೩೧೭.೦೬ | ೦೯೦ | ೦೬೦೨.೦೬ |

| | | | | | | | | | |
|---|---|---|---|---|---|---|---|---|---|
| ೦೪. | ಮಧ್ಯಮ *(೪ - ೧೦ ಹೆಕ್ಟೇರ್ ಗಿಂತ ಕಡಿಮೆ)* | ೦೧೪ | ೧೯೭.೩೨ | ೦೦೪ | ೦೫೧.೨೯ | ೦೨೦ | ೦೨೭೮.೯೯ | ೦೩೮ | ೦೫೨೭.೬೦ |
| ೦೫. | ದೊಡ್ಡ *(೧೦ ಹೆಕ್ಟೇರ್ ಮತ್ತು ಹೆಚ್ಚಿನ)* | - | - | - | - | ೦೦೧ | ೦೦೨೬.೦೯ | ೦೦೧ | ೦೦೨೬.೦೯ |
| | **ಒಟ್ಟು** | **೧೩೧** | **೬೫೬.೭೮** | **೩೫** | **೧೬೨.೭೧** | **೧೭೬** | **೮೭೧.೩೪** | **೩೪೨** | **೧೬೯೦.೮೩** |

**ಕೋಷ್ಟಕ ೫: ಹಿರೇಹೆಗ್ಡಾಳ್ ಗ್ರಾಮ ಪಂಚಾಯತ್ ಸದಸ್ಯರು ೧೯೯೪ - ೨೦೦೦**

| **ಕ್ರ. ಸಂ.** | ಹೆಸರು | ಸ್ಥಾನ | **ಜಾತಿ** | **ಆಯ್ಕೆ** | **ಗ್ರಾಮ** |
|---|---|---|---|---|---|
| ೦೧. | ಸಿ. ಎಂ. ಬಿ. ಅನ್ನಪೂರ್ಣಮ್ಮ | ಅಧ್ಯಕ್ಷರು | ಲಿಂಗಾಯಿತ | ಚುನಾವಣೆ | ಹಿರೇಹೆಗ್ಡಾಳ್ |
| ೦೨. | ವರ್ತಿಕಾಜಿ ವೀರಪ್ಪ | ಉಪಾಧ್ಯಕ್ಷರು | ಲಿಂಗಾಯಿತ | ಚುನಾವಣೆ | ಬೊಪ್ಪಲಾಪುರ |
| ೦೩. | ಗಂಗಮ್ಮ | ಸದಸ್ಯರು | ವಾಲ್ಮೀಕಿ | ಚುನಾವಣೆ | ಹಿರೇಹೆಗ್ಡಾಳ್ |
| ೦೪. | ಎಂ. ರೇಣುಕಮ್ಮ | ಸದಸ್ಯರು | ಹರಿಜನ | ಚುನಾವಣೆ | ಹಿರೇಹೆಗ್ಡಾಳ್ |
| ೦೫. | ಎಚ್. ನಿಂಗಪ್ಪ | ಸದಸ್ಯರು | ಹರಿಜನ | ಚುನಾವಣೆ | ಹಿರೇಹೆಗ್ಡಾಳ್ |
| ೦೬. | ಉಪ್ಪಾರ ಗೋಣೆಪ್ಪ | ಸದಸ್ಯರು | ಉಪ್ಪಾರ | ಅವಿರೋಧ | ಬೊಪ್ಪಲಾಪುರ |
| ೦೭. | ಕೆ. ಲಲಿತಮ್ಮ | ಸದಸ್ಯರು | ಲಿಂಗಾಯಿತ | ಚುನಾವಣೆ | ಸಾಸಲವಾಡ |
| ೦೮. | ಎಂ. ಗೌಡ್ರು ಭೋಜಪ್ಪ | ಸದಸ್ಯರು | ಲಿಂಗಾಯಿತ | ಚುನಾವಣೆ | ಸಾಸಲವಾಡ |
| ೦೯. | ಜಿ. ಆರ್. ಚಂದ್ರಪ್ಪ | ಸದಸ್ಯರು | ಲಿಂಗಾಯಿತ | ಚುನಾವಣೆ | ಸಾಸಲವಾಡ |
| ೧೦. | ಎಚ್. ವಿ. ಚೌಡಪ್ಪ | ಸದಸ್ಯರು | ಬೋವಿ | ಅವಿರೋಧ | ಸಾಣೇಹಳ್ಳಿ |

**ಕೋಷ್ಟಕ ೬: ಹಿರೇಹೆಗ್ಡಾಳ್ ಗ್ರಾಮ ಪಂಚಾಯತ್**

೧೯೯೪ ರಿಂದ ೧೯೯೯ರ ಸಾಲಿನ ಜವಾಹರ್ ರೋಜ್‌ಗಾರ್ ಯೋಜನೆಯ ವಾರ್ಷಿಕವಾರು ಕ್ರಿಯಾ ಯೋಜನೆಗಳ ಅಂದಾಜು ಮೊತ್ತ.

| **ವರ್ಷ** | **ಅಂದಾಜು ವೆಚ್ಚ** | **೩೫%** | **೨೫%** | **೨೨.೫%** | **೧೭.೫%** |
|---|---|---|---|---|---|
| ೧೯೯೪ - ೯೫ | ೧.೨೫೮ | ೦.೪೪೮ | ೦.೩೧೦ | ೦.೨೮೦ | ೦.೨೨೦ |
| ೧೯೯೫ - ೯೬ | ೧.೩೮೦ | ೦.೪೮ | ೦.೩೨ | ೦.೩೧ | ೦.೨೭೦ |
| ೧೯೯೬ - ೯೭ | ೧.೫೪೦ | ೦.೫೩೯ | ೦.೩೮೫ | ೦.೩೪೬ | ೦.೨೭೦ |
| ೧೯೯೭ - ೯೮ | ೧.೬೯೦ | ೦.೫೯೨ | ೦.೪೨೩ | ೦.೩೮೦ | ೦.೨೯೫ |
| ೧೯೯೮ - ೯೯ | ೧.೪೨೨ | ೧.೧೦೨೦೦ (ನಾಲ್ಕು ಘಟಕಗಳ ಒಟ್ಟು ಮೊತ್ತ ಸೇರಿ) | | | |
| | ೩೫% - ಮಿತ ಉತ್ಪಾದನಾ ಆಸ್ತಿಗಳು | | | | |
| | ೨೫% - ಸಾಮಾಜಿಕ ಅರಣ್ಯ | | | | |
| | ೨೨.೫% - ಪರಿಶಿಷ್ಟ ಜಾತಿ/ವರ್ಗ | | | | |

| | |
|---|---|
| | ೧೭.೫% - ಇತರ ಕಾಮಕಾರಿಗಳು |

೧೯೯೪ ರಿಂದ ೧೯೯೯ ರವರೆಗೆ ಮೇಲಿನ ಯೋಜನೆಗಳಲ್ಲಿ ಉತ್ಪನ್ನವಾದ ಅಂದಾಜು ಮಾನವ ದಿನಗಳು

| | | | | |
|---|---|---|---|---|
| ೯೪ | - | ೯೫ | - | ೨೮೯೯ |
| ೯೫ | - | ೯೬ | - | ೨೭೩೦ |
| ೯೬ | - | ೯೭ | - | ೦೦೩೬ |
| ೯೭ | - | ೯೮ | - | ೦೦೧೪ |
| ೯೮ | - | ೯೯ | - | ೩೨೮೧ |

**ಒಟ್ಟು ೮೯೬೦ ಮಾನವ ದಿನಗಳು**

**ಕೋಷ್ಟಕ ೭:**

**ಹಿರೇಹೆಗ್ಡಾಳ್ ಗ್ರಾಮ ಪಂಚಾಯತ್ ಜೆ. ಆರ್. ವೈ ಅನುದಾನ, ಒಟ್ಟು ಜಮಾ, ಖರ್ಚು, ಕ್ರಿಯಾಯೋಜನೆ, ಇತ್ಯಾದಿ ವಿವರಗಳು**

| **ವರ್ಷ** | **ಜೆ. ಆರ್. ವೈ. ತಲಾನುದಾನ** | **ಒಟ್ಟು ಜಮಾ** | **ಖರ್ಚು** | **ಜೆ. ಆರ್. ವೈ. ಕ್ರಿಯಾ ಯೋಜನೆಗೆ ತಗಲಿದ ಮೊತ್ತ** | **ಕಲ್ಲು ಬಂಡೆ ಹಾಸುವಿಕೆಗೆ ತಗಲಿದ ಖರ್ಚು** | **ಹತ್ತನೇ ಹಣಕಾಸು ಯೋಜನೆ ಅನುದಾನ** |
|---|---|---|---|---|---|---|
| ೧೯೯೪ - ೯೫ | ೦,೯೧.೬೦೦ | ೦,೯೨, ೦೧೨ | ೦,೯೧, ೦೮೧ | ೧,೮೯,೭೦೦ | ೦,೩೪,೮೦೦ | - |
| ೧೯೯೫ - ೯೬ | ೧,೨೨,೨೦೦ | ೧,೨೪, ೪೨೬ | ೧,೨೩, ೭೨೭ | ೧,೩೮,೦೦೦ | ೦,೫೧,೫೯೪ | - |
| ೧೯೯೬ - ೯೭ | ೧,೩೪,೮೦೦ | ೧,೩೫, ೮೫೮ | ೧,೩೫, ೫೦೨ | ೧,೫೪,೦೦೦ | ೦,೭೯,೯೦೦ | - |
| ೧೯೯೭ - ೯೮ | ೧,೧೩,೫೦೦ | ೧,೧೪, ೦೭೩ | ೧,೧೩, ೭೩೩ | ೧,೬೯,೦೦೦ | ೦,೭೪,೮೭೧ | ೦,೫೨,೫೦೦ |
| ೧೯೯೮ - | ೧,೦೩,೦೦೦ | ೧,೦೩, ೯೯೦ | ೧,೦೩, ೫೦೦ | ೧,೪೨,೨೦೦ | ೧,೦೨,೭೯೦ | ೦,೬೬,೦೦೦ |

| | | | | | | |
|---|---|---|---|---|---|---|
| ೯೯ | | | | | | |
| | ೫,೬೫,೧೦೦ | ೫,೭೦,<br>೩೫೯ | ೫,೬೭,<br>೫೪೩ | ೭,೯೨,೯೦೦ | ೩,೪೩,೯೫೫ | ೧,೧೮,೫೦೦ |

**ಕೋಷ್ಟಕ ೮: ಹಿರೇಹೆಗ್ಡಾಳ್ ಗ್ರಾಮ ಪಂಚಾಯತ್ ತಲಾನುದಾನ, ಒಟ್ಟು ಜಮಾ, ಖರ್ಚುಗಳು**

| ವರ್ಷವಾರು | ತಲಾನುದಾನ | ಕರಸಂಗ್ರಹ | ಒಟ್ಟು ಜಮಾ | ಖರ್ಚು |
|---|---|---|---|---|
| ೧೯೯೪ - ೯೫ | ೦,೮೬,೩೫೬ | ೦,೧೧,೭೫೪ | ೧,೨೧,೮೩೦ | ೦,೯೦,೯೧೦ |
| ೧೯೯೫ - ೯೬ | ೧,೨೫,೦೦೦ | ೦,೩೪,೭೩೮ | ೧,೯೩,೩೧೪ | ೧,೦೪,೫೯೭ |
| ೧೯೯೬ - ೯೭ | ೧,೦೦,೦೦೦ | ೦,೨೭,೩೪೮ | ೨,೧೬,೦೬೫ | ೨,೧೨,೩೪೬ |
| ೧೯೯೭ - ೯೮ | ೧,೦೦,೦೦೦ | ೦,೪೧,೩೧೮ | ೧,೪೫,೦೩೭ | ೧,೩೮,೯೫೯ |
| ೧೯೯೮ - ೯೯ | ೦,೯೪,೪೩೮ | ೦,೨೯,೩೯೨ | ೧,೨೯,೮೦೬ | ೧,೦೪,೬೨೪ |
| | **೫,೦೫,೭೯೪** | **೧,೪೪,೫೫೦** | **೮,೦೬,೦೫೨** | **೬,೫೧,೪೩೬** |

**ಕೋಷ್ಟಕ ೯: ಹಿರೇಹೆಗ್ಡಾಳ್ ಗ್ರಾಮ ಪಂಚಾಯತ್ ಶಾಲಾ ದಾಖಲಾತಿ**

**೧. ಹಿರೇಹೆಗ್ಡಾಳ್**

| ತರಗತಿ | ಒಟ್ಟು | | ಪರಿಶಿಷ್ಟ ಜಾತಿ | | ಪರಿಶಿಷ್ಟ ಪಂಗಡ | |
|---|---|---|---|---|---|---|
| | ಹುಡುಗರು | ಹುಡುಗಿಯರು | ಹುಡುಗರು | ಹುಡುಗಿಯರು | ಹುಡುಗರು | ಹುಡುಗಿಯರು |
| I | ೦೨೮ | ೦೨೪ | ೦೪ | ೦೮ | ೦೪ | ೦೩ |
| II | ೦೨೯ | ೦೨೯ | ೧೧ | ೦೫ | ೦೧ | ೦೩ |
| III | ೦೨೬ | ೦೧೬ | ೦೨ | ೦೬ | ೦೩ | ೦೨ |
| IV | ೦೩೪ | ೦೩೦ | ೦೭ | ೧೧ | ೦೧ | ೦೨ |
| V | ೦೧೫ | ೦೧೮ | ೦೨ | ೦೪ | ೦೧ | ೦೨ |
| VI | ೦೪೦ | ೦೨೪ | ೧೪ | ೦೬ | ೦೩ | ೦೩ |
| VII | ೦೨೯ | ೦೧೩ | ೦೨ | ೦೫ | ೦೨ | ೦೩ |
| | **೨೦೧** | **೧೫೪** | **೪೨** | **೪೫** | **೧೫** | **೧೮** |
| VII | ೦೩೦ | ೦೧೮ | ೦೧ | ೦೦ | ೦೧ | ೦೦ |
| IX | ೦೧೬ | ೦೧೫ | ೦೨ | ೦೨ | ೦೦ | ೦೧ |
| X | ೦೧೩ | ೦೧೦ | ೦೧ | ೦೦ | ೦೦ | ೦೦ |
| | **೦೫೯** | **೦೪೨** | **೦೪** | **೦೨** | **೦೧** | **೦೧** |

**ಕೋಷ್ಟಕ ೯ಎ: ೨. ಸಾಸಲವಾಡ ಗ್ರಾಮ**

| ತರಗತಿ | ಒಟ್ಟು | | ಪರಿಶಿಷ್ಟ ಜಾತಿ | | ಪರಿಶಿಷ್ಟ ಪಂಗಡ | |
|---|---|---|---|---|---|---|
| | ಹುಡುಗರು | ಹುಡುಗಿಯರು | ಹುಡುಗರು | ಹುಡುಗಿಯರು | ಹುಡುಗರು | ಹುಡುಗಿಯರು |
| I | ೦೧೦ | ೦೨೭ | ೦೨ | ೦೧ | – | – |
| II | ೦೨೫ | ೦೩೭ | ೦೪ | ೦೫ | – | – |
| III | ೦೧೩ | ೦೧೭ | ೦೦ | ೦೨ | – | – |
| IV | ೦೧೬ | ೦೧೯ | ೦೦ | ೦೧ | – | – |
| V | ೦೨೪ | ೦೧೭ | ೦೫ | ೦೧ | – | – |
| VI | ೦೧೪ | ೦೨೪ | ೦೧ | ೦೧ | – | – |
| VII | ೦೧೬ | ೦೧೩ | ೦೨ | ೦೧ | – | – |
| | **೧೨೨** | **೧೫೧** | **೧೪** | **೧೧** | **–** | **–** |

**೩. ಸಾಣೇಹಳ್ಳಿ**

| | | | | | | |
|---|---|---|---|---|---|---|
| I | – | – | ೦೭ | ೦೪ | – | – |
| II | – | – | ೦೪ | ೦೪ | – | – |
| III | – | – | ೦೪ | ೦೨ | – | – |
| IV | – | – | ೦೪ | ೦೩ | – | – |
| V | – | – | ೦೨ | ೦೩ | – | – |
| | **–** | **–** | **೨೦** | **೧೭** | **–** | **–** |

**ಕೋಷ್ಟಕ ೯ಬಿ: ೪. ಬೊಪ್ಪಲಾಪುರ ಗ್ರಾಮ**

| ತರಗತಿ | ಒಟ್ಟು | | ಪರಿಶಿಷ್ಟ ಜಾತಿ | | ಪರಿಶಿಷ್ಟ ಪಂಗಡ | |
|---|---|---|---|---|---|---|
| | ಹುಡುಗರು | ಹುಡುಗಿಯರು | ಹುಡುಗರು | ಹುಡುಗಿಯರು | ಹುಡುಗರು | ಹುಡುಗಿಯರು |
| I | ೦೭ | ೦೯ | – | – | ೦ | ೦ |
| II | ೧೩ | ೧೫ | – | – | ೨ | ೪ |
| III | ೧೧ | ೧೧ | – | – | ೨ | ೦ |
| IV | ೧೦ | ೦೮ | – | ೧ | ೧ | ೨ |
| V | ೧೧ | ೦೬ | – | – | ೪ | ೨ |
| VI | ೦೩ | ೦೯ | – | – | ೦ | ೧ |

| | | | | | | |
|---|---|---|---|---|---|---|
| | ೫೪ | ೫೯ | – | ೧ | ೯ | ೯ |

**ಕೋಷ್ಟಕ ೧೦: ಕೂಡ್ಲಿಗಿ ತಾಲ್ಲೂಕು ಕೆರೆಗಳ ವಿವರ**

| ಕ್ರ. ಸಂ. | ಕೆರೆಗಳು | ನೀರು ಆವೃತ ಪ್ರದೇಶ ಮುಳುಗಡೆ ಹೆಕ್ಟೇರುಗಳಲ್ಲಿ ( ಇರಬೇಕಾದದ್ದು) | ಇರುವುದು | ನಿರ್ಮಾಣ ವರ್ಷ | ಖರ್ಚು (ಲಕ್ಷಗಳಲ್ಲಿ) |
|---|---|---|---|---|---|
| ೦೧.. | ಕೊಟ್ಟೂರು | ೦,೨೬೬.೧೬ | ೦,೩೦೪.೧೦ | ೧೯೮೮ | - |
| ೦೨. | ಗಂಡಬೊಮ್ಮನ ಹಳ್ಳಿ | ೦,೧೭೮.೦೦ | ೨,೨೭೪.೦೦ | ೧೯೭೦ | ೦೭೧.೦೦ |
| ೦೩. | ಇಮ್ಮಡಾಪುರ | ೫,೫೪೫.೦೦ | ೦,೪೦೫.೦೦ | ೧೯೬೮ | ೨೭೦.೦೦ |
| ೦೪. | ತಿಮ್ಮಲಾಪುರ | ೦,೧೧೪.೬೪ | ೦,೦೬೨.೦೦ | ಹಳೇಟ್ಯಾಂಕ್ | - |
| ೦೫. | ಗುಡೇಕೋಟೆ | ೦,೦೫೪.೯೪ | ೦,೦೭೫.೦೦ | ೧೯೮೧ | - |
| ೦೬. | ಹುಲಿಕೆರೆ | ೦,೦೫೯.೫೬ | ೦,೦೮೪.೦೦ | ಹಳೇಟ್ಯಾಂಕ್ | - |
| ೦೭. | ಜಮ್ಮೊಬನಹಳ್ಳಿ | ೦,೦೨೦.೧೬ | ೦,೦೫೫.೦೦ | ೧೯೬೫ | ೦೧೦.೨೦ |
| ೦೮. | ಹೊಸಳ್ಳಿ | ೦,೦೩೫.೩೪ | ೦,೦೬೦.೦೦ | ಹಳೇಟ್ಯಾಂಕ್ | - |
| ೦೯. | ಸರ್ವೋದಯ ಟ್ಯಾಂಕ್ | ೦,೦೧೪.೯೫ | ೦,೦೯೬.೦೦ | ೧೯೭೦ | ೦೦೨.೧೨ |
| ೧೦. | ಕೂಡ್ಲಿಗಿ ದೊಡ್ಡಕೆರೆ | ೦,೦೯೨.೫೩ | ೦,೧೦೯.೦೦ | ಹಳೇಟ್ಯಾಂಕ್ | - |
| ೧೧. | ಚೌಡಾಪುರ | ೦,೦೭೮.೭೮ | ೦,೦೬೩.೦೦ | ಹಳೇಟ್ಯಾಂಕ್ | - |
| ೧೨. | ಹಿರೇಹೆಗ್ಡಾಳ್ | ೦,೧೭೫.೭೭ | ೦,೧೨೧.೦೦ | ಹಳೇಟ್ಯಾಂಕ್ | - |
| ೧೩. | ಸಾಸಲವಾಡ | ೦,೦೭೪.೯೭ | ೦,೧೧೮.೦೦ | ಹಳೇಟ್ಯಾಂಕ್ | - |
| ೧೪. | ರಾಯಪುರ | ೦,೦೭೦.೦೦ | ೦,೦೮೮.೦೦ | ಹಳೇಟ್ಯಾಂಕ್ | - |
| ೧೫. | ಉಜ್ಜಿನಿ | ೦,೧೫೮.೯೫ | ೦,೦೭೪ | ಹಳೇಟ್ಯಾಂಕ್ | - |
| ೧೬. | ರಂಗಾಪುರ | ೦,೧೮೩.೧೧ | ೦,೦೭೯.೦೦ | ಹಳೇಟ್ಯಾಂಕ್ | - |
| ೧೭. | ದೇವಲಾಪುರ | ೦,೧೨೦.೭೭ | ೦,೧೧೮ | ಹಳೇಟ್ಯಾಂಕ್ | - |
| ೧೮. | ಸುಂಕದಕಲ್ಲು | ೦,೧೯೫.೦೦ | ೦,೦೯೨.೦೦ | ಹಳೇಟ್ಯಾಂಕ್ | - |
| ೧೯. | ಗಂಡುಮುನುಗು | ೦,೧೧೯.೩೮ | ೦,೧೦೧.೦೦ | ಹಳೇಟ್ಯಾಂಕ್ | - |
| ೨೦. | ಜಂಗ ಮಸೋವೇನಹಳ್ಳಿ | ೦,೦೩೫.೪೭ | ೦,೦೫೦.೦೦ | ಹಳೇಟ್ಯಾಂಕ್ | - |
| ೨೧. | ಲೊಟ್ಟಿನಕೆರೆ | ೦,೦೨೧.೨೯ | ೦,೦೭೯.೦೦ | ಹಳೇಟ್ಯಾಂಕ್ | - |
| ೨೨. | ಅಪ್ಪಯನಹಳ್ಳಿ | ೦,೦೩೯.೦೦ | ೦,೦೪೦೫.೦೦ | ೧೯೮೧ | ೦೩೦.೦ |
| ೨೩. | ಟಿ. ಬಸಾಪುರ ಟ್ಯಾಂಕ್ ೧ | ೦,೦೩೮ | ೦,೨೩೦.೦೦ | ೧೯೭೯ | ೦೦೧.೪ |
| ೨೪. | ಟಿ. ಬಸಾಪುರ ಟ್ಯಾಂಕ್ ೨ | ೦,೦೦೬.೩೨ | ೦,೦೪೮.೦೦ | - | - |

| | | | | | |
|---|---|---|---|---|---|
| ೧೫. | ಹುರುಳೀಹಾಳ್ | ೦,೦೭೮ | ೦,೩೭೮.೦೦ | ೧೯೮೧ | ೦೬೭.೦ |
| | **ಒಟ್ಟು** | **೧,೭೮೫.೬೪** | **೩,೫೧೧.೪೦** | | |

# ಪರಾಮರ್ಶನ ಗ್ರಂಥಗಳು


೦೧. ಅಲ್‌ಮಂಡ್ ಜಿ. ಎ ಮತ್ತು ಕೋಲ್‌ಮನ್ ಜೆ. ಎಸ್. ಪಾಲಿಟಿಕ್ಸ್ ಆಫ್ ದಿ ಡೆವಲಪಿಂಗ ಏರಿಯಾಸ್, ಪ್ರಿನ್ಸ್‌ಟನ್ ಯೂನಿವರ್ಸಿಟಿ ಪ್ರೆಸ್, ೧೯೬೦.

೦೨. ಬ್ಯಾನರ್ಜಿ ಎ. ಎಂ. ಮತ್ತು ಚಂದ್ರಶೇಖರನ್ ಕೆ. ಎ. (ಸಂಪಾದನ) ರಿನಿವಿಂಗ್ ಗವರ್ನೆನ್ಸ್ : ಇಶ್ಯೂಸ್ ಆಂಡ್ ಆಪ್ಸನ್ಸ್, ನ್ಯೂಡೆಲ್ಲಿ : ಟಾಟಾ ಮ್ಯಾಕ್‌ಗ್ರೊಹಿರ್ ಪಬ್ಲಿಷಿಂಗ್ ಕಂಪೆನಿ ಲಿಮಿಟೆಡ್, ೧೯೯೬.

೦೩. ಕೋರ್ನಿ ಎಮ್. ಎನ್. (ಸಂಪಾದನ), ಪುಟ್ಟಿಂಗ್ ಪೀಪಲ್ ಪರ್ಸ್ಟ್ : ಸೋಶಿಯಾಲಜಿ ಕಲ್ ವೆರಿಯೆಬಲ್ಸ್ ಇನ್ ರೂರಲ್ ಡೆವಲಪ್‌ಮೆಂಟ್ ಪ್ರಾಜೆಕ್ಟ್, ನ್ಯೂಯಾರ್ಕ್ : ಆಕ್ಸ್‌ಫರ್ಡ್ ಯುನಿವರ್ಸಿಟಿ ಪ್ರೆಸ್, ೧೯೮೫.

೦೪. ಎಸ್. ಸಿ. ದುಬೆ, ಅಂಡರ್ ಸ್ಟೇಡಿಂಗ್ ಚೇಂಜ್ ಆಂತ್ರಾಪಲಾಜಿಕಲ್ ಆಂಡ್ ಸೋಶಿಯಾಲಜಿಕಲ್ ಪರ್ಸ್‌ಪೆಕ್ಟಿವ್, ನ್ಯೂಡೆಲ್ಲಿ ವಿಕಾಸ್ ಪಬ್ಲಿಷಿಂಗ್ ಹೌಸ್, ೧೯೯೨.

೦೫. ಡೇವಿಡ್ ಈಸ್ಟನ್, ದ ಪಾಲಿಟಿಕಲ್ ಸಿಸ್ಟಮ್, ನ್ಯೂಯಾರ್ಕ್ : ವಿಲೆವ್ ಎಂಡ್ ಸನ್ಸ್, ೧೯೫೩.

೦೬. ರಾಬರ್ಟ್ ಹಾರ್ಡ್‌ಗ್ರೇವ್ ಎಲ್, ಇಂಡಿಯಾ-ಗವರ್ನಮೆಂಟ್ ಎಂಡ್ ಪಾಲಿಟಿಕ್ಸ್ ಇನ್ ಎ ಡೆವಲಪಿಂಗ್ ನೇಶನ್, ಡೆಲ್ಲಿ : ಫ್ರೀಮನ್ ಬುಕ್ ಕಂಪೆನಿ, ೧೯೭೯.

೦೭. ಜಯರಾಂ ಮತ್ತು ಸತೀಶ್ ಸಬರ್ ವಾಲ್ (ಸಂಪಾದನ), ಸೋಶಿಯಲ್ ಕಾನ್‌ಫ್ಲಿಕ್ಟ್, ಡೆಲ್ಲಿ : ಆಕ್ಸ್‌ಫರ್ಡ್ ಯುನಿವರ್ಸಿಟಿ ಪ್ರೆಸ್, ೧೯೯೬.

೦೮. ಅತುಲ್ ಕೊಹ್ಲಿ, ಡೆಮಾಕ್ರಸಿ ಎಂಡ್ ಡಿಸ್‌ಕಂಟೆಂಟ್ : ಇಂಡಿಯನ್ ಗ್ರೋವಿಂಗ್ ಕ್ರೈಸಿಸ್ ಆಫ್ ಗವರ್ನೆಬಿಲಿಟಿ, ಕೇಂಬ್ರಿಜ್ : ಯುನಿವರ್ಸಿಟಿ ಪ್ರೆಸ್, ೧೯೯೧.

೦೯. ರಜನಿ ಕೊಥಾರಿ, ಸ್ಟೇಟ್ ಎಗೇಯಿನ್‌ಸ್ಟ್ ಡೆಮಾಕ್ರಸಿ : ಇನ್ ಸರ್ಚ್ ಆಫ್ ಹ್ಯೂಮನ್ ಗವರ್ನೆಸ್, ಡೆಲ್ಲಿ : ಅಜಂತಾ ಪಬ್ಲಿಕೇಷನ್ಸ್, ೧೯೮೮.

೧೦. ಇಕ್ಬಾಲ್ ನಾರಾಯಣ್ (ಸಂಪಾದನ), ಸ್ಟೇಟ್ ಪಾಲಿಟಿಕ್ಸ್ ಇನ್ ಇಂಡಿಯಾ, ಮೀರತ್: ಮೀನಾಕ್ಷಿ ಪ್ರಕಾಶನ, ೧೯೬೫.

೧೧. ಇಕ್ಬಾಲ್ ನಾರಾಯಣ್, ಪಾಲಿಟಿಕಲ್ ಡೈಮೆನ್ಶನ್ಸ್ ಆಫ್ ಡೆವಲಪ್‌ಮೆಂಟ್, ಜೈಪುರ, ರಾವತ್ ಪಬ್ಲಿಕೇಷನ್ಸ್, ೧೯೯೪.

೧೨. ಜಾರ್ಜ್ ಮ್ಯಾಥ್ಯೂ, ಪಂಚಾಯತ್ ರಾಜ್ ಇನ್ ಕರ್ನಾಟಕ ಟುಡೆ : ಇಟ್ಸ್ ನೇಶನಲ್ಸ್ ಡೈಮೆನ್‌ಶನ್, ನ್ಯೂಡೆಲ್ಲಿ : ಕನ್ಸೆಪ್ಟ್ ಪಬ್ಲಿಷಿಂಗ್ ಹೌಸ್, ೧೯೮೬.

೧೩. ಜಾರ್ಜ್ ಮ್ಯಾಥ್ಯೂ, ಪಂಚಾಯತಿ ರಾಜ್ : ಫ್ರಮ್ ಲೆಜಿಸ್ಲೇಶನ್ ಟು ಮೂವ್‌ಮೆಂಟ್, ನ್ಯೂಡೆಲ್ಲಿ : ಕನ್ಸೆಪ್ಟ್ ಪಬ್ಲಿಷಿಂಗ್ ಕಂಪೆನಿ, ೧೯೯೬.

೧೪. ಅಬ್ದುಲ್ ಅಜೀಜ್, ಡಿಸೆಂಟ್ರಲೈಸ್ಡ್ ಪ್ಲಾನಿಂಗ್ : ದಿ ಕರ್ನಾಟಕ ಎಕ್ಸ್‌ಪೀರಿಯನ್ಸ್, ನ್ಯೂಡೆಲ್ಲಿ : ಸೇಜ್ ಪಬ್ಲಿಕೇಷನ್ಸ್, ೧೯೯೩.

೧೫. ಅಬ್ದುಲ್ ಅಜೀಜ್, ಆಂಡ್ ಡೇವಿಡ್ ಆರ್ನಾಲ್ಡ್ (ಸಂಪಾದನ), ಡಿಸೆಂಟ್ರಲೈಸ್ಡ್ ಗವರ್ನೆನ್ಸ್ ಇನ್ ಏಶಿಯನ್ ಕಂಟ್ರೀಸ್, ನ್ಯೂಡೆಲ್ಲಿ : ಸೇಜ್ ಪಬ್ಲಿಷರ್ಸ್, ೧೯೯೬.

೧೬. ಪಿ. ಎನ್. ಶಂಕರನ್, "ಪಂಚಾಯತ್ ರಾಜ್ : ಇನ್‌ಸ್ಟಿಟ್ಯುಶನಲ್ ಡೈಮೆನ್‌ಶನ್ಸ್ ಆಂಡ್ ಡಿಫೀಶಿಯನ್ಸಸ್", ಕುರುಕ್ಷೇತ್ರ, ಸಂಚಿಕೆ ೪೫, ಸಂಖ್ಯೆ ೯, ಜೂನ್ ೧೯೯೭.

೧೭. ಒ. ಪಿ. ಬೊಹ್ರ, "ಡಿಸೆಂಟ್ರಲೈಸೇಷನ್ ಆಂಡ್ ಡಿವಲೂಷನ್ ಆಫ್ ಪವರ್ಸ್ ಆಂಡ್ ಫಂಕ್ಷನ್ಸ್ ಟು ಪಂಚಾಯತ್ಸ್", ಜರ್ನಲ್ ಆಫ್ ರೂರಲ್ ಡೆವಲಪ್ ಮೆಂಟ್, ಸಂಚಿಕೆ ೧೯, ಸಂ. ೨, ಎಪ್ರಿಲ್ - ಜೂನ್ ೨೦೦೦.

೧೮. ಉಮಾಪತಿ ಎಮ್, ಲೋಕಲ್ ಸೇಲ್ಸ್ ಗವರ್ನಮೆಂಟ್ ಇನ್ ಕರ್ನಾಟಕ, ಮೈಸೂರು ಯುನಿವರ್ಸಿಟಿ, ೧೯೮೮.
೧೯. ಡಾ. ಮಹಿಪಾಲ್, "ಪಂಚಾಯತ್ಸ್ ಆಂಡ್ ಹ್ಯೂಮನ್ ರೈಟ್ಸ್", ಕುರುಕ್ಷೇತ್ರ ಆಗಸ್ಟ್ ೨೦೦೦.
೨೦. ಎಂ. ಎಸ್. ಜಾನ್ ಆಂಡ್ ಜೋಸ್ ಚಾತುಕುಲಂ, "ಡಿಸೆಂಟ್ರಲೈಸ್ಡ್ ಪ್ಲಾನಿಂಗ್ ಆಂಡ್ ಪಂಚಾಯತ್ಸ್ ಇನ್ ಕೇರಳ", ಕುರುಕ್ಷೇತ್ರ, ಸಂಚಿಕೆ ೪೭, ಸಂಖ್ಯೆ ೧೨, ಸೆಪ್ಟಂಟರ್ ೧೯೯೯.
೨೧. ಬಿ. ಎಸ್. ಭಾರ್ಗವ ಮತ್ತು ಜೋಸ್ ಸಿ. ರಾಫೆಲ್, "ವರ್ಕಿಂಗ್ ಆಫ್ ಗ್ರಾಮಸಭಾಸ್ ಇನ್ ಕರ್ನಾಟಕ : ಎ ಸ್ಟಡಿ ಎಟ್ ಮೈಕ್ರೊ ಲೆವೆಲ್", ಜರ್ನಲ್ ಆಫ್ ರೂರಲ್ ಡೆವಲಪ್‌ಮೆಂಟ್, ಸಂಚಿಕೆ ೧೩, ಏಪ್ರಿಲ್‌ಜೂನ್, ೧೯೯೪.
೨೨. ಜಿ. ವಿ. ಜೋಷಿ, "ಗ್ರಾಮ ಸಭಾ ಇನ್ ಕರ್ನಾಟಕ: ಎ ನಾನ್ ಸ್ಟಾರ್ಟರ್", ಕುರುಕ್ಷೇತ್ರ, ಏಪ್ರಿಲ್ ೧೯೯೫.
೨೩. ಲೂಸಿಯನ್ ಡಬ್ಲ್ಯೂ ಪಾಯ್, ಆಸ್‌ಪೆಕ್ಟ್ಸ್ ಆಫ್ ಪಾಲಿಟಿಕಲ್ ಡೆವಲಪ್‌ಮೆಂಟ್, ನ್ಯೂಡೆಲ್ಲಿ : ಅಮೆರಿಂಡ್ ಪಬ್ಲಿಷಿಂಗ್ ಕಂಪೆನಿ, ೧೯೭೨.
೨೪. ಪಳನಿತುರೈ ಜಿ. ಪಾರ್ಟಿಸಿಪೇಶನ್ ಇನ್ ದ ಡೆವಲಪ್‌ಮೆಂಟ್ ಪ್ರಾಸೆಸ್, ಗ್ರಾಸ್‌ರೂಟ್ ಎಕ್ಸ್‌ಪೀರಿಯನ್ಸ್‌ಸ್, ನ್ಯೂಡೆಲ್ಲಿ : ಕನಿಷ್ಕ, ೧೯೭೨.
೨೫. ಪಳನಿತುರೈ ಜಿ. ಗ್ರಾಸ್‌ರೂಟ್ ಡೆಮಾಕ್ರಸಿ ಇನ್ ಇಂಡಿಯನ್ ಸೊಸೈಟಿ, ನ್ಯೂಡೆಲ್ಲಿ : ಕಾನ್ಸೆಪ್ಟ್ ಪಬ್ಲಿಷಿಂಗ್ ಕಂಪೆನಿ, ೨೦೦೦.
೨೬. ಟಿ. ಆರ್. ಚಂದ್ರಶೇಖರ್ (ಸಂಪಾದನ), ವಿಕೇಂದ್ರಿಕರಣ : ತತ್ವ ಮತ್ತು ಆಚರಣೆ, ಕೆ. ವಿ. ತಿರುಪಾಲಪ್ಪ ದತ್ತಿ ವಿಚಾರ ಸಂಕಿರಣ, ವಿದ್ಯಾರಣ್ಯ : ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦.
೨೭. ಎ. ಶ್ರೀಧರ, ಕರ್ನಾಟಕದಲ್ಲಿ ಪಂಚಾಯತ್ ರಾಜ್ ಕಾಯ್ದೆಗಳು, ವಿದ್ಯಾರಣ್ಯ : ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦.
೨೮. ಎ. ಶ್ರೀಧರ, "ಗ್ರಾಮಸಭೆ : ತತ್ತ್ವ ಮತ್ತು ಆಚರಣೆ", ಲೇಖನ, ಟಿ. ಆರ್. ಚಂದ್ರಶೇಖರ್ (ಸಂಪಾದನ), ವಿಕೇಂದ್ರಿಕರಣ : ತತ್ವ ಮತ್ತು ಆಚರಣೆ, ವಿದ್ಯಾರಣ್ಯ : ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦.
೨೯. ಕರ್ನಾಟಕ ಜಿಲ್ಲಾ ಪರಿಷತ್‌ಗಳು, ತಾಲ್ಲೂಕು ಪಂಚಾಯತಿ ಸಮಿತಿಗಳು, ಮಂಡಲ ಪಂಚಾಯತಿಗಳು ಮತ್ತು ನ್ಯಾಯ ಪಂಚಾಯತಿಗಳ ಕಾಯ್ದೆ, ೧೯೮೩, ಕರ್ನಾಟಕ ಸರಕಾರ ಬೆಂಗಳೂರು.
೩೦. ಕರ್ನಾಟಕ ಪಂಚಾಯತ್ ರಾಜ್ ಕಾಯ್ದೆ ೧೯೯೩, ಕರ್ನಾಟಕ ಸರಕಾರ, ಬೆಂಗಳೂರು.
೩೧. ಕರ್ನಾಟಕ ಪಂಚಾಯತ್ ರಾಜ್ ಕಾಯ್ದೆ ೧೯೯೩, ತಜ್ಞರ ಸಮಿತಿಯ ವರತಿ, ೧೯೯೬, ಕರ್ನಾಟಕ ಸರಕಾರ, ಬೆಂಗಳೂರು.
೩೨. ಯೋಗೇಂದ್ರ ಸಿಂಗ್, "ಸೋಶಿಯಲ್ ಸ್ಟ್ರಕ್ಚರ್ ಆಂಡ್ ವಿಲೇಜ್ ಪಂಚಾಯತ್ಸ್", ಲೇಖನ ಎ. ಆರ್. ದೇಸಾಯಿಯವರ ರೂರಲ್ ಸೋಶಿಯಲಾಜಿ ಇನ್ ಇಂಡಿಯಾ.
೩೩. ಯೋಗೇಂದ್ರ ಸಿಂಗ್, ಮಾಡರ್ನೈಸೇಶನ್ ಆಫ್ ಇಂಡಿಯನ್ ಟ್ರೆಡಿಶನ್, ಜೈಪುರ, ರಾವತ್ ಪಬ್ಲಿಕೇಷನ್ಸ್, ೧೯೯೬.
೩೪. ಎಂ. ವೈ. ಘೋರ್ಪಡೆ, "ವಿಕೇಂದ್ರಿಕರಣ : ತತ್ವ ಮತ್ತು ಆಚರಣೆ ವಿಚಾರ ಸಂಕಿರಣದ ಆಶಯ ಭಾಷಣ", ಟಿ. ಆರ್. ಚಂದ್ರಶೇಖರ (ಸಂಪಾದನ), ವಿಕೇಂದ್ರಿಕರಣ : ತತ್ವ ಮತ್ತು ಆಚರಣೆ, ವಿದ್ಯಾರಣ್ಯ : ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦.
೩೫. ಡಿ. ಎಲ್. ಸೇತ್ ಆಂಡ್ ಆಶಿಶ್‌ನಂದಿ (ಸಂಪಾದನ) ಮಲ್ಟಿವರ್ಸ್ ಆಫ್ ಡೆಮಾಕ್ರಸಿ, ನ್ಯೂಡೆಲ್ಲಿ : ಸೇಜ್ ಪಬ್ಲಿಕೇಷನ್ಸ್, ೧೯೯೬.
೩೬. ಡೈರೆಕ್ಟರೇಟ್ ಆಫ್ ಸೆನ್ಸಸ್ ಆಪರೇಷನ್, ಡಿಸ್ಟ್ರಿಕ್ಟ್ ಸೆನ್ಸಸ್ ಹ್ಯಾಂಡ್ ಬುಕ್ ಬಳ್ಳಾರಿ ಡಿಸ್ಟ್ರಿಕ್ಟ್, ಬೆಂಗಳೂರು : ಗವರ್ನಮೆಂಟ್ ಆಫ್ ಕರ್ನಾಟಕ, ೧೯೯೧.
೩೭. ರೆನೆಮಾ ಮಜೀದ್, "ಪಾರ್ಟಿಸಿಪೇಶನ್" ಲೇಖನ, ವುಲ್ಫ್‌ಗಾಂಗ್, ಮತ್ತು ಸಾಶ್ (ಸಂಪಾದನ), ದ ಡೆವಲಪ್‌ಮೆಂಟ್ ಡಿಕ್ಷನರಿ : ಎ ಗೈಡ್ ಟು ನಾಲೆಡ್ಜ್ ಯ್ಯಾಸ್ ಪವರ್, ಓರಿಯೆಂಟ್ ಲಾಂಗ್ ಮನ್, ೧೯೯೭.
೩೮. ಚೇಮಾ, ರೊಂಡಿನೆಲ್ಲಿ ಮತ್ತು ನೆಲ್ಲಿಸ್, ಡಿಸೆಂಟ್ರಲೈಸೇಶನ್ ಇನ್ ಡೆವಲಪಿಂಗ್ ಕಂಟ್ರೀಸ್ ವಾಷಿಂಗ್ಟನ್, ವರ್ಲ್ಡ ಬ್ಯಾಂಕ್, ೧೯೮೪.
೩೯. ಮಹೂದ್ ಫಿಲಿಪ್, ಲೋಕಲ್ ಗವರ್ನಮೆಂಟ್ ಇನ್ ದ ಥರ್ಲ್ಡ್ ವರ್ಲ್ಡ್, ನ್ಯೂಯಾರ್ಕ್, ನಿಲೆ, ೧೯೮೩.

***